REGISTERED NO. M. 1393.

# ಕಂಠೀರವ

ಅರ್ಧಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

# KANTEERAVA, MANGALORE

**The only Nationalist Kanarese BI-WEEKLY with the largest circulation.**

ಸಂಪುಟ ೧೮ | ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೧೯ನೇ ಶುಕ್ರವಾರ | ಸಂಚಿಕೆ ೨೪.

VOL. XVIII | MANGALORE, FRIDAY, JUNE 19, 1936 | NO. 24.

**BANK with the**

**UDIPI BANK Ltd.**

(KALSANK, UDIPI S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

**ESTD: 1925**

ESTD:—1906.

THE

**Canara Banking Corporation, Udipi, Ltd.**

THE FIRST INDIGENOUS & COSMOPOLITAN BANK

OF

S. K. DISTRICT.

| | |
|---|---|
| Capital: Authorised, Issued and Subscribed | Rs. 3,50,000-0-0 |
| Paid up | Rs. 2,88,320-0-0 |
| Reserve and other funds | Rs. 3,70,694-0-0 |

16—5—1936.

**Fixed deposit rates up to 5% p. a.**

**THE DECCAN CO.,**

Cantonment, :: MANGALORE,

*Agents for*

"Mohini Coffee Powder"

and

"Kelagur Tea"

**ಡೆಕ್ಕಾನ್ ಕಂಪೆನಿ**

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

**ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.**

— ಸಣ್ಣಪರ —

**ಸುಬೋಧಶತಕ**

ಟೆಕ್ಸ್‌ಟ ಬುಕ್ ಕಮಿಟಿಯಲ್ಲಿ

ಮಂಜೂರಾದ

ಪಾಠಶಾಲಾ—ಪಠ್ಯಪುಸ್ತಕ.

ತಿದ್ದಿ ಬೆಳೆಸಿದ 2ನೇ ಆವೃತ್ತಿ-ಬೆಲೆ: 0-2-6.

ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು.

ಒಂದಾಣೆಯ ಅಂಚೆಚೀಟನ್ನು ನಮಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—

**ವಿಕ್ಟೋರಿಯಾ ಮುದ್ರಾಶಾಲೆ,**

ಬಂಟ್ವಾಳ, ದ.ಕ.

12, 8-5.

**Asiatic Government Security**

**LIFE ASSURANCE CO., LTD.,**

**Established 1913.** **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

*For Prospectus and Agency terms apply to:*

**Head Office: "Asiatic Buildings" Bangalore City,**

OR

to any of the Company's undernoted Branches:

| | |
|---|---|
| **Madras Branch:** | **187, Mount Road.** |
| **Bombay Branch:** | **Hornby Road, Fort.** |
| **Calcutta Branch:** | **15, Clive Street.** |

**V. RANGASWAMI, B. A., B. L.,**

*General Manager*

ಶ್ರೇಷ್ಠತರಗತಿಯೇ ಅಧಿಕವ್ಯಾಪಾರದ ಲಕ್ಷಣ.

ಅದಕ್ಕಾಗಿಯೇ

**"ರಾಜಾ ಸೈಕಲ್"**

ಸಾಹಿತ್ಯಗಳು, ರಚನೆ ಮತ್ತು ಸೊಬಗು ಇವುಗಳಲ್ಲಿ ಅತ್ಯುತ್ತಮವಾದುದೆಲ್ಲವೂ ಇದರಲ್ಲಿ ಇದೆ.



ಸ್ವಾಧಿಷ್ಠರು:—**ದಿ ಸಿಟಿ ಸೈಕಲ್ ಕೋ., ಮಂಗಳೂರು.**

ಹೆಚ್ಚು ಮಾಹಿತಿಗೆ:—

ಸೋಲ್ ಕನ್ಸೆಷನರೀಸ್‌ಯವರಿಗೆ ಬರೆಯಿರಿ.

**ರಾಜಾ ಸೈಕಲ್ ಅಂಡ್ ಮೋಟಾರ್ ವರ್ಕ್ಸ್,**

"ರಾಜಾ ಬಿಲ್ಡಿಂಗ್ಸ್", ನರಸಿಂಹರಾಜಾ ರೋಡ್,

ಬೆಂಗಳೂರು ಸಿಟಿ,

ದಕ್ಷಿಣ ಇಂಡಿಯ.

## WANTED

WANTED candidates for Telegraph and Station Master Class. Allowance Rs. 28. Uniform, passage and quarter free. Service essential. Rules and entrance form on annas eight. Director, Royal Telegraph and Rly. Duties College.

6, 29-5. Bombay No. 14.

## Jubilee Stamps.

5 different from 5 different colonies for 5 as., 25 different from at least 10 different colonies Rs. 2—8—0. Grand collection of 100 different, used and unused, including many scarce stamps and high values, Rs. 25/—

**Special Offer:**— Commemorative packet of 30 different large pictorial stamps of Centenary, Quiniversary, Jubilee and Charity issues,—a packet full of historic and artistic interest. Included in this packet are 4 unused Russia Romanoff 1913 issue (Nicholas II and Katherine II) and Belgium, Queen Astrid mourning stamp. **Price Re. 1 only.**

Remit by M. O. Write your order on coupon giving name and address clearly. This is the safest and economical method of ordering.

Abyssinia and Jubilee lists free to all applicants.

**IMPERIAL STAMP Co., Ltd., ALLAHABAD.**

4, 5-6.

### ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣದಾಸೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಯಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬೀರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ [redacted] ಕೊಂಡು ಅಜ್ಞಾನವನ್ನುಂಟುಮಾಡುವುದಲ್ಲದೆ ಕ್ಯಾನ್ಸರವನ್ನು ಬಂಧಿಸುವುದು. ಮೂಗಿನಿಂದ ಸೀನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳನ್ನು ಕುಂಠಿತಗೊಳಿಸುವುದು. ಆದುದರಿಂದ, ಅಪ್ಪರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರ್‌ಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

## FREE,—ಮುಫತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿಸ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ ಕಥೆ ಪುಸ್ತಕ, **ನಾಟಕ, ಕೀರ್ತನೆ** ಲಾ ಪುಸ್ತಕಗಳು ಮತ್ತು **ರಾಮಾಯಣ, ಭಾಗವತ, ಭಾರತ,** ವಗೈರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ **ಕ್ಯಾಟಲಾಗಿಗೆ** ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

**ಶ್ರೀ ಸರಸ್ವತೀ ಭಂಡಾರ,**

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಅವಿನ್ಯೂ ರೋಡ್, ಬೆಂಗಳೂರು, ಸಿಟಿ.


# ಪಿಡಿಲ್‌ನಿಂದ ಕರ್ನಾಟಕಸಂಗೀತಕ್ಕೆ ಅನುಕೂಲವೆ? ಅನನುಕೂಲವೆ?

(ಮುಂದುವರಿಸಿದುದು)

ಈ ವಾದ್ಯದಲ್ಲಿ ಸಾಹಿತ್ಯ ವಿನಹ ಬಾಯಿ ಹಾಡುಗಾರಿಕೆಯನ್ನು ಅನುಕರಿಸಬಹುದು. ಇದರಲ್ಲಿ ಯಾವ ವಿಧವಾದ ಉಚ್ಚಾರ ಬೇಕಾದರೂ ಮಾಡಬಹುದು. ಆದರೆ ಈಗಿನ ಕಾಲದ ಸಂಗೀತ ವಿದ್ವಾಂಸ ಹಾಡುಗಾರಿಕೆ ಕಛೇರಿಗಳಲ್ಲಿ ಬಹಳ ಓಟದಿಂದ ಹಾಡುವಾಗ ಈ ಪಿಟೀಲಿನವರು ರಾಗಭಾವವನ್ನು ಪೂರ್ತಿಯಾಗಿ ಅನುಕರಿಸಲಾರದೆ ಬರಿಯ ಸ್ವರಸ್ಥಾನಗಳನ್ನು ಸುಮಾರಾಗಿ ಮುಟ್ಟಿಕೊಂಡು ಹೋಗುತ್ತಿದ್ದಾರೆ. ಪಿಟೀಲನ್ನು ಬಾರಿಸುವಾಗ ಬರಿಯ ಒಂದೊಂದು ಬೆರಳಿನ ಸ್ವರಕ್ಕೂ ಕಮಾನು ಹಾಕಿದರೆ ಸ್ವರವೆಂದೂ ಹಾಗಲ್ಲದಿದ್ದರೆ ಅಕ್ಷರಗಳೆಂದೂ ಇಲ್ಲದಿದ್ದರೆ ಸಾಹಿತ್ಯದ ಅಕಾರ ಇಕಾರ ಇತ್ಯಾದಿಗಳೆಂದೂ ತಿಳಿಯಬಹುದು. ಈ ಪಿಟೀಲಿನಲ್ಲಿ ಮುಖ್ಯವಾದ ಕಷ್ಟವೇನೆಂದರೆ ಶುದ್ಧವಾದ ಸ್ವರದೊಡನೆ ರಾಗಭಾವವೂ ಸೇರಿ ಬಾರಿಸುವವರನ್ನು ನೋಡಲು ಅತಿ ವಿರಳ. ಹಾಗೆ ರಾಗಭಾವದೊಡನೆ ಬಾರಿಸಿದರೂ ಹಾಡುಗಾರಿಕೆಯನ್ನು ಅನುಕರಿಸಲು ಹಾಕಿದ್ದರೆ ಅವರೇ ಬಾರಿಸುತ್ತಿದ್ದಾಗ ಇದ್ದ ಭಾವವೂ ಶುದ್ಧ ಸ್ವರಗಳೂ ಹೋಗಿ ಬರಿಯ ಸ್ವರಸ್ಥಾನಗಳನ್ನೇ ಮುಟ್ಟಬೇಕಾಗುತ್ತದೆ. ಇದರಿಂದ ಕೇಳುವ ಜನರಿಗೆ ಅಷ್ಟು ತೃಪ್ತಿಯುಂಟಾಗುವುದಿಲ್ಲ. ಮುಖ್ಯವಾಗಿ ಸಂಗೀತವಿದ್ಯೆಯೇ ಬಹಳ ಕಷ್ಟವಾದ ವಿದ್ಯೆ. ಇದನ್ನು ಸಾವಿರಕ್ಕೋ ಅಥವಾ ಲಕ್ಷಕ್ಕೋ ಒಬ್ಬರು ಕಲಿತು ತೇರ್ಗಡೆಹೊಂದಬಹುದು. ಅಂದರೆ ಈಗಿನ ನವೀನ ಪ್ರಪಂಚದಲ್ಲಿ ಸಂಗೀತವು ಬಹಳ ಪ್ರಚಾರದಲ್ಲಿರುವುದು ಬಹಳ ಸಂತೋಷಕರವಾದ ವಿಷಯವೇ ಸರಿ. ಈ ಪಿಟೀಲು ವಾದ್ಯವು ಸಾಮಾನ್ಯವಾಗಿ ಎಲ್ಲರ ಸ್ವಾಧೀನಕ್ಕೂ ಬರಲಾರದು. ಬಂದರೂ ಯಾವುದಾದರೂ ಭಾಗದಲ್ಲಿ ಹೆಚ್ಚಾದ ಯೋಗ್ಯತೆ, ಮಿಕ್ಕ ಭಾಗಗಳಲ್ಲಿ ಕಡಿಮೆಯಾದ ಯೋಗ್ಯತೆಯೂ ಇರುತ್ತದೆ. ಉದಾಹರಣೆಗೆ ಒಬ್ಬರು ರಾಗಗಳನ್ನು ಚೆನ್ನಾಗಿ ಭಾವವಾಗಿ ಬಾರಿಸುತ್ತಾರೆ. ಆದರೆ ಇವರಿಗೇನೇ ಸ್ವರಗಳನ್ನು ಹಾಕುವಾಗ ಅಥವಾ ಸಾಹಿತ್ಯವಿನ್ಯಾಸ (ಪಲ್ಲವಿ ಹಾಡುವ ಕ್ರಮ) ಮಾಡುವಾಗ ಸ್ವಾಧೀನವಿಲ್ಲದೆ (ತಾಳವು) ಇರುತ್ತದೆ. ಇಲ್ಲದಿದ್ದರೆ ಶುದ್ಧ ಸ್ವರವಿಲ್ಲದೆ ಇರುವುದೂ ಉಂಟು. ಮುಖ್ಯವಾಗಿ ಸಂಗೀತದ ಹಾಡುಗಾರಿಕೆಯಲ್ಲಿ ಶ್ರುತಿಶುದ್ಧವಾಗಿ ಹಾಡುತ್ತಿದ್ದರೆ ಸ್ವರವಿನ್ಯಾಸ ಸಾಹಿತ್ಯಗಳಲ್ಲಿ ಜ್ಞಾನವು ಕಡಮೆಯಾಗಿಯೂ ಅಥವಾ ಒಳ್ಳೇ ಸ್ವರವಿನ್ಯಾಸ—ಸಾಹಿತ್ಯವಿನ್ಯಾಸಜ್ಞಾನವಿದ್ದರೆ ಶುದ್ಧಸ್ವರವಿಲ್ಲದೆಯೂ ಇರುತ್ತದೆ. ಅಂದರೆ ಹಾಗಿರಲು ಅವರವರ ಕರ್ಮಗಳು ಕಾರಣ. ಹಾಗೆಯೇ ಪಿಟೀಲು ವಾದ್ಯವೂ ಕೂಡ ಕಷ್ಟತರವಾದ ವಾದ್ಯ. ಇಂಥ ವಾದ್ಯವನ್ನು ಹಾಡುಗಾರಿಕೆ ಕೊಳಲು ವೀಣೆ ಗೋಟುವಾದ್ಯ ಮುಂತಾದವುಗಳ ಪಕ್ಕಕ್ಕೆ ಹಾಕಿರುವುದು ಸಂಗೀತಪ್ರಪಂಚದಲ್ಲಿ ದೊಡ್ಡ ಅನ್ಯಾಯ. ಹೋಗಲಿ ಎಂದರೆ ಒಬ್ಬ ಸಂಗೀತಗಾರರ ಬಾಯಿಹಾಡುಗಾರಿಕೆಯ ಕಛೇರಿಗೆ ಪಕ್ಕಕ್ಕೆ ಪಿಟೀಲನ್ನು ಹಾಕಿರುತ್ತಾರೆಂದು ಇಟ್ಟುಕೊಳ್ಳೋಣ. ಕೆಲವರ ಶಾರೀರಗಳು ಹಾರ್ಮೋನಿಯಂನಲ್ಲಿಯ ಳನೆಯ ಮನೆಯಲ್ಲಿ ಹಾಡತಕ್ಕವುಗಳಾಗಿಯೂ ಕೆಲವು ಶಾರೀರಗಳು ೧ನೆಯ ಮನೆಯಲ್ಲಿ ಹಾಡತಕ್ಕವುಗಳಾಗಿಯೂ ಇರುತ್ತವೆ. ಹೀಗಿರುವಾಗ ಪಿಟೀಲು ವಾದ್ಯಗಾರನು ಸಂಗೀತ ಕಛೇರಿಯು ನಡೆಯುವುದಕ್ಕೆ ೧೫ ದಿನ ಮುಂಚೆಯೇ ಅವರು ಎಷ್ಟನೆಯ ಮನೆಯಲ್ಲಿ ಹಾಡುತ್ತಾರೆಂಬುದಾಗಿ ವಿಚಾರಿಸಿಕೊಂಡು ಅದಕ್ಕೆ ತಕ್ಕ ತಂತಿಗಳನ್ನು ಕಟ್ಟಿಕೊಂಡು ಅಭ್ಯಾಸಮಾಡಬೇಕು. ಹೋಗಲಿ ಎಂದರೆ ಹಾಡುಗಾರಿಕೆಯ ವಿದ್ವಾಂಸರಿಗೆ ಗೊತ್ತಿರುವ ಕೀರ್ತನೆಗಳು ಪಿಟೀಲಿನವರಿಗೆ ಗೊತ್ತಿಲ್ಲದೆಯೂ ಇರಬಹುದು. ಹಾಗಿದ್ದರೆ ಆ ಕೀರ್ತನೆಗಳನ್ನು ಗಟ್ಟಿಮಾಡಿಕೊಂಡು ಪ್ರಾಕ್ಟೀಸು ಮಾಡಬೇಕು. ಇಲ್ಲದಿದ್ದರೆ ಕೀರ್ತನೆಗಳನ್ನು ಅನುಕರಿಸಲು ಸಾಧ್ಯವಿಲ್ಲ. ಹೋಗಲಿ ಎಂದರೆ ಅನುಕರಿಸದೆ ಸ್ವರವಿನ್ಯಾಸ ಸಾಹಿತ್ಯವಿನ್ಯಾಸ ರಾಗಗಳು ಬಂದಾಗ ಮಾತ್ರಾ ಬಾರಿಸಿದರೆ ಬಂದಿರುವ ಜನಗಳಿಗೆ ತೃಪ್ತಿಯಾಗುವುದಿಲ್ಲ. ಕೆಲವು ವಿದ್ವಾಂಸರುಗಳಿಗೆ ಶಾರೀರವು ಗಾತ್ರವಾಗಿಯೂ (ವಾಲ್ಯೂಪು ದೊಡ್ಡದು) ಕೆಲವರಿಗೆ ಸಣ್ಣದಾಗಿಯೂ ಇರುತ್ತದೆ. ಹೀಗಿರುವಾಗ ತಂತಿಗಳನ್ನೂ ದಪ್ಪನಾಗಿಯೋ ಅಥವಾ ಸಣ್ಣನಾಗಿಯೋ ಉಪಯೋಗಿಸಬೇಕಾಗುತ್ತದೆ. ಕೆಲವು ವಿದ್ವಾಂಸರು ಹಾಡುವಾಗ ಬಹಳ ನುರಿತ (ಶೀಘ್ರ)ವಾಗಿಯೂ ಕೆಲವರು ಬಹಳ ನಿಧಾನವಾಗಿಯೂ ಹಾಡುತ್ತಾರೆ. ಪಿಟೀಲಿನಲ್ಲಿ ಇರುವ ದೊಡ್ಡ ಕಷ್ಟವೇನೆಂದರೆ ನಿಧಾನವಾಗಿ ಹಾಡುವಾಗ ರಾಗಭಾವದೊಡನೆ ಸಂಗೀತವು ಚೆನ್ನಾಗಿ ಕೂಡಿರುವುದು. ಅದನ್ನು ಪಿಟೀಲು ವಾದ್ಯಗಾರನು ಅನುಕರಿಸಬೇಕಾದರೆ ಬಹಳ ಕಷ್ಟ. ಅಂದರೆ ಅವನು ನಿಧಾನವಾಗಿಯೇ ಅಭ್ಯಾಸ ಮಾಡಿದ್ದರೆ ಅಂತಹ ಮನುಷ್ಯನಿಗೆ ಶೀಘ್ರವಾಗಿ ಬಾರಿಸಲಾಗುವುದಿಲ್ಲ ಹಾಗೆ ಶೀಘ್ರವಾಗಿಯೇ ಬಾರಿಸಬೇಕಾದರೆ ಬರಿಯ (ಗೋಟು ಬಾರಿಸುವುದು) ಸ್ವರಸ್ಥಾನಗಳನ್ನು ಮುಟ್ಟಿಕೊಂಡೇ ಹೋಗಬೇಕಾಗುತ್ತದೆ. ಬಹಳ ಚುರುಕಿನಿಂದ ಹಾಡುತ್ತಿರುವಾಗ ಹಾಡುಗಾರಿಕೆ ವಿದ್ವಾಂಸರುಗಳು ತಮಗೆ ಚೆನ್ನಾಗಿ ಅನುಭವವಿರುವ ಸ್ಥಳಗಳಲ್ಲಿ ಸ್ವರಗಳನ್ನು ಎತ್ತಿಕೊಂಡು ಸ್ವರವನ್ನೂ ಹಾಕುತ್ತಾ ಹೋಗುತ್ತಾರೆ. ಆ ಕ್ಷಣಕ್ಕೆ ಸರಿಯಾಗಿ ಪಿಟೀಲು ವಿದ್ವಾಂಸರು ಕಾಯುತ್ತಿರಬೇಕು. ಅಂದರೆ ಪಿಟೀಲಿನವನು ಕೈಕೆಲಸಮಾಡಿದರೆ ಹಾಡುಗಾರಿಕೆಯವನು ಬಾಯಿಯಲ್ಲಿ ಉಚ್ಚರಿಸುತ್ತಾನೆ. ಇದರಿಂದ ಭಾಷಣಮಾಡುವಾಗ ಟೈಸ್ ಮಾಡಿದ ಹಾಗಾಗುತ್ತೆ. ಅಂದರೆ ಪಿಟೀಲಿನವನಿಗೆ ಎಷ್ಟು ಕಷ್ಟವಿರಬೇಕು? ಇದೂ ಅಲ್ಲದೆ ಹಾಡುಗಾರಿಕೆಯವನು ಮನಸ್ಸಿಗೆ ಬಂದ ಹಾಗೆ ಹಾಡುತ್ತಾನೆ. ಪಿಟೀಲಿನವನು ಅವನನ್ನು ಅನುಕರಿಸಬೇಕಾದರೆ ಅವನನ್ನು ಗಮನಿಸುತ್ತಲೇ ಇರಬೇಕು. ಇಷ್ಟಾದರೂ ಹಾಡುಗಾರಿಕೆಯವರಿಗೆ ಉಚ್ಚಸ್ಥಾನ, ಪಿಟೀಲಿನವರಿಗೆ ಎರಡನೆಯ ಸ್ಥಾನ; ಅಲ್ಲದೆ ದುಡ್ಡಿನ ಮರ್ಯಾದೆಯಲ್ಲಿಯೂ ಕೂಡ ಮೊದಲನೆಯವರಿಗೆ ಹೆಚ್ಚಾಗಿಯೂ ಎರಡನೆಯವರಿಗೆ ಕಡಿಮೆಯಾಗಿಯೂ ಕೊಡುತ್ತಾರೆ. ಹೋಗಲಿ ಎಂದರೆ ಪಿಟೀಲು ಇನ್ನೂ ಅಭ್ಯಾಸಮಾಡಲು ಮೊದಲುಮಾಡಿದ ಕಾಲದಿಂದ ಹಿಡಿದು ಅದರ ಸಂಪಾದನೆ ಮಾಡುವವರೆಗೂ (ಸಂಗೀತಪ್ರಪಂಚದಲ್ಲಿರುವ ವರೆಗೂ) ನಿತ್ಯವೂ ಸಂಜೆ ವರಸೆ ಜಂಟಿ ವರಿಸೆ ಮೊದಲುಗೊಂಡು ಎಲ್ಲಾ ಭಾಗವನ್ನು ಅಭ್ಯಾಸಮಾಡುತ್ತಲೇ ಇರಬೇಕು. ಹಾಗಿಲ್ಲದೆ ಬಿಟ್ಟರೆ ಅವನ ಅಭ್ಯಾಸವು ಕೆಟ್ಟುಹೋಗುತ್ತದೆ. ಹಾಡುಗಾರಿಕೆಯವರಿಗೆ ಆ ಕಷ್ಟವಿಲ್ಲದೆ ಅವರು, ಅಭ್ಯಾಸವು ಒಂದು ದರ್ಜೆಗೆ (Standard) ಬಂದ ಮೇಲೆ, ಅಭ್ಯಾಸವನ್ನು ಅಷ್ಟು ಹೆಚ್ಚಾಗಿ ಇಟ್ಟುಕೊಳ್ಳಬೇಕಾದ ಆವಶ್ಯಕತೆಯಿಲ್ಲ; ಅಲ್ಲದೆ ಶಾರೀರಸಂಪತ್ತೂ ಮತ್ತು ಶಾರೀರದಲ್ಲಿ ಉಚ್ಚಾರಗಳೂ ದೈವಾನುಗ್ರಹದಿಂದ ಉಂಟಾಗಿದ್ದರಂತೂ ಕೇಳುವ ಹಾಗೇ ಇಲ್ಲ. ಅಂತಹವು ಪಿಟೀಲಿನವರ ಹಾಗೆ ಸಾಳೆಯಿಂದ ಹಿಡಿದು ಅಭ್ಯಾಸ ಮಾಡಬೇಕಾಗಿಲ್ಲ. ಅಲ್ಲದೆ, ಪಿಟೀಲಿನಲ್ಲಿ ಶುದ್ಧ ಸ್ವರವು ನಿಲ್ಲುವುದೇ ಒಹು ಕಷ್ಟ. ಸುಮಾರಾಗಿ ಸ್ವಾಧೀನಕ್ಕೆ ಬರಬೇಕಾದರೆ ಬಾಯಿಹಾಡುಗಾರಿಕೆಗಿಂತ ೧೫ ಳುಷ್ಟು ಕಾಲವು ಬೇಕು. ಹೀಗಿರುವಾಗ ನಮ್ಮ ಸಂಗೀತಪ್ರಪಂಚದಲ್ಲಿ ಅನ್ಯಾಯವಾಗಿ ಕಷ್ಟಪಡುವವರಿಗೆ ಬೆಲೆಯನ್ನು ಕೊಡದೆ ಇರುವುದು ಮತ್ತು ಇಂತಹವರನ್ನು ಪಕ್ಕವಾದ್ಯಕ್ಕೆ ಉಪಯೋಗಿಸಿಕೊಂಡು ಅವರ ಯೋಗ್ಯತೆಯು ಮುಂದೆ ಬರದಂತೆ ಮಾಡುವುದು ಬಹಳ ಶೋಚನೀಯವೇ ಸರಿ. ಹಿಂದಿನ ಕಾಲದಲ್ಲಿ ಹಾಡುಕಛೇರಿಗಳಿಗೆ ಪಿಟೀಲಿದ್ದಿತೇ? ಇದನ್ನು ಯಾರು ಈ ರೀತಿ ಉಪಯೋಗಿಸಿದರೋ? ಹೋಗಲಿ. ಈಗಲೂ ಈ ವಾದ್ಯದವರ ಕಷ್ಟವನ್ನು ಪರಿಹರಿಸಿದರೆ ಸಂಗೀತಪ್ರಪಂಚಕ್ಕೇನೇ ದೊಡ್ಡ ಸಹಾಯ ಮಾಡಿದ ಹಾಗಾಗುತ್ತದೆ. ಇಷ್ಟೆಲ್ಲಾ ಕಷ್ಟಪಟ್ಟರೂ ಕೂಡ ಸಾಹಿತ್ಯವಿಲ್ಲದಿರುವುದರಿಂದ ಸಂಗೀತವಾಗಲಾರದು.

ಎರಡನೆಯದು ಈ ವಾದ್ಯವನ್ನು ಇಷ್ಟಕ್ಕೂ ಬಿಡದೆ ಮಿಕ್ಕ ವಾದ್ಯಗಳನ್ನು ಅನುಸರಿಸಲೂ ಕೂಡ ಉಪಯೋಗಿಸಲು ಕೂಡ ಉಪಯೋಗಿಸಿರುವುದು ಶೋಚನೀಯವೇ ಸರಿ. ಉದಾಹರಣೆ:—ಪಿಟೀಲು ವಾದ್ಯವನ್ನೂ ಕೊಳಲು ಕಛೇರಿಗಳಿಗೆ ಪಕ್ಕ ವಾದ್ಯಕ್ಕೆ ಉಪಯೋಗಿಸುತ್ತಾರೆ. ಕೊಳಲು ವಾದ್ಯವು ಒಹಳ ಓಟವಾದ ವಾದ್ಯ ಅಲ್ಲದೆ ಉಸಿರುವಾದ್ಯ. ಇದರಲ್ಲಿ ಬಾರಿಸುವಷ್ಟು ಚುರುಕಾಗಿ ಇನ್ನಾವ ವಾದ್ಯದಲ್ಲಿಯೂ ಕೂಡ ಬಾರಿಸಲಾಗುವುದಿಲ್ಲ. ಅಂದರೆ ಅಷ್ಟು ಚುರುಕಾಗಿ ಪೀಟೆಲುವಾದ್ಯಗಾರನೂ ಕೂಡ ಅಭ್ಯಾಸಮಾಡಿರಬೇಕು. ಮೇಲೆ ಹೇಳಿದ ಹಾಗೆ ಇಲ್ಲಿಯಂತೂ ಕೂಡ ಶ್ರುತಿ, ಸ್ವರ ವಿನ್ಯಾಸ, ಸಾಹಿತ್ಯವಿನ್ಯಾಸ, ಕೀರ್ತನೆಗಳು ರಾಗಭಾವ ಶಬ್ದ ಜಾಸ್ತಿ—ಕಡಮೆ ಇವುಗಳ ತೊಂದರೆಯೂ ಕೂಡ ಇದ್ದೇ ಇದೆ.

(ಸಶೇಷ.)

ಆರ್. ವಿ. ಶ್ರೀಕಾಂತಯ್ಯ,
ಸಂಗೀತಭೂಷಣಂ.


ಇಂಡಿಯಾದ ಪ್ರಮುಖ ಟಾನಿಕ್

## ಆತಂಕನಿಗ್ರಹ

ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ

"ಜೀವದ ಮೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ, ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

**ಆತಂಕನಿಗ್ರಹ ಫಾರ್ಮೆಸಿ,**
**ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಏಜಂಟರು—
**ಪರ್ಫ್ ಎಂಡ್ ಸನ್ಸ್, ಮಂಗಳೂರು.**

ಕಾಮತ್‌ರವರ ದಿವ್ಯ ಸಿದ್ಧೌಷಧ!

## ಉನ್ಮಾದ ಸಂಜೀವನ!!

ಉಗ್ರವಾಗಿರುವ ಹುಚ್ಚು; ಫೌನವಾಗಿರುವ ಹುಚ್ಚು; ದೀರ್ಘ ಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು ನಿದ್ರಾ ನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸೂತಿಕಾವಾಯು, ಹಿಸ್ಟೀರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳಿಂದ್ಲೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/- ಮಾತ್ರ.

ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:—**ಸಿ. ವೈಕುಂಠ ಕಾಮತ್,**
'ಇನ್‌ಸೇಟಿ ಎಕ್ಸ್‌ಪರ್ಟ್',
ಪೋಸ್ಟ್ ಉಡುಪಿ, ಡಿ. ಕನ್ನಡ

ನಮ್ಮ ಕಂಪೆನಿಯಲ್ಲಿರತಕ್ಕ ಹಸನಾದ ಊದು ಬತ್ತಿಗಳು ಕಮ್ಮಿ ಬೆಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆ. ಬೇಕಾದ ವ್ಯಾಪಾರಸ್ಥರು ತರಿಸಿಕೊಂಡು ನಫೆ ಹೊಂದಬಹುದು. ಆರ್ಡರಿನಲ್ಲಿ ಅರ್ಧ ಹಣ ಮುಂಗಡವಾಗಿ ಕಳುಹಿಸಿದರೆ ತೂಕ ರವಾನಿಸಲಾಗುತ್ತದೆ. ಪ್ಯಾಕಿಂಗ್ ಮತ್ತು ರೈಲ್ವೆ ಚಾರ್ಜು ಪ್ರತ್ಯೇಕ.

**ಮಣ 1ಕ್ಕೆ ರೂ. 14—8—0.**

9 ಇಂಚಿನಿಂದ 12—15—16ರ ವರೆಗೂ ಇರುವ ಸರ್ಗೀಸ್— ಅಂಬರ್— ಗ ಲಾಬಿ— ಶಾಫರಾನಿ— ಸಂದಲ—ಕ್ಯುಷ್ಮು— ಹಂಲ್‌ಮಡ್ಡಿ - ಪುನುಗು—ಜವಾಜ್—ಕಸ್ತೂರಿ ಬತ್ತಿಗಳು—ಮಣ 1ಕ್ಕೆ ರೂ. 14—8—0. ವಂದವೆ, ಮುಂಜಿಗಳಲ್ಲಿ ಬೇಕಾಡ ಅಸ್ಸಟ ಕನ್ನೂಜ್ ಪನ್ನೀರು ಡಜನ್ ಬಾಟ್ಲಿ ಚಿಕ್ಕ ಸೈಜು ರೂ. 5—0—0, ದೊಡ್ಡ ಬಾಟ್ಲಿ ರೂ. 9—8—0. ಹಸಿ ಗಂಧ—ತೊಲೆ ಹಸನ್ 1ಕ್ಕೆ ರೂ. 2—8—0. ಮಡ್ಡಿ 6 ಆಣೆಯಿಂದ ರೂ. 1—8—0 ವರೆಗೂ— ಇನ್ನೂ ಅನೇಕ ರಖಂವಾರಿ ತೈಲಗಳು, ಅತ್ತರುಗಳು ಸೆಂಟ್‌ಗಳು ಎಲ್ಲವೂ ಬಿಕರಿಗೆ ಸಿದ್ಧವಾಗಿರುತ್ತವೆ. ಒಂದು ಸಲ ತರಿಸಿ ನಫೆ ಸಂಪಾದಿಸಿಕೊಳ್ಳಬಹುದು. ಗ್ಯಾರಂಟಿ ಮಾಲು.

**ಮ್ಯಾನೇಜರ್,**
ಇಂಟರ್‌ನ್ಯಾಶನಲ್ ಸೀಡ್ ಕಂಪೆನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರು ಸಿಟಿ.

*Props:*—S. G. N. BROS.

## WANTED

Sub-agents under our Special Agency for West Coast to represent our Ashok Insurance Co., Ltd., Bombay. Persons with knowledge of Insurance business preferred. Good remuneration.

**Apply:—Messrs. WELDON & CO., Karanje Building, Hampankatta, MANGALORE.**

## SOLE AGENTS FOR

**Super Re-built Tyres, Taterene that saves Motorists millions, FIT Boot and Shoe Sole and Heel stripes of patent rubber protecto.**

## FOR SALE

Some bank and other Shares, Pianos, Radio-Set, Cane chairs, German Walking Sticks, Folding Camp Tables, House and Garden and Landed properties for sale or on Mortgage.

*For particulars apply sharp to our above address and be satisfied.*



## ಡಾಕ್ಟರ್ ಸಿ. ಮತಾಯಸರ ಸಿದ್ಧೌಷಧಗಳು.

**ಮಸ್ಕ್ ಪಿಲ್ಸ್**—ಈ ಮಾತ್ರೆಗಳು ಮಕ್ಕಳ ಚೇಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1½ ರೂ.

ಇದಲ್ಲದೆ ಟಿಸ್ಯೂ ಮದ್ದುಗಳೂ, ಹೊಮ್ಯೋಪೆತಿಕ್ ಔಷಧಗಳೂ, ಹೊಮೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮತಾಯಸ್, ಎಂ. ಡಿ. (ಹೊಮ್ಯೋ.) ಎಂ. ಬಿ. (ಆಯುರ್)
**ಪೂವರ್ ಸರ್ವಿಸ್ ಲೋಜ್, ಮಂಗಳೂರು.**



# DAYTON
## CYCLES & PARTS.

**AN UP-TO-DATE CYCLE THAT SPELLS IT'S UNRIVALLED SUPREMACY.**

**GUARANTEED 10 YEARS!**

## THE REGAL CYCLE STORES,
**CAR STREET : : : MANGALORE.**



## ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಆಹ್ನಿಕ ಮಂಜರಿ ಕತ್ತಾ ನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.

ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

**ಎಚ್. ಎನ್. ರಾವ್ ಬ್ರದರ್ಸ್,**
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.



## ಅದ್ಭುತ ಫಲಗಳು.

(೧೧ ವರ್ಷದ ಅನುಭವ)

ಸಕಲ ಬಾಧೆಗಳನ್ನೂ ಪರಿಹರಿಸುವ ತಾಯಿತ ಈ ಕೆಳಗಿನ ಸಂಗತಿಗಳಲ್ಲಿ ಒಳ್ಳೆಯ ಫಲಕೊಡುತ್ತದೆ:—

ನಾವು ಮಕ್ಕಳ ಎಲ್ಲಾ ತರದ ರೋಗಗಳನ್ನೂ ಗುಣಪಡಿಸುವೆವಲ್ಲದೆ ಅವರನ್ನು ಆರೋಗ್ಯವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುವೆವು. ೨. ಕೈಕೊಂಡ ವ್ಯಾಪಾರದಲ್ಲಿ ಜಯವೊದಗಿಸುವುದು. ೩. ಅಗಲಿದ ಸ್ನೇಹಿತರನ್ನೂ ಬಂಧುಗಳನ್ನೂ ಒಡಗೂಡಿಸುವುದು. ೪. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸುವುದು. ೫. ಶಕ್ತಿ, ಆನಂದಗಳನ್ನು ದಾನಮಾಡುವುದು. ೬. ದೀರ್ಘ ಆಯುಸ್ಸನ್ನೂ ದೀರ್ಘಕಾಲ ಮಕ್ಕಳಿಲ್ಲದ ಸ್ತ್ರೀಯರಿಗೆ ಪುತ್ರಸಂಪತ್ತಿಯನ್ನೂ ಬರಿಸುವುದು. ಮೇಲೆ ಹೇಳಿದ ಯಾವ ವಿಷಯಕ್ಕಾದರೂ ಯಂತ್ರಗಳಿವೆ. ಬೆಲೆಗೆ ಬರೆದುಕೊಳ್ಳಿ. ಎಷ್ಟು ಹಳೆಯ ರೋಗವಾದರೂ ೨೧ ದಿವಸಗಳಲ್ಲಿ ಗುಣಹೊಂದುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾತ್ರ.

**MYSTIC HOME**
*12, Vengai Chetty St., P. T., MADRAS.*



POHOLATUM — **for Rheuma and Headache & Cold**
LUBA — **for weakness of lungs, coughs etc.**
COUGH-CURE — **for Colds, Coughs**
CURATIVE-EARTH — **for Constipation, Typhoid, Dysenterie**
**OLYMPIA-TYPEWRITERS** — **for better typing**
ASTRIDA-BLADES — **for quicker shaving**
**EUCALYPTUS-BONBONS** — **for hoarseness**
BOOKS — **for education**
STATIONERIES — **for home and Office-use**
LAMPS — **for better lights**

ALL THIS YOU HAVE TO GET
FROM
## Basel Mission Book Depot (Canarag Ltd.)
## MANGALORE, S. K.
MISSION ROAD HAMPANKATTA

# ದಾಸಯ್ಯನ ಜೋಳಿಗೆ.

ಅಂದಮಾನ್ ದ್ವೀಪವನ್ನು 'ಖೈದಿಗಳ ಸ್ವರ್ಗ'ವೆಂದು ಇಂಡಿಯಾ ಸರ್ಕಾರದ ಹೋಂ ಮೆಂಬರು ಮಹಾಶಯರು ಹೊಗಳಿದ್ದಾರೆ! ಮುಖ್ಯವಾಗಿ ಅಲ್ಲಿಗೆ ಹೋಗುವವರು ಎಷ್ಟೋ ಪುಣ್ಯ ಮಾಡಿ, ಸ್ವರ್ಗಸುಖಕ್ಕೆ ಬಾಯ್ಬಿಟ್ಟುಕೊಂಡು ಇರಲೇ ಬೇಕಷ್ಟೆ! ಎಷ್ಟೋ ಕಾಲ ತಪಸ್ಸು ಮಾಡಿದರೂ ಲಭ್ಯವಾಗದ ಸ್ವರ್ಗಸುಖವು ನಮ್ಮ ಅರಸರ ಕಾಲದಲ್ಲಿ ಸಾಮಾನ್ಯ ಖೈದಿಗಳಿಗೂ ಲಭ್ಯವಾಗುವಂತಾದರೆ, ಅನುಭವಿಸುವವರ ಮತ್ತೂ ಅನುಭವಿಸುವಂತೆ ಮಾಡುವವರ ಪುಣ್ಯ ವೆಂದರೆ ವರ್ಣನಾತೀತವಾದದ್ದೇ ಸರಿ!

ಅಂದಮಾನ್ ದ್ವೀಪದ ಮಾತು ಹಾಗಿರಲಿ. ಇಂಡಿಯಾದ ಜೈಲ್‌ಖಾನೆಗಳ ಸ್ಥಿತಿಯನ್ನು ಹೇಗೆ ವರ್ಣಿಸಬೇಕು? ಮಜ್ಜಿಗೆನೀರಿಗೆ ಕಷ್ಟ ವಾಗಿರುವಾಗ, ಹಿಂದೊಮ್ಮೆ ಮಜ್ಜಿಗೆ ಬೇಕೆಂದು ಅನೇಕರು ಹೋರಾಡಿದಾಗ ನಮ್ಮ ಸಾರ್ವಭೌಮ ಸರ್ಕಾರದವರು ಮಾಡಿದ್ದು ನ್ಯಾಯವೆ? ಅಂದಮಾನ್ ದ್ವೀಪವನ್ನು ಸ್ವರ್ಗವೆಂದು ಕರೆದ ಇವರೇ ಜೈಲ್‌ಖಾನೆಗಳನ್ನೂ 'ರಾಜಾತಿಥ್ಯಗೃಹ'ಗಳೆಂದು ಕರೆದು ಖೈದಿಗಳಿಗೆ ಸ್ವಲ್ಪ ನೆಮ್ಮದಿಯನ್ನುಂಟು ಮಾಡಬಾರದೇಕೆ?

ನಮ್ಮ ಶ್ರೀ ಸುಭಾಷ್‌ಚಂದ್ರ ಭೋಸರಿಗೆ ರಾಜಾತಿಥ್ಯದಲ್ಲಿರಿಸಿರುವ ಗುಟ್ಟಾದರೂ ಏನು? ಸ್ವರ್ಗಸುಖಕ್ಕಾಗಿ ತಾನೇ? ಲೋಕದಲ್ಲಿ ಭಾರತ ಖಂಡದಲ್ಲಿ ಜನ್ಮವೆತ್ತಿದವನಿಗೆ ಮಾತ್ರ ಸ್ವರ್ಗಕ್ಕೆ ಹೋಗುವ ದಾರಿ ಸಿಕ್ಕಬಹುದೆಂದು ಸ್ವಾಮಿ ವಿವೇಕಾನಂದರು ಅಂದಿದ್ದರು. ಈಗ ಸ್ವರ್ಗದ ದಾರಿ ಬಹಳ ಹತ್ತಿರದಲ್ಲಿರುವ ಹಾಗೆ ಹೋಂ ಮೆಂಬರರು ಅಂದಿದ್ದಾರೆ. ಖೈದಿಗಳಿಗೆ ಪಾಪ ಪರಿಹಾರವಾಗಿ ಪುಣ್ಯಫಲವನ್ನು ಪಡೆಯಬೇಕೆಂದರೆ ಅಂದಮಾನ್ ದ್ವೀಪವಾಸವೇ. ಇದೇ ಖೈದಿಗಳ ಪುಣ್ಯ!

* * * *

ಕಂಠೀರವನಲ್ಲಿ ಯಾರೋ 'ಪೆನ್‌ಶನ್ ದಾರ'ರು ದಾಸಯ್ಯನ ಲೇಖದಲ್ಲಿ ಪೆನ್‌ಷನ್ ದಾರರ ವಿಚಾರದಲ್ಲಿ ನಿಂದೆಯ ಬರಹವಿರುವುದೆಂದೂ, ಬಕಹಂಸಗಳ ಸಾಮ್ಯದಂತೆ ನಿಜಾಂಶವನ್ನು ಕೆಂಡುಹಿಡಿಯಲು ಕ್ಷೀರನೀರನ್ಯಾಯದಿಂದ ವರ್ತಿಸಬೇಕೆಂದೂ, ಪೆನ್‌ಶನ್‌ದಾರ್ರಿಗಿಂತ ಕೆಲಸದಲ್ಲಿ ಉಳಿದಿರುವವರೇ ಅಕ್ರಮ-ಅನ್ಯಾಯಗಳನ್ನು ಮಾಡುತ್ತಿರುವರೆಂದೂ, ಸತ್ಯದಿಂದ ನಡೆದಿರುವ ಪೆನ್‌ಷನರ್‌ಗಳ ಹೊಗಳಿಕೆ ಬೇಕೆಂದೂ ಹೇಳಿದ್ದಾರೆ.

ಮೇ ಒಂದನೇ ಕಂಠೀರವದ ಲೇಖನವನ್ನು ಸಿಂಹಾವಲೋಕನವನ್ನು ಮಾಡಿದರೆ ಯಾವ ಪೆನ್‌ಷನ್‌ದಾರ್ರಿಗೂ ನೋವಾಗುವಂತೆ ಇಲ್ಲ. ಪೆನ್‌ಷನರುಗಳು ತಾವು ಲೋಕವೃತ್ತಿಯಿಂದ ನಿವೃತ್ತರಾದ ಮೇಲೂ ಅದೇ ಹಂಬಲವನ್ನು ಕಟ್ಟಿಕೊಂಡು, ಪರಲೋಕವೃತ್ತಿಯನ್ನು ದೂರ ಮಾಡುತ್ತಿದ್ದಾರಲ್ಲ ಎಂದು ಪಶ್ಚಾತ್ತಾಪದಿಂದ ಬರೆದದ್ದಾಗಿದೆ. ಎಲ್ಲವನ್ನೂ ಬಿಟ್ಟರೂ, ಮಾತಿನಲ್ಲಿ ಮಾತ್ರ ಅಹರ್ನಿಶಿಯಲ್ಲಿಯೂ ಇಹಲೋಕದ [illegible] ಚಿಂತೆ, ತಮ್ಮ ವಯಸ್ಸಿನಲ್ಲಿ [illegible], ಅನುಭವಿಸಿದ ಮಹಾಮದೀಯ ಕೃತ್ಯ [illegible]ವಾಗಿ ಕಾಲವನ್ನು ಕಳೆಯುವರಲ್ಲ ಎಂದು ಪಶ್ಚಾತ್ತಾಪದಿಂದ ಕೂಡಿದೆ.

ಇಷ್ಟಾದರೂ ಈಗ ಕೆಲಸದಲ್ಲಿರುವವರ ಅಕ್ರಮಾನ್ಯಾಯತೆಗಳ ವಿಚಾರದಲ್ಲಿ ಒಂದಿಷ್ಟು ಬರೆದು,

ದೂಷಕಸ್ಯ 'ಕ್ರಿಯಾಶೂನ್ಯೋ ।
ನಿಕೃಷ್ಟೋ ದೀರ್ಘಕೋಪಸಂ ।
ಚತ್ವಾರೋ ಕರ್ಮಚಂಡಾಲೋ ।
ಜಾತಿಚಂಡಾಲ ಉತ್ತಮಃ ॥

ಎಂಬ ಶ್ಲೋಕವನ್ನು ಸಾರ್ಥಕಪಡಿಸಿಕೊಂಡಿರುವರು! ಎಷ್ಟಾದರೂ ಪೆನ್‌ಷನ್ ಪಡೆದ ಮೇಲೆ ವಿಚಾರಶೂನ್ಯತೆಯೂ, ಅರಳುಮರುಳೂ ಹೆಚ್ಚು!

ಹೇಗಾದರೂ ಹೋಗಲಿ, ಅವರಿಗೆ ಹೊಗಳಿಕೆ ಬೇಕಷ್ಟೆ! ಇವರು ನಿಸ್ಪೃಹಶಿಖಾಮಣಿಗಳು! ಪರಾಕು! ಇವರು ಉತ್ತಮಕುಲಸಂಭೂತರು! ಪರಾಕು! ಇವರು ವಿಚಾರಶೀಲರು! ಬಹು ಪರಾಕು! ಇವರ ಮುಖಪದ್ಮವಿಲಾಸ ಪರಾಕು! ಇವರ ಲೋಕೈಕಹಿತಗುಣ ಪರಾಕು!! ಸಾಕೇ?

* * * *

ನಮ್ಮಲ್ಲಿ ಶ್ರೀ ಗಾಂಧೀ ಮಹಾತ್ಮರು ಬಂದು, ನಂದೀಬೆಟ್ಟದ ಹವಾ ಕುಡಿದು, ಆರೋಗ್ಯವನ್ನೂ ಹೊಂದಿ, ಏಳು ಪೌಂಡು ತೂಕದಷ್ಟು ಬಲವನ್ನೂ ಪಡೆದು, ಬೆಂಗಳೂರಲ್ಲಿ ನೋಡಬೇಕಾದ ಸ್ಥಳಗಳನ್ನು ನೋಡಿ, ಮಾಡಬೇಕಾದ ಹಿತೋಪದೇಶಗಳನ್ನು ಮಾಡಿ ಮೊನ್ನೆ ತೆರಳಿದರು. ನನ್ನ ಮೈಸೂರು ದೇಶವು ಅವರ ಆದರಕ್ಕೆ ಪಾತ್ರವಾಗಿರುವದೊಂದು ಹೆಮ್ಮೆ. ಇಲ್ಲಿನ ರಾಜ್ಯಭಾರವು ರಾಮರಾಜ್ಯವೆಂದು ಹೆಸರುಪಡೆದಿರುವದು ಮತ್ತೊಂದು ಹೆಮ್ಮೆ. ನಮ್ಮ ಅಧಿಕಾರಿಗಳು ಇತ್ತ ಕಾಂಗ್ರೆಸ್ಸಿನ ಅತ್ತ ಬ್ರಿಟಿಷ್ ಸರ್ಕಾರದ ಅಭಿಮಾನಗಳನ್ನು ಒಂದೇ ಸಾರಿ ಪಡೆದಿರುವದೆಂದರೆ ಅದೊಂದು ಮಹತ್ವದ ಸುದ್ದಿಯೇ.

ನಮ್ಮ ಜವಾಹರ್‌ಲಾಲರು, ಮೈಸೂರು ದೇಶದ ದಿವಾನರು ಡಿನೋಕ್ರೆಸಿ ವಿಚಾರದಲ್ಲಿ ಹಿಂದೆ ನುಡಿದ ಕೆಲವು ಮಾತುಗಳ ವಿಚಾರದಲ್ಲಿ, ತಮ್ಮ 'ಸ್ವೀಯ ಚರಿತ್ರೆ'ಯಲ್ಲಿ ಟೀಕಿಸಿರುತ್ತಾರೆಯಷ್ಟೆ. ಅವರೇ ರಾಷ್ಟ್ರಧ್ವಜಕ್ಕೆ ಒದಗಿದ ಅವಮಾನದ ವಿಚಾರದಲ್ಲಿಯೂ ಒಂದೆರಡು ಮಾತುಗಳನ್ನು ಬರೆದಿರುವರಷ್ಟೆ. ದಿವಾನರವರೂ ಸಹ ಸೋಷಿಯಲಿಸಂ, ಕಮ್ಯೂನಿಸಂಗಳ ವಿಚಾರದಲ್ಲಿ ತಮ್ಮ ಅಡ್ರೆಸ್‌ನಲ್ಲಿ ಒಂದೆರಡು ವಿಚಾರಗಳನ್ನು ಪ್ರಸ್ತಾವಿಸಿದ್ದಾರೆ. ಬಹುಶಃ ರಾಷ್ಟ್ರಧ್ವಜದ ನಿರ್ಬಂಧವೂ ಮೈಸೂರಲ್ಲಿ ತೊಲಗಬಹುದೆಂದು ತೋರುತ್ತದೆ. ಅದು ಶುಭಯೋಗವೇ ಸರಿ.

ಶ್ರೀ ವಲ್ಲಭ ಭಾಯಿ, ಶ್ರೀ ಮಹಾದೇವ ದೇಶಾಯಿ, ಶ್ರೀ ಮಣಿ ಭೇನ್ ಮತ್ತು ಗಾಂಧಿ ಮಹಾತ್ಮರ ಮೊಮ್ಮಕ್ಕಳು ಮೈಸೂರಿಗೆ ಬಂದು ಅಸೆಂಬ್ಲಿಯನ್ನು ನೋಡಿ, ಮೈಸೂರಿನ ದೃಶ್ಯಗಳನ್ನು ನೋಡಿ, ಅಧಿಕಾರಿಗಳ-ಪ್ರತಿನಿಧಿಗಳ ಪರಸ್ಪರ ಸಹಕಾರಗಳನ್ನು ನೋಡಿ ಸಂತೋಷಪಟ್ಟು ತೆರಳಿದರು. ಮಹಾತ್ಮರೂ ಬರುತ್ತಾರೆಂದು ನಿರೀಕ್ಷೆಯಿತ್ತು. ದೈವವಶಾತ್ ತಪ್ಪಿ ಹೋಯಿತ್ತು. ಮಹಾತ್ಮರೂ ಪರಿವಾರವೂ ಮೈಸೂರಿನ ವಿಶ್ವಾಸವನ್ನು ಬಹಳವಾಗಿ ಹೊಗಳಿ, ಸಂತೋಷವನ್ನು ವ್ಯಕ್ತಗೊಳಿಸಿ 'ದೇವರು ಕಳುಹಿಸಿದಾಗ ಬರುತ್ತೇನೆ' ಎಂದು ಹೇಳಿ ಹೋದರು.

ವಿಶ್ವ ದಾಸಯ್ಯ.


NIMBIN

ಜೀರ್ಣಕಾರಿಯಾದ ರಕ್ತ ಶುದ್ಧಿಯ ಟಾನಿಕ್.

- ನಿಂಬಿನ್-ರಕ್ತದಿಂದ ವಿಷಮಯವಾದ ಆಶುದ್ಧತೆಗಳನ್ನು ಹೋಗಲಾಡಿಸುತ್ತದೆ.
- ನಿಂಬಿನ್-ರೋಗದ ಮೂಲದ ವರೆಗೆ ವ್ಯಾಪಿಸತಕ್ಕ ಔಷಧವಾಗಿದೆ.
- ನಿಂಬಿನ್-ನಿಜವಾಗಿಯೂ ಆಯುರ್ದಾಯವನ್ನು ಹೆಚ್ಚಿಸಿ, ಶರೀರದಲ್ಲಿನ ರಕ್ತದ ಅಂಗಭೂತದ್ರವ್ಯಗಳನ್ನು ವೃದ್ಧಿಗೊಳಿಸುತ್ತದೆ.
- ನಿಂಬಿನ್-ಕಳುಹಿನಲ್ಲೇನೂ ಉಳಿಯದೆ ನಿಶ್ಶೇಷವಾಗಿ ಬರಿದಾಗುವಂತೆ ಖಚಿತಗೊಳಿಸತ್ತದೆ.
- ನಿಂಬಿನ್-ಜೀರ್ಣಶಕ್ತಿಯನ್ನು ಸುಧಾರಿಸಿ ಅತ್ಯುತ್ಕೃಷ್ಟವಾದ ಹಸಿವೆಯನ್ನುಂಟುಮಾಡುತ್ತದೆ.
- ನಿಂಬಿನ್-ರಕ್ತವನ್ನು ಪರಿಶುದ್ಧಗೊಳಿಸಿ, ನಿಮ್ಮನ್ನು ಉಜ್ವಲವಾದ ಆರೋಗ್ಯಸ್ಥಿತಿಯಲ್ಲಿ ಇರಿಸುತ್ತದೆ.
- ನಿಂಬಿನ್-ಚರ್ಮದ ಸೌಂದರ್ಯವನ್ನು ಕೆಡಿಸತಕ್ಕ ಎಲ್ಲ ಚರ್ಮವ್ಯಾಧಿಗಳನ್ನೂ ನಿವಾರಿಸುತ್ತದೆ.

ಮೈಒಣ್ಣಕ್ಕಾಗಿಯೂ, ಶರೀರದ ಸುವ್ಯವಸ್ಥೆಗಾಗಿಯೂ ನಿಂಬಿನನ್ನೇ ಉಪಯೋಗಿಸಿರಿ.

ಬಾಟಲಿಯೊಂದಕ್ಕೆ ಬೆಲೆ ರೂ. 1—10—0.
ಪೋಸ್ಟೇಜ್ ಮತ್ತೂ ಪ್ಯಾಕಿಂಗ್ ಪ್ರತ್ಯೇಕ.

*Sole Distributors:*
**Variety Trading Corporation,**
*257, Chickpet, Bangalore City.*
*Stockists:* **Appah & Co.,**
*China Bazaar Street, Madras*


## ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮತ್ ಸುಕೃತೇಂದ್ರ ತೀರ್ಥ ಶ್ರೀಪಾದಂಗಳವರು ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ:—ನಾವು ವೇದ ಮೂರ್ತಿ ಮಂಗಳೂರು ಕೃಷ್ಣ ವಾಸುದೇವ ಭಟ್ಟರಿಗೆ ರಿಜಿಸ್ಟ್ರಿ ನಿಶಿ ಬರಸಿಕೊಟ್ಟ ವಿಶೇಷ ಮೊಕ್ತ್ಯಾರನಾಮೆ ಯಾನೆ ಪವರ ಆಫ್ ಎಟರ್ನಿಗಳನ್ನು ನಾವು ರದ್ದುಪಡಿಸಿರುತ್ತೇವೆ. ಸದರಿ ಮೊಕ್ತ್ಯಾರನಾಮೆಯು ಜ್ಯಾರಿಯಲ್ಲಿ ಇಲ್ಲದೆ ಇರುವುದರಿಂದ ಯಾರಾದರೂ ಅದರ ಆಧಾರಗೊಂಡು ಸದರಿ ಕೃಷ್ಣ ವಾಸುದೇವ ಭಟ್ಟರು ನಮ್ಮ ಕಡೆ ಮುತಾಲಿಕರೆಂತ ಭಾವಿಸಕೂಡದು. ಮತ್ತು ಆ ನೆಲೆಯಲ್ಲಿ ಅವರ ಕೂಡೆ ಯಾವ ಲೇವಾದೇವಿಯೂ ನಡಿಸಕೂಡದು. ಇದಕ್ಕೆ ವಿರೋಧವಾಗಿ ಯಾರಾದರೂ ಅವರ ಕೂಡೆ ಲೇವಾದೇವಿ ನಡೆಸಿದರೂ ಅದು ನಮ್ಮ ಮೇಲಾಗಲೀ ಶ್ರೀ ಸಂಸ್ಥಾನದ ಮೇಲಾಗಲೀ ಸಿಂಧಾಗತಕ್ಕದ್ದಲ್ಲ.

ಸುಕೃತೀಂದ್ರ ತೀರ್ಥ ಸ್ವಾಮಿ,
2, 19—6 ಕಾಶೀಮಠ ಸಂಸ್ಥಾನ.

## ನೋಟೀಸು

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

S. C. 240/1935.

ಪಳ್ಳಿ ಸಂಜೀವ ಹೆಗ್ಡೆ—ವಾದಿ.

ಗ್ರೆಗೋರಿ ಡಿ'ಸೋಜ ನಕ್ರೆ ಕೊಡ್ಸರ ಪಲ್ಕೆ ಬಾಬು ಯಾನೆ ಜೂಜೆ ಸೋಜರ ಮಗ ಹಾಲಿ ಮೈಸೂರು ಜಿಲ್ಲಾ ತರಿಕೆರೆ ತಾಲೂಕು ಮಂಡಲ್‌ಕಾನ್ ಎಸ್ಟೇಟಿನ ರೈಟರನಾಗಿ ಅಲ್ಲಿರುತ್ತಾನೆ. } ಪ್ರತಿವಾದಿ(ಗಳು)

ಪ್ರತಿವಾದಿಯು ಆತನ ಗರ್ಜಿನ ಬಗ್ಗೆ ವಾದಿಯಿಂದ ತಕ್ಕ ಪ್ರತಿಫಲಪಡೆದು, ಆ ಬಗ್ಗೆ ವಾದಿಗೆ ತಾ. 28-5-'35ರಲ್ಲು ರೂ. 30ಕ್ಕೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಐವಜನ್ನು ಬರಮಾಡುವ ಬಗ್ಗೆ ವಾದಿಯು ಪ್ಲೇಲ್ಯಾಣಿಸಿದ ದಾವೆ ಮಾಡಿರುತ್ತಾನೆ. ಸದರಿ ದಾವೆಯು ಪ್ರತಿವಾದಿಯ ನೋಟೀಸಿನ ಬಗ್ಗೆ ವಾದಿಯ ಆಪ್ಪೈರು ತೀರ್ಮಾನದ ಬಗ್ಗೆ ಎಂತ ತಾರೀಕು 13-7-1936ಕ್ಕೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯು ಆಕ್ಷೇಪಗಳಿದ್ದರೆ ಸದರಿ ತಾರೀಕಿನ ದಿನ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜರಾಗಿ ಆತನ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು. ಇಲ್ಲದಿದ್ದರೆ, ಆತನ ಗೈರುಹಾಜರಿಯಿಂದ, ಸದರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)
ಕೆ. ಮಹಾಬಲ ಹೆಗ್ಡೆ,
ತಾ. 16—6—'36. ವಾದಿಯ ಕಡೆ ವಕೀಲ್.

## ನೋಟೀಸು

**ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O. P. No. 43/1936.

ಶೇಶಮ್ಮ—ಅರ್ಜಿದಾರಳು.

ಮತ್ತು

ಲಕ್ಷ್ಮೀಅಮ್ಮತಿ (ಮ್ಯಾನರಳು)—ಎದ್ರಿಳು.

ಇವರೊಳಗೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಆಲಂಗಾರು ಗ್ರಾಮದಲ್ಲಿ ವಾಸವಾಗಿರುತ್ತಿದ್ದು ತಾರೀಕು 19—6—1934ರಲ್ಲು ಮೃತವಾಗಿರುವ ಕೆ. ಗುಮ್ಮಣ್ಣಯ್ಯ ಎಂಬವರ ಜಾಬ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನವರ ಸ್ವಾಧೀನ ಇರುವ ಪ್ರೊವಿಡೆಂಟ್ ಫಂಡು ರೂಪಾಯಿ 515—6—0 ಮತ್ತು ಇದರ ಮೇಲಣ ಬಡ್ಡಿ ಕೂಡ ಸದ್ರಿ ಗುಮ್ಮಣ್ಣಯ್ಯನ ನೋಮಿನಿ ಮತ್ತು ವಾರಿಸುದಾರಳಾಗಿರುವ ತನಗೆ ಸಿಕ್ಕುವ ಹಾಗೆ ಕಾನೂನು ಪ್ರಕಾರ ವಾರಿಸ್ ಸರ್ಟಿಫಿಕೇಟು ಕೊಡಬೇಕಾಗಿ ಪ್ರಾರ್ಥಿಸಿ ಅಳಿಯಸಂತಾನ ಲೋ ಆಚರಣೆಯವರಾಗಿದ್ದು ಸದರಿ ಗುಮ್ಮಣ್ಣಯ್ಯನವರ ಸೊಸೆ ಕಾರ್ಕಳ ತಾಲೂಕು ವಂಗ ಗ್ರಾಮದಲ್ಲಿರುವ ಶೇಶಮ್ಮನು ಅರ್ಜಿದಾರಳಾಗಿ ಮೇಲೆ ಕಾಣಿಸಿರುವ ಅರ್ಜಿಯನ್ನು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ದಾಖಲುಮಾಡಿರುತ್ತಾಳೆ. ಸದರಿ ಅರ್ಜಿಯು 1936ನೇ ಇಸವಿ ಜುಲ್ಯಾ ತಿಂಗಳ 15ನೇ ತಾರೀಕಿಗೆ ಇಡೋಣಾಗಿಯದೆ. ಸದರಿ ಶೇಶಮ್ಮನು ಸದರಿ ಕೆ. ಗುಮ್ಮಣ್ಣಯ್ಯನ 'ನೊಮಿನಿ' ಕೂಡ ಆಗಿರುತ್ತಾಳೆ. ಅರ್ಜಿದಾರಳ ಅರಿಕೆಯನ್ನು ಪೂರೈಸುವಲ್ಲಿ ಆಕ್ಷೇಪ ಉಳ್ಳವರು ತಾರೀಕು 15—7—1936ನೇ ದಿನ ಪೂರ್ವಾಹ್ನ 11 ಘಂಟೆಗೆ ಮೇಲೆ ಕಾಣಿಸಿರುವ ಕೋರ್ಟಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಉದಾಹರಿಸಬಹುದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

(ಕೋರ್ಟಿನವರ ಹುಕುಂ ಪ್ರಕಾರ)
ಇಡ್ಯದ ವಾಸುದೇವಯ್ಯ,
ತಾ. 16—6—'36. ಅರ್ಜಿದಾರಳ ಕಡೆ ವಕೀಲ್.


1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

## ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ್ಬ್ಬ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚಿವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು. **ಬಾಟ್ಲಿ 1ಕ್ಕೆ ರೂ. 2—8—0.**

## ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣಜ್ವರ, ಕಫಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. **ಬಾಟ್ಲಿ 1ಕ್ಕೆ ರೂ. 1—8—0.**

## ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ಕಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹರೋಗಗಳನ್ನು ಗುಣಪಡಿಸುವುದು. **ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.**

**ಎಮ್. ಗಣಪಯ್ಯ ಎಂಡ್ ಸನ್ಸ್,** ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬ್ರ **18,** ಮಂಗಳೂರು.

**ನಮ್ಮ ಔಷಧಿ ಸಿಕ್ಕುವ ಸ್ಥಳ:**—ಶ್ರೀ ರಾಮಾ ಸ್ವೀಶನರಿ ಹೌಸ್, ಶ್ರೀ ರಾಮು ಪೇಟೆ, ಕಾಸರಗೋಡು. ಡಾ। ಶ್ರೀನಿವಾಸ ಪೈ, ಪುತ್ತೂರು. ಮುಲ್ಲರಪೆಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ಎಟ್ಟಲ ಭ್ಯಾ ಪಟೇಲ್ ರೋಡ್, ಹುಂಬಾಯಿ. ದಿ ವೆಂಕಟಿ ಹೋಲ್, ಮಡಿಕೇರಿ, ಕೂರ್ಗ್. ರಾವ್ ಫಾರ್ಮಸಿ, ಸಾಗರ.

# ವಿಶ್ವವಿಚಾರ

(ವಿಮಾನಪತ್ರ)

**ಪೆಲೆಸ್ತೀನದಲ್ಲಿ ಯೆಹೂದ್ಯರು:—** ಯೆಹೂದ್ಯರನ್ನು ಯೆರೂಸಲೇಮಿನ ಪ್ರದೇಶದಿಂದ ಹೊರಡಿಸುವಾಗ ಎರಡು ಸಾವಿರ ವರ್ಷಗಳ ವರೆಗೆ ದಿಗ್ದೇಶಗಳಲ್ಲಿ ಅಲೆದಾಡಿ ಅನಂತರ ಯೆರೂಸಲೇಮಿಗೆ ಬರಬಹುದು ಎಂದು ಅವರನ್ನು ಹೊರಗೆ ಅಟ್ಟಿದರೆಂದು ಒಂದು ಭವಿಷ್ಯವನ್ನು ಈ ಯೆಹೂದ್ಯರು ನಂಬಿ, ಈಗ ಕೆಲವು ವರ್ಷಗಳಿಂದ ಪೆಲೆಸ್ತೀನಕ್ಕೆ ಬಂದು ನೆಲೆನಿಂತಿದ್ದಾರೆ. ಯುರೋಪಿನ ಎಲ್ಲಾ ಭಾಗಗಳಿಂದಲೂ ಸಾಧಾರಣ ತಿಂಗಳಿಗೆ ೪,೦೦೦ಕ್ಕೆ ಕಡಿಮೆಯಾಗದಷ್ಟು ಮಂದಿ ಇನ್ನೂ ಬರುತ್ತಲೇ ಇದ್ದಾರೆ. ಜರ್ಮನಿಯಲ್ಲಿ ಹಿಟ್ಲರು ಇವರ ಮೇಲೆ ದಂಡನೀತಿಯ ಪ್ರಯೋಗವಾಡಿದ ಮೇಲಂತೂ ನಿಷ್ಕಂಟಕವಾಗಿ ಸಿಲ್ಲಲು ಇದೊಂದೇ ಸ್ಥಳವೆಂದು ಭಾವಿಸಿ ಬ್ರಿಟಿಷರ ಮೆಂಡೇಟಿನ ಆಶ್ರಯದಲ್ಲಿ ಇವರು ಪೆಲೆಸ್ತೀನಕ್ಕೆ ಬಂದು ನೆಲಸುತಿದ್ದಾರೆ. ಇವರು ಸ್ವಭಾವತಃ ಕೈಗಾರಿಕೆ, ವ್ಯಾಪಾರ, ಲೇವಾದೇವಿ, ಕೃಷಿಗಳಿಂದ ಪೆಲೆಸ್ತೀನನ್ನು ತೀರಾ ಮಾರ್ಪಡಿಸತೊಡಗಿದ್ದಾರೆ.

ಬ್ರಿಟಿಷರು ತಮಗೆ ಇದು ಸುಲಭದಲ್ಲಿ ಸಿಕ್ಕಿದ ಭೋಗ್ಯಾದಿ ಆಡವಿನ ಆಸ್ತಿ ಎಂದು ಭಾವಿಸಿದ್ದರೂ ಈಗ ಒಳದಂಗೆಗಳನ್ನು ಅಣಗಿಸಲಿಕ್ಕೆ ಸೈನ್ಯವನ್ನು ಉಪಯೋಗಿಸಬೇಕಾಗಿ ಬಂದಿದೆ. ಯೆಹೂದ್ಯರಿಗೆ ಕೊಟ್ಟ ಆಶ್ವಾಸನವನ್ನು ನಡಿಸಲಿಕ್ಕೂ ಇಲ್ಲ. ಅರಬ್ಬಿಯರನ್ನು ಸಮುದಾಯಿಸಿ ಶಾಂತಿಯನ್ನು ನೆಲೆಗೊಳಿಸಲಿಕ್ಕೂ ಅಲ್ಲ. ಇಂಥ ಉಭಯಸಂಕಷ್ಟದಲ್ಲಿ ಬಿದ್ದಿದ್ದಾರೆ.

**ಇಟೆಲಿಯ ಮಾತಿನ ಚಮತ್ಕಾರ:—** ಅಬಿಸ್ಸೀನಿಯವನ್ನು ನುಂಗಿ ಆಯಿತೆನ್ನುವಾಗ 'ಬ್ರಿಟಿಷರೊಡನೆ ತಮಗೆ ಜಗಳವಿಲ್ಲ. ಅವರ ಹಕ್ಕುಗಳಿಗೆ ತಾವು ಕೈಚಾಚುವುದಿಲ್ಲ' ಎಂದು ಮುಸಲೋನಿಯು ಹೇಳುವುದರಲ್ಲಿ ಅರ್ಥವಿದೆ. ಈಜಿಪ್ಟವು ಸೂಡಾನ ತಮ್ಮದೆಂದು ವಾದಿಸಿದರೂ ಬ್ರಿಟನು ಅದನ್ನು ಈಜಿಪ್ಟಕ್ಕೆ ರಾಜಿಯಿಂದ ಬಿಟ್ಟುಕೊಡುವ ಹಾಗಿಲ್ಲ. ಆದರೆ ಸೂಡಾನನ್ನು ಸಂಪೂರ್ಣವಾಗಿ ರೂಪಿತಕ್ಕೆ ತರಬೇಕಾದರೆ ಕರಿ ನೀಲ ನದಿಯ ಶಾಖೆಯ



ಮ್ಯೂನಿಕ್ ನಗರದ ಸುಂದರವಾದೊಂದು ದೃಶ್ಯ. ಆರನೇ ಅಂತರ್ರಾಷ್ಟ್ರೀಯ ಕಮ್ಯೂನಲ್ ಕಾಂಗ್ರೆಸು ಇಲ್ಲಿ ಇದೇ ತಾ. ೬ರಿಂದ ೧೩ರ ವರೆಗೆ ನಡೆಯುತ್ತು.

ಇವರು ಯುದ್ಧಪ್ರಿಯರಲ್ಲ. ಅದರೆ ಇನ್ನರ್ ದುಡ್ಡು ಯುರೋಪಿನ ಯುದ್ಧಗಳಲ್ಲಿ ಇತ್ತಟ್ಟಿನವರಿಗೂ ಸಹಾಯವನ್ನಾಡಿದೆ. ಜರ್ಮನರಿಗೆ ಇವರ ಮೇಲಿರುವ ದ್ವೇಷವು ಇದೇ. ಇವರು ದುಂದುವೆಚ್ಚನಾಡುವವರಲ್ಲ. ಹಿಂದುಸ್ಥಾನದ ಮಾರವಾಡಿಗಳಂತೆ ಎಷ್ಟೂ ಕಷ್ಟಪಟ್ಟು ಜೀವನ ನಡಿಸುವವರು. ಸಾಲ ಕೊಡುವವರಲ್ಲದೆ ಸಾಲ ಪಡೆದು ಜೀವಿಸುವವರಲ್ಲ. ಹೀಗಾಗಿ ಇವರು ಬಂದು ಸೇರಿದ್ದರಿಂದ ಅನೇಕ ಅರಬಿಯರ ಸ್ಥಳಗಳನ್ನು ತೀರಾ ಬಂಜರಾದ ಸ್ಥಳಗಳನ್ನೇ ಬೆಲೆಗೆ ಕೊಂಡುಕೊಂಡು ಅವುಗಳ ಮೇಲೆ ಲಕ್ಷ್ಮಿಯು ನಲಿಯುವಂತೆ ಮಾಡುತಿದ್ದಾರೆ. ಹೀಗಾಗಿ ಅರಬ್ಬಿಯರು ತಮ್ಮ ಕೈಯಿಂದ ಕಳಚಿ ಹೋಗುವ ಪ್ರದೇಶವು ಬೆಳೆಸಲಗಳಿಂದ ನಗುತ್ತಿರುವುದನ್ನು ಕಂಡು ತಮ್ಮ ಪವಿತ್ರ ಸ್ಥಳವು ತಮಗೆ ಹಿಂದಕ್ಕೆ ಸಿಗಬೇಕೆಂದು ಚಳವಳಿ ಎಬ್ಬಿಸಿ ಸುತ್ತುಮುತ್ತಲಿನ ಅರಬ್ಬಿಯರ ಸಹಾನುಭೂತಿಯನ್ನು ಪಡೆಯಲು ಯತ್ನಿಸುತಿದ್ದಾರೆ. ನೀರನ್ನು ತ್ಸಾನಾ ಸರೋವರದಿಂದ ಹೊರಟೊಡನೆ ಅಣೆಕಟ್ಟು ಹಾಕಬೇಕು. ಅದರಿಂದ ಈಗಿನ ನೀರಾವರಿಯ ಸೇಕಡಾ ೫೦ರಷ್ಟು ನೀರು ಹೆಚ್ಚಿ ಈಜಿಪ್ಟಕ್ಕೂ ಸೂಡಾನಿಗೂ ಕೃಷಿಗೆ ವಿಶೇಷ ಸಹಾಯಕವಾಗುವುದು. ಆದ್ಧರಿಂದ ಅಬಿಸ್ಸೀನಿಯದ ಈಶಾನ್ಯ ಭಾಗದ ಮೇಲೆ ಬ್ರಿಟಿಷರಿಗೆ ಕುಹುಕಿ ಹಕ್ಕು ಸ್ಥಾಪನೆಮಾಡಲು ಇಟೆಲಿಯವರು ಆಕ್ಷೇಪಿಸುವುದಿಲ್ಲವೆಂದು ಈ ಗೂಡಾರ್ಥದ ಮಾತಿನ ಅಭಿಪ್ರಾಯ. ಅಷ್ಟಕ್ಕೆ ಇಟೆಲಿಯು ಒಪ್ಪಿದರೆ ಪಾರಮಾರ್ಥಿಕ ವಿಚಾರವೆಲ್ಲ ಮರೆತುಹೋಗಿ ಒಂಟಿಯಾಗಿ ತಾನು ಇಟೆಲಿಯ ಮೇಲೆ ಯುದ್ಧನಾಡುವುದಿಲ್ಲವೆಂದು ಹೇಳಿದ ಮಾತನ್ನೆ ಅನುಕರಿಸಬಹುದು. ಹೋರ್ (ಇಂಡಿಯಾ ಸೆಕ್ರೆಟರಿಯಾಗಿ ನಮಗೆ ಹೊಸ ಸುಧಾರಣೆಗಳ ಕನಸಿನ ಗಂಟನ್ನು ಕೊಟ್ಟವರು) ಮತ್ತು ಫ್ರೆಂಚ ಮಂತ್ರಿಯಾದ ಲಾವಲ್ ಇವರು ಕೂಡಿ ಯುದ್ಧದ ಮೊದಲೇ ಸೂಚಿಸಿದ ಒಪ್ಪಂದದಲ್ಲಿ ಅಬಿಸ್ಸೀನಿಯದವರಿಗೆ ಅನ್ಯಾಯವಾಗುತ್ತದೆಂದು ಬ್ರಿಟಿಷರು ಗದ್ದಲಹಚ್ಚಿ ಹೋರ್ ತನ್ನ ವಿದೇಶಮಂತ್ರಿಪದವಿಗೆ ರಾಜಿನಾಮೆ ಕೊಡಬೇಕಾಯಿತು. ಅಂಥವನನ್ನು ಪುನಃ ನೌಕಾಖಾತೆಯ ಮಂತ್ರಿಯಾಗಿ ಪ್ರಧಾನಮಂತ್ರಿಯಾದ ಮಿ। ಬಾಲ್ಡ್ವೀರ್ ನೇಮಿಸಿದ್ದರಿಂದ ಈ ಒಳಸಂಚಿನ ಒಪ್ಪಂದವನ್ನು 'ಇಟಲಿಯೊಡನೆ ಬ್ರಿಟಿಷ್ ಸರಕಾರವು ಮಾಡಲಿಕ್ಕಿದೆಯೋ ಎಂಬ ಸಂದೇಹ ಬಲಗೊಳ್ಳುತ್ತದೆ.

**ಫ್ರಾನ್ಸಿನ ಹೊಸ ಮಂತ್ರಿ:—** ಹೊಸ ಮಂತ್ರಿಯಾದ ಬ್ಲೂಮ್ ಎಂಬವನು ಸಮತಾವಾದಿಗಳ ಕೂಟದವನಾಗಿದ್ದು ಈಗಲೇ ಮಜೂರರಿಗೆ ಸೌಕರ್ಯದ ಏರ್ಪಾಡುಗಳನ್ನು ಮಾಡಿದ್ದಾನೆ. ಆದ್ದರಿಂದ ಇಟಲಿ ಜರ್ಮನಿಯೊಡನೆ ಜಗಳ ಕೆಣಕುವ ಸಂದರ್ಭ ಬರುತ್ತದೋ ಎಂಬ ಸಂದೇಹ ಬರುತ್ತಿದೆ. ಆದರೆ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬದು ಇನ್ನು ಕೆಲವು ದಿವಸಗಳಲ್ಲಿ ಹೊರಬೀಳುವುದು.

**ಒಸ್ಟ್ರಿಯದ ಭವಿತವ್ಯತೆ:—** ಒಸ್ಟ್ರಿಯದ ರಾಜ್ಯಸೂತ್ರಗಳನ್ನು ಕೈಕೊಂಡವರಲ್ಲಿ ಚೆನ್ಸ್ಲರ್ ಸ್ಕುಶನಿಗ್ಗ್ ಮತ್ತು ವೈಸ್ ಚೆನ್ಸ್ಲರ್ ಪ್ರಿನ್ಸ್ ಸ್ಟಾರೆನ್‌ಬರ್ಗ್ ಇವರು ಮುಖಂಡರು. ಮೊದಲನೆಯವನಿಗೆ ಜರ್ಮನಿಯ ಹಿಟ್ಲರನ ಕಡೆಗೆ ಒಲವು ಇದೆ. ಎರಡನೆಯವನು ಇಟೆಲಿಯ ಮುಸಲೋನಿಯ ಅನುಯಾಯಿ. ಇಟೆಲಿಯ ಬೆಂಬಲವಿದ್ದುದರಿಂದಲೇ ಒಸ್ಟ್ರಿಯದಲ್ಲಿದ್ದ ಜರ್ಮನರ ಕೈ ಮೇಲಾಗಲಿಲ್ಲ. ಅದರ ಸ್ವಾತಂತ್ರ್ಯವೂ ಈ ವರೆಗೆ ಉಳಿದಿದೆ. ಮೇಲೆ ಹೇಳಿದ ಮುಖಂಡರು ಬಲಗೊಂಡು ಒಸ್ಟ್ರೇಲಿಯದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತಿದ್ದ ಪಕ್ಷವನ್ನು ತೀರಾ ಮುರಿದುಬಿಟ್ಟಿದ್ದಾರೆ. ಇಟೆಲಿಯು ಅಬಿಸ್ಸೀನಿಯದಲ್ಲಿ ಜಯಹೊಂದುವ ವರೆಗೆ ಇಟೆಲಿಯ ಸಹಾಯವು ಒಸ್ಟ್ರಿಯಕ್ಕೆ ಸಿಗುವಹಾಗಿದ್ದಿಲ್ಲ. ಹಾಗೆಯೇ ಜರ್ಮನಿಯು ರ್ಹೈನಲೆಂಡದಲ್ಲಿ ಪ್ರವೇಶಿಸುವ ವರೆಗೆ ಅವರ ಎದೆಗಾರಿಕೆ ಮತ್ತು ಯುದ್ಧಸನ್ನಾಹದ ಚಟುವಟಿಕೆಯು ಅನುಭವವು ಒಸ್ಟ್ರಿಯಕ್ಕೂ, ಅಷ್ಟೇಕೆ? ಯುರೋಪ ಖಂಡಕ್ಕೂ, ಇರಲಿಲ್ಲ. ಜರ್ಮನಿಯು ರ್ಹೈನಲೆಂಡವನ್ನು ಭದ್ರಪಡಿಸುವ ಕಾರ್ಯವನ್ನು ರಭಸದಿಂದ ಸಾಗಿಸುತ್ತಿದೆ. ಹೆಂಬರ್ಗದಿಂದ (ಜರ್ಮನಿ) ಡಚ್ಚ (ಹೊಲ್ಲೆಂಡ) ರಾಜ್ಯದ ಗಡಿ ವರೆಗೆ ಅಲ್ಲಲ್ಲಿ ವಾಯುವಿಮಾನಗಳ ಕಾರ್ಖಾನೆಗಳು ತಲೆ ಎತ್ತಿ ತಿಂಗಳಿಗೆ ೫೦೦ರಂತೆ ವಿಮಾನಗಳು ತಯಾರಾಗುತ್ತಿವೆ. ಇದಲ್ಲದೆ ಒಕ್ಟೋಬರ ನವೆಂಬರ ತಿಂಗಳೊಳಗೆ ರ್ಹೈನಲೆಂಡದಲ್ಲಿ ಕೋಟೆಗಳೂ, ಅಲ್ಲಲ್ಲಿ ಟ್ರೆಂಚ್ (ಯುದ್ಧದ ಖನಿಗಳು), ಸೈನಿಕರಿಗೆ ಅಳುಕೊಳ್ಳುವ ಆಶ್ರಯಗಳೂ ಇತ್ಯಾದಿ ತಯಾರಿ ವಿಶೇಷ ಜೋರಿನಿಂದ ನಡೆಯುತ್ತಿರುವುದು ಗೊತ್ತಾಗಿದೆ. ಹೀಗಿರುವುದರಿಂದ ಒಸ್ಟ್ರಿಯ ಮತ್ತು ಜೆಕೊಸ್ಲೊವೇಕಿಯದ ಮೇಲೆ ಜರ್ಮನಿಯು ಕೈ ಎತ್ತಲಿಕ್ಕೆ ಯಾವಾಗ ಮುಂದರಿಸೀತು ಎಂದು ಹೇಳಬರುವುದಿಲ್ಲ.

ಅಂತೂ ಹಿಟ್ಲರ್, ಮುಸಲೋನಿಗಳಂಥ (ಡಿಕ್ಟೇಟರ್) ಸರ್ವಾಧಿಪತಿಗಳಿಗೂ ತನ್ನನ್ನೆ ತಾನು ಅರಿಯಲಾರದ ಚಂಚಲ ಮನಸ್ಸಿನ ಪ್ರಜಾಸತ್ತೆಗೂ ಜಗಳವು ಹತ್ತಲಾರದೆಂದು ಖಂಡಿತ ಹೇಳಲಾರೆವು. ಇದಕ್ಕೆಲ್ಲ ಲೀಗ್ ಓಫ್ ನೇಶನ್ಸಿನ ಬೆನ್ನೆಲುಬು ಗಟ್ಟಿ ಇಲ್ಲದ್ದೇ ಕಾರಣವೆನ್ನಬೇಕು.

---

(೪ನೇ ಕಲಮಿನಿಂದ)

ಪುತ್ರರು ಸೀಮೆಯಲ್ಲಿ ಸಂಸಾರಮಾಡಿಕೊಂಡು ಇರುವರು. ಮೃತರ ಮರ್ಯಾದಾರ್ಥವಾಗಿ ಅರಮನೆ ಆಫೀಸುಗಳನ್ನು ನಿನ್ನೆಯ ದಿನ ಮುಚ್ಚಿದ್ದರು. ಇವರಿಗೆ ಅಕಸ್ಮಾತ್ ಒದಗಿದ ಮರಣದಿಂದ ಅರಸುಮಂಡಳಿಗೆ ದೊಡ್ಡ ನಷ್ಟವಾದದ್ದಲ್ಲದೆ, ಇವರ ಪರಿಚಯಹೊಂದಿದ್ದ ಸ್ನೇಹಿತರಿಗೂ ಆಫೀಸರುಗಳಿಗೂ ಬಹಳ ಸಂತಾಪಕ್ಕೆ ಕಾರಣವಾಗಿದೆ. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಕೋರುತ್ತೇನೆ.

---

# ಮೈಸೂರಿನ ಪತ್ರ

## ಮೈಸೂರು ಶ್ರೀಮನ್ಮಹಾರಾಜರವರ ಯೂರೋಪುಖಂಡದ ಪ್ರಯಾಣ.

ಶ್ರೀಮನ್ಮಹಾರಾಜರವರು ಯೂರೋಪಿಗೆ ತಮ್ಮ ದೇಹಾರೋಗ್ಯನಿಮಿತ್ತವಾಗಿಯೂ, ಇನ್ನು ರಾಜಕೀಯ ಸಂಬಂಧವಾಗಿಯೂ ದಿವಾನ್ ರೊಡನೆಯೂ ಇನ್ನು ಕೆಲವು ಅಧಿಕಾರಿಗಳೊಡನೆಯೂ ದಯಮಾಡಿಸುವ ವದಂತಿಯು ಕಂಠೀರವನ ವಾಚಕರಿಗೆ ಸಂತೋಷವಾಗದಿರದು. ಸಮುದ್ರಯಾನದ ವಿಚಾರದಲ್ಲಿ ಹಿಂದಿನಿಂದಲೂ ಮನಸ್ಸುಮಾಡದೇ ಇದ್ದ ಶ್ರೀಮನ್ ಮಹಾರಾಜರವರು ಈಗ ಹೊರಡುವ ಯತ್ನ ಮಾಡಿದ್ದು ಬಹಳ ಆಶ್ಚರ್ಯಕರವಾದ ವಿಚಾರವಾಗಿದೆ. ಮೈಸೂರಲ್ಲಿ ಈ ಸುದ್ದಿಯು ಬಹಳ ಕೋಲಾಹಲವನ್ನುಂಟು ಮಾಡಿದೆ. ಇವರು ಖಿಯನ್ನಾದ ಬಳಿ 'ವಿಚಿ' ನೀರಿನ ಬಳಿಯಲ್ಲಿಯೂ ಇತರ ಆರೋಗ್ಯಸಾಧಕವಾದ ಸ್ಥಳಗಳಲ್ಲಿಯೂ ಪ್ರವಾಸಮಾಡುವುದಾಗಿ ತಿಳಿಯಬರುತ್ತದೆ.

ಜೊತೆಯಲ್ಲಿ ಪ್ರೈವೇಟು ಸೆಕ್ರಿಟರಿಯವರೂ, ದರ್ಬಾರ್ ಸರ್ಜನರೂ ಡಾ। ಬಾಲಕೃಷ್ಣರೂ, ರಿಟೈರ್ಡ್ ರಿಜಿಸ್ಟ್ರಾರ್‌ರವರಾದ ಮಿ। ವಿ. ಸುಬ್ರಹ್ಮಣ್ಯಯ್ಯರವರೂ, ಎ. ಡಿ. ಸಿ.ಗಳೂ, ಮಿ। ಎ. ವಿ. ಸುಬ್ರಹ್ಮಣ್ಯರಾಜ ಅರಸರೂ, ಮಿ। ಸಿ. ವಿ. ಸುಬ್ರಹ್ಮಣ್ಯರಾಜ ಅರಸರೂ ಇನ್ನೂ ಇತರ ಊಳಿಗ ಪರಿವಾರದವರೂ ಸುಮಾರು ೪೦ ಮಂದಿ ಪ್ರಯಾಣ ಬೆಳೆಸುವರು. ಬೊಂಬೈಯಿಂದ ೨೭ನೇ ತಾರೀಕು ರಾನ್‌ಪುರೆ ಜಹಜಿನಲ್ಲಿ ಹತ್ತುವರೆಂದು ನಿರ್ಧಾರವಾಗಿದೆ. ಅಲ್ಲಿಂದ ಇಟೆಲಿಯಲ್ಲಿ ನೋಡತಕ್ಕ ಸ್ಥಳಗಳನ್ನು ನೋಡಿಕೊಂಡು ಲಂಡನ್‌ನಲ್ಲಿ ಕೆಲವು ಕಾಲವಿರುವರಂತೆ. ಬಹುಶಃ ನವರಾತ್ರಿ ಹೊತ್ತಿಗೆ ಮೈಸೂರು ಬರಬಹುದು.

ಪೂರ್ವಕಾಲದ ರಾಜರ್ಷಿಗಳಂತೆಯೂ, ನವೀನ ಕಾಲದ ನಾಗರಿಕತೆಯಲ್ಲಿ ಅಗ್ರಗಣ್ಯರಂತೆಯೂ ಇರುವ ಶ್ರೀಮನ್ಮಹಾರಾಜರನ್ನು ನೋಡಲು ಪಶ್ಚಿಮ ರಾಜ್ಯಗಳಲ್ಲಿ ಬಹಳ ಆದರವಿರಬಹುದು. ಮೈಸೂರಿನ ಕೀರ್ತಿಯು ಎಲ್ಲೆಲ್ಲಿಯೂ ಹರಡಿರುವುದರಿಂದ ಆ ದೇಶಾಧಿಪತಿಯ ದರುಶನಕ್ಕಾಗಿ ಪಾಶ್ಚಿಮಾತ್ಯರು ಸಂಭ್ರಮಪಡುತ್ತಾರೆನ್ನುವುದಕ್ಕೆ ಸಂದೇಹವೇ ಇಲ್ಲ. ಅನೇಕ ಪತ್ರಿಕೆಗಳಿಗೆ ಇವರು ಹೊರಟು ಬಂದು ಮೈಸೂರಿಗೆ ಬರುವ ವರೆಗೂ ಆಹಾರವು ಬಹಳವಾಗಿ ಸಿಕ್ಕುವುದು. ಅನೇಕ ಇಂಗ್ಲೀಷ್ ದೊಡ್ಡ ಮನುಷ್ಯರು ಬಹು ಆದರಾತಿಥ್ಯಗಳನ್ನು ನಡೆಸುವರು. ಬ್ರಿಟಿಷ್ ಸರಕಾರದವರೂ ಸಹ ಬಹು ಮರ್ಯಾದೆಯನ್ನು ನಡೆಸುವರು. ಇದೆಲ್ಲವೂ ಶ್ರೀಮನ್ಮಹಾರಾಜರವರ ರಾಜ್ಯಾಡಳಿತದ ಪ್ರಭಾವ.

ದಿವಾನ್‌ರವರ ಪ್ರವಾಸಕಾಲದಲ್ಲಿ ತಂಬೂ ಶೆಟ್ಟರು ದಿವಾನ್‌ರಾಗಿ ಬದಲಿ ನೋಡುವರು. ಅವರ ಸ್ಥಾನದಲ್ಲಿ ಬಹುಶಃ ಮಿ। ಯಂ. ರಾಮರಾಯರವರು ಹುಜೂರು ಸೆಕ್ರಿಟರಿಗಳಾಗಿರಬಹುದೆಂದು ವರ್ತಮಾನವಿದೆ. ಶ್ರೀಮನ್ ಯುವರಾಜರವರೂ ದಯಮಾಡಿಸುತ್ತಾರೆಂದೂ ಈಗ ವರ್ತಮಾನವಿದೆ.

## ಮೈಸೂರಿನ ದರ್ಬಾರು ಭಕ್ಷಿಯವರ ಮರಣ.

ದರ್ಬಾರು ಭಕ್ಷಿಯವರಾದ ಮಿ। ಹಾಗನವಾಳು ಲಿಂಗರಾಜ ಅರಸರು ತಮ್ಮ ೬೫ನೇ ವರುಷದಲ್ಲಿ ಹೃದ್ರೋಗದಿಂದ ಅಕಸ್ಮಾತ್ ಮೊನ್ನೆ ರಾತ್ರಿ ಕಾಲವಾದರು. ಇವರು ಪ್ರಭುಸೇವೆಯಲ್ಲಿಯೂ, ದರ್ಬಾರಿನ ಏರ್ಪಾಡುಗಳಲ್ಲಿಯೂ ಬಹಳ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿದ್ದರು. ಬಹು ತಾಳ್ಮೆಯಿಂದಲೂ, ಹಸನ್ಮುಖದಿಂದಲೂ ಇರುತ್ತಿದ್ದರಲ್ಲದೆ, ಇವರ ವಿಚಾರದಲ್ಲಿ ಪ್ರಭುಗಳಿಗೆ ಅಭಿಮಾನವೂ ಇದ್ದಿತು.

ಇವರಿಗೆ ಒಬ್ಬರು ಮಗ[illegible] ಹೆಣ್ಣು ಮಕ್ಕಳೂ, ಹೆ[illegible]

ESTD: 1906.

# CANARA BANK LIMITED.

HEAD OFFICE: MANGALORE.

| | | | |
|---|---|---|---|
| Subscribed Capital | .... | .... | 6,00,000. |
| Paid up Capital | .... | .... | 3,33,000. |
| Reserves | .... | .... | 4,50,000. |
| Deposits | .... | .... | 61,92,000. |
| Working Capital | .... | .... | 73,40,000. |

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥
[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ಸಂದ ಧೀರರು ತಾ- ।
ವಿಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥
[M. N

XVIII] ಮಂಗಳೂರು, ತಾರೀಕು ೧೯—೬—೧೯೩೬ [೨೪
೧೮೫೮ ಧಾತು ಸಂವತ್ಸರದ ಜ್ಯೇಷ್ಠ ಬ। ೩೦ ಶುಕ್ರವಾರ.

## ರೈತರಿಗೆ ಸರಕಾರದ ಸಹಾಯ.

ಕೃಷಿಯೇ ಪ್ರಧಾನವಾಗಿರುವ ಹಿಂದೂದೇಶದಲ್ಲಿ, ಈಗ ಕೆಲವು ವರ್ಷಗಳಿಂದ ಧಾನ್ಯದವಸಗಳ ಬೆಲೆ ತಗ್ಗಿ, ರೈತರ ಕೃಷಿಕಾರ್ಯವೂ, ಸಂಸಾರದ ಜೀವನಯಾತ್ರೆಯೂ ಎಂತಹ ವಿಷಮ ಸ್ಥಿತಿಗೆ ಇಳಿದಿದೆ ಎಂಬುದನ್ನು ಎಲ್ಲರೂ ಬಲ್ಲರು. ಅಕ್ಕಿ ಬೆಳೆಯಿಸುವವನೇನು? ಅಡಿಕೆಯ ಸಾಗು ಮಾಡುವವನೇನು? ಎಲ್ಲರದೂ ಗೋಳು ಒಂದೇ! 'ತಲೆಗೆಳೆದರೆ ಕಾಲಿಗಿಲ್ಲ; ಕಾಲಿಗೆಳೆದರೆ ತಲೆಗಿಲ್ಲ'!

ಈ ಮಧ್ಯೇ, ಸಾಲದ ಮೊನೆಯಾದ ಶೂಲವೊಂದು ನಮ್ಮ ರೈತರನ್ನು ಚುಚ್ಚಿ ಚುಚ್ಚಿ ಕೊಲ್ಲುತ್ತಿದೆ. ಬೆಳೆಯುವ ಬೆಳೆ ಹೊಟ್ಟೆಗೆ ಸಾಲದು; ಬಟ್ಟೆಗೆ ಸಾಲದು; ಸರಕಾರದ ಕಂದಾಯಕ್ಕೂ ಕೆಲವು ಸಲ, ಸಾಕು, ಸಾಲದು. ಅನ್ನುವಾಗ, ಸಾಲವನ್ನು ಹಿಂದೆ ಕೊಡುವ ಹಾದಿ ಯಾವುದು?

ಮಾಡಿದ ಸಾಲ ಕೊಡುವುದಂತಿರಲಿ; ಪ್ರಕೃತದ ಸ್ಥಿತಿಯಲ್ಲಿ, ಬಡ್ಡಿಯನ್ನೂ ಸರಾಗವಾಗಿ ವರ್ಷಂಪ್ರತಿ ಸಲ್ಲಿಸಲಾಗುವುದಿಲ್ಲ. ದುಡ್ಡಿದ್ದವರು, ದೊಡ್ಡ ಬಡ್ಡಿಯನ್ನೇ ಹಾಕಿ, ಅದರ ಮೇಲೆಯೂ ಷರತ್ತಿನ ಬಡ್ಡಿಯನ್ನು ಬಡಪಾಯಿಗಳ ಮೇಲೆ ಹೊರಿಸಿ, ತಮ್ಮ ಗಂಟನ್ನು ಬೇಗನೆ ದೊಡ್ಡದು ಮಾಡಲು ನೋಡುವರು. ಕುಬೇರರಾಗುವುದು ಹೇಗೆ, ಬಡ್ಡಿ ಬೆಳೆದೇ ಅಡಮಾನಗಳ ಜಮೀನುಗಳು ತಮ್ಮ ಸ್ವಾಧೀನವಾಗುವುದು ಹೇಗೆ ಎಂಬುದೇ ಅವರ ನಿರಂತರ ಚಿಂತೆ. ಅನ್ನುವಾಗ, ರೈತರು ಈ ಸಾಲದಿಂದ, ಈ ಬಡ್ಡಿಯಿಂದ ಬದುಕುವುದೆಲ್ಲಿ? ಅವರು ಋಣಮುಕ್ತರಾಗುವುದುಂಟೇ?

ಸರಕಾರವು, ಇಂತಹ ಬಡ್ಡಿಯ ವಿಷಯದಲ್ಲಿ, ಕಾನೂನನ್ನೇನೂ ರಚಿಸಲಿಲ್ಲ; ನಿಜ; ಕಂದಾಯದಲ್ಲಿ, ರೈತರು ನಿರೀಕ್ಷಿಸಿದಷ್ಟು ಮಟ್ಟಿಗೆ, ರಿಯಾಯಿತಿಯನ್ನು ತೋರಲಿಲ್ಲವೆಂಬುದೂ ನಿಜ. ಹಾಗೂ, ಭೂಸೊತ್ತುಗಳ ಅಡಮಾನದ ಬ್ಯಾಂಕುಗಳಾದರೂ, ಈ ಜಿಲ್ಲೆಯಲ್ಲಿ ಸ್ಥಾಪಿಸಲ್ಪಡಲಿಲ್ಲ; ನಿಜ. ಆದರೆ, ದವಸಧಾನ್ಯಗಳ ಬೆಲೆ ಏನಾದರೂ ಏರಬಹುದೋ ಎಂದು ಕಾದು ನೋಡಿತು ಸ್ವಾಧಾರ ಇಷ್ಟರ ವರೆಗೆ. ದುರದೃಷ್ಟದಿಂದ ಅದು ಏರಲಿಲ್ಲ. ರೈತನ ಸ್ಥಿತಿ ಸುಧಾರಿಸಲಿಲ್ಲ.

ಇದೆ, ರೈತನ ಪರಿಸ್ಥಿತಿ ಸುಧಾರಿಸದೆ ಹೋದುದರಿಂದಲೂ, ಅವನ ಪಾಡು ಮುಂದೆಯೂ ಎಲ್ಲರಿಗೂ ತೊಂದರೆ ಬಂದೇ ಬರುವುದೆಂಬುದು ಖಂಡಿತವಾದುದರಿಂದಲೂ,— ಗಾಂಧಿಯವರು ಗ್ರಾಮೋದ್ಧಾರದ ಕಡೆಗೆ ತಿರುಗಿದರೆಂದಲ್ಲ— ನಮ್ಮ ಸರಕಾರದವರು ಈಗಲಾದರೂ ಗ್ರಾಮೋದ್ಧಾರಕಾರ್ಯಕ್ಕಾಗಿ ಮನಸ್ಸು ಮಾಡಿ, ಅದರಲ್ಲಿ ಮುಖ್ಯವಾದ ರೈತರ ಸಾಲದ ವಿಷಯದಲ್ಲಿ ಈ ಹೊಸ ಏರ್ಪಾಡು ಮಾಡಿರುವುದು, ನಮ್ಮೆಲ್ಲರ ಕೃತಜ್ಞತೆಯು ಸಲ್ಲತಕ್ಕ ಅಭಿನಂದನೀಯ ವಿಚಾರವಾಗಿದೆ.

ರೈತರಿಗೆ ಕೊಡತಕ್ಕ ಸಾಲಗಳ ಬಗೆಗೆ, ನಮ್ಮಲ್ಲಿಗೂ ಒಬ್ಬ ಸ್ಪೆಶಲ್ ಲೋನ್ ಆಫೀಸರರು ಬಂದಿರುವರೆಂಬುದನ್ನೂ, ಆ ಸಾಲದ ಸ್ಥೂಲಮಾನವಾದ ರೀತಿನೀತಿಗಳೇನೆಂಬುದನ್ನೂ ನಾವು ಹಿಂದಿನ ಸಂಚಿಕೆಯ ವಾರ್ತಾಕಲಮಿನಲ್ಲಿ ಶ್ರುತಪಡಿಸಿರುತ್ತೇವೆ. ಸಾಲ ಕೊಡುವ ಕೆಲಸವೆಂದರೆ, ಬಹು ಕಷ್ಟವಾದ, ಜವಾಬುದಾರಿಯುಳ್ಳ, ಜಿಡುಕಿನ ಸಮಸ್ಯೆಯಾಗಿದ್ದು, ಸರಕಾರಕ್ಕೆ ನಷ್ಟವಾಗದಂತೆಯೂ, ರೈತರಿಗೆ ಉಪಕಾರವಾಗುವಂತೆಯೂ ಸಾಲದ ವ್ಯವಹಾರ ನಡೆಯಬೇಕಾದರೆ, ಅದಕ್ಕೆ ಸಮರ್ಥನಾದ, ದೂರದೃಷ್ಟಿ ಇರುವ, ಸ್ಥಳದ ವಿದ್ಯಮಾನಗಳ ಸಂಪೂರ್ಣ ಅನುಭವವುಳ್ಳ ಒಬ್ಬ ಯೋಗ್ಯ ಅಧಿಕಾರಿಯೇ ಬೇಕೆಂಬುದು ನಿರ್ವಿವಾದ ತಾನೇ?

ಇಂತಹ ಸಮರ್ಥ, ಯೋಗ್ಯ ಆಫೀಸರರೇ ನಮ್ಮ ಜಿಲ್ಲೆಗೂ ದೊರಕಿದರೆಂದು ನಾವೀಗ ಸಂತೋಷಪಡಬಹುದಾಗಿದೆ. ನಮ್ಮಲ್ಲಿಗೆ ಸ್ಪೆಶಲ್ ಲೋನ್ ಆಫೀಸರರಾಗಿ ಬಂದಿರುವ ಸ್ಥಳೀಯರೇ ಆದ ಶ್ರೀ. ಬಿ. ಆನಂದ ಬಾಳಿಗರವರು, ಇಲ್ಲಿ ಹಿಂದೆ ಹಲವು ವರ್ಷ, ಸರಕಾರದ ಹಲವು ಕೆಲಸಗಳಲ್ಲಿ ಚೆನ್ನಾಗಿ ವಿಚಕ್ಷಣತೆಯಿಂದ ಕೆಲಸ ನಡೆಸಿ, ಈ ಜಿಲ್ಲೆಯ ಸಂಪೂರ್ಣ ಅನುಭವ ಪಡೆದಿರುವವರೂ ಅಲ್ಲದೆ, ಸುಪರಿಚಿತರೂ, ಜನಪ್ರೀತರೂ ಆಗಿರುವರು. ಈ ಮಹನೀಯರ ಸಲ್ವಿಚಾರದಿಂದ ಮತ್ತೂ ಆಡಳಿತದಿಂದ, ನಮ್ಮ ಜಿಲ್ಲೆಯ ರೈತರಿಗೆ ಯಥಾಯೋಗ್ಯವಾದ ಸಾಲವು ಮೆ ಬಡ್ಡಿಯಲ್ಲಿ ಸಕಾಲಕ್ಕೆ ದೊರಕಿ, ನಮ್ಮ ಪ್ರಭುತ್ವದವರ ಸದುದ್ದೇಶವೂ ಬೇಗನೆ ಸಾರ್ಥಕ ಆಗುವುದು ನಾವು ನೆರೆ ನಂಬಿರುತ್ತೇವೆ.

## ಓರಿಯಂಟಲ್

### ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯ ಡೈರೆಕ್ಟರ್ ಮಂಡಲವು, ೧೯೩೫ನೇ ಇಸ್ವಿಯ ಈ ಕಂಪೆನಿಯ ವರದಿಯನ್ನು, ಅದರ ಪಾಲುಗಾರರಿಗೂ, ಪಾಲಿಸಿದಾರರಿಗೂ, ಅದರ ೬೧ನೆಯ ವಾರ್ಷಿಕ ಸಾಮಾನ್ಯ ಅಧಿವೇಶನದಲ್ಲಿ ಸಮರ್ಪಿಸಿದ್ದು, ಅದರ ಪ್ರತಿಯೊಂದು ನಮ್ಮ ಕೈಯನ್ನೂ ಸೇರಿದೆ. ಇದನ್ನು ನಾವು ಅತ್ಯಾನಂದದಿಂದ ಸ್ವೀಕರಿಸಿದ್ದೇವೆ.

ಭಾರತದ ವಿಮಾ ಸಂಸ್ಥೆಗಳಲ್ಲಿ ಇದರ ಹೆಸರನ್ನು ಕೇಳದವರಿರಲಾರರು. ಇದು ನಮ್ಮ ಪುರಾತನ ಸಂಸ್ಥೆಯೆಂಬುದೊಂದೇ ಅಲ್ಲ; ಉಚ್ಚ ಶ್ರೇಣಿಯ ಉತ್ಕೃಷ್ಟ ಸಂಸ್ಥೆಯೂ ಆಹುದು. ಇದರ ವ್ಯಾಪಕತ್ವವೂ, ವ್ಯವಹಾರಗಳೂ ವಿಶಾಲವಾದುದು; ಅನ್ಯಾದೃಶವಾದುದು; ಧನಬಲವು ಅಗಾಧವಾದುದು; ಅಪಾರವಾದುದು; ಆಡಳಿತೆಯ ವಿಚಕ್ಷಣತೆಯು ಪರಮೋತ್ಕೃಷ್ಟವಾದುದು; ಪ್ರಶಂಸನೀಯವಾದುದು,-ಎಂಬುದಿದು, ಎಂದಿನಂತೆ, ಅಭಿವೃದ್ಧಿಸೂಚಕವಾದ ಗತವರ್ಷದ ವರದಿಯಿಂದಲೂ, ಅದರ ಅಂಕೆಸಂಖ್ಯೆಗಳಿಂದ-ಪರಿಸ್ಥಿತಿಯಿಂದಲೂ ತಿಳಿಯಬಹುದಾಗಿದೆ.

ಮೊದಲು, ಕಳೆದ ವರ್ಷದಲ್ಲಿ, ಈ ಸಂಸ್ಥೆ ದೊರಕಿಸಿಕೊಂಡ ಹೊಸ ವ್ಯವಹಾರಗಳ ಪ್ರಮಾಣವೆಷ್ಟೆಂದು ನೋಡುವ. ಅದು ೪೮,೮೫೮ ಪಾಲಿಸಿಗಳನ್ನು ಸಂಪಾದಿಸಿದೆ; ಅದರ ಒಟ್ಟು ಮೊತ್ತ ಸುಮಾರು ರೂ. ೮೯೦ ಲಕ್ಷ. ಅಂದರೆ, ಹಿಂದಿನ ವರ್ಷಕ್ಕಿಂತಲೂ, ೬೪೮೦ ಪಾಲಿಸಿಗಳು-ರೂ. ೧೨೭ ಲಕ್ಷದಷ್ಟು ಬೆಲೆಯುಳ್ಳುದು-ಹೆಚ್ಚು! ಈ ಫಲಿತಾಂಶವನ್ನು ಸಾಮ್ರಾಜ್ಯದೊಳಗಿನ ಇತರ ವಿಮಾ ಸಂಸ್ಥೆಗಳ ಕಾರ್ಯಕಲಾಪಗಳೊಡನೆ ಸರಿಹೋಲಿಸಿದಲ್ಲಿ, ಈ ಸಂಸ್ಥೆಯು ಹತ್ತನೆಯದೆಂದು ಕಂಡುಬರುತ್ತದೆ. (ಮಿಕ್ಕ ೯ ವಿಮಾ ಸಂಸ್ಥೆಗಳಲ್ಲಿ, ಬ್ರಿಟಿಶರ ಸಂಸ್ಥೆ ೫, ಕೆನಡದ ಸಂಸ್ಥೆ ೨, ಆಸ್ಟ್ರೇಲಿಯದ ಕಂಪೆನಿ ೨) ಮಾತ್ರವಲ್ಲ; ೪ ವರ್ಷಗಳ ಕೆಳಗೆ ೧೯೩೧ರಲ್ಲಿ ಹೊಸ ಪಾಲಿಸಿಗಳ ಸಂಖ್ಯೆ ೨೪,೪೮೬ ಇದ್ದುದು, ಈಗ, ಸೇಕಡಾ ೮೫ರಷ್ಟು ವೃದ್ಧಿಗೊಂಡು, ೪೮,೮೫೮ ಪಾಲಿಸಿಗಳನ್ನು ಈ ಸಂಸ್ಥೆ ಸಂಪಾದಿಸಿದುದೆಷ್ಟು ಪ್ರಶಂಸನೀಯ!

ಪ್ರೀಮಿಯಮಿನ ಆದಾಯವು ಗತ ವರ್ಷದಲ್ಲಿ ೨೬೬। ಲಕ್ಷಕ್ಕೂ ಮೀರಿರುತ್ತದೆ; ಅಂದರೆ ಹಿಂದಿನ ವರ್ಷಕ್ಕಿಂತ ೨೬॥। ಲಕ್ಷದಷ್ಟು ಹೆಚ್ಚು; ಹಾಗೂ, ವಾಯಿದೆ ಕಳೆಯುವ ಪ್ರಮಾಣವಾದರೂ, ಹಿಂದಿನಂತೆಯೇ, ಬಹಳ ಕಡಿಮೆದರದಲ್ಲಿಯೇ ನಿಂತಿದೆ. ಇದೂ ಗಮನಿಸಬೇಕಾದ ವಿಚಾರವಾಗಿದೆ.

ಇನ್ನು ಬಡ್ಡಿಯ ಐನ್ ಉತ್ಪತ್ತಿಯ ವಿಚಾರದಲ್ಲಿ ೭೭ ಲಕ್ಷದಷ್ಟು ಉತ್ಪತ್ತಿ ಗತ ವರ್ಷದಲ್ಲಿ ಕಂಡುಬರುತ್ತಿದೆ. ಅಂದರೆ ಹಿಂದಿನ ವರ್ಷಕ್ಕಿಂತ ೫॥ ಲಕ್ಷ ಹೆಚ್ಚು. ಇಲ್ಲಿ, ಕಳೆದ ವರ್ಷಗಳಷ್ಟು ಸುಲಭವಾಗಿ ವಿನಿಯೋಗದ ಹಾದಿಯಲ್ಲಿ ಹಣವನ್ನು ಹಾಕುವುದು ಕಷ್ಟವಾಗಿದ್ದರೂ, ಹಿಂದಿನಂತೆಯೇ ಸುಮಾರು ಸೇಕಡಾ ೫ರ ಐನ್ ಮುನಾಫೆಯ ಅಂಶವನ್ನೇ ಕಾಪಾಡಿಕೊಂಡಿರುವುದು ಅತ್ಯಂತ ತೃಪ್ತಿಕರವಾಗಿದೆ.

ಮರಣಗಳ ಸಂಬಂಧ ಪಾವತಿಯಾದ ಗತ ವರ್ಷದ ಮೊತ್ತ ರೂ. ೫೫॥ ಲಕ್ಷಕ್ಕೂ ಮೀರಿದ್ದು, ಹಿಂದಿನ ವರ್ಷಕ್ಕಿಂತ ೬॥ ಲಕ್ಷ ಹೆಚ್ಚಾಗಿದೆ. ಇದಕ್ಕೆ ಕಾರಣ ಕ್ವೆಟ್ಟದ ಭೂಕಂಪದಲ್ಲಿ ಆದ ಅಕಸ್ಮಾತಾದ ಅಪಾರ ಪ್ರಾಣನಷ್ಟ! ಈ ಕುರಿತು ಸುಮಾರು ೨॥ ಲಕ್ಷ ಸಲ್ಲಬೇಕಾಯಿತು. ಮಾತ್ರವಲ್ಲ; ಆ ಅನಾಥರ ಕಷ್ಟನಿವಾರಣೆಯ ಫಂಡಿಗಾಗಿ ೫ ಸಾವಿರ ರೂಪಾಯಿಗಳನ್ನೂ, ಈ ಸಂಸ್ಥೆ, ಬೊಂಬಯಿಯ ಮೇಯರರಿಗೆ ಕಳುಹಿಸಿಕೊಟ್ಟಿರುವುದೆಂಬುದೂ ಅಭಿನಂದನೀಯ ವಿಷಯವೇ.

ಕ್ವೆಟ್ಟದ ಭೂಕಂಪಗಳಂತಹ ಅಕಸ್ಮಾತಾದ ಪ್ರಾಣನಷ್ಟದ ಸಂದರ್ಭದಲ್ಲಿ, ಮೃತರಾಗಿ, ತನ್ಮೂಲಕ ಸಂಪಾದಿಸುವವರನ್ನು ಕಳೆದುಕೊಂಡು ನಿರ್ಗತಿಕರಾದ ಅನಾಥ ಸಂಸಾರಗಳಿಗೆ, ವಿಮಾದ್ರವ್ಯದ ಸಹಾಯವು ಮುಂದಿನ ಜೀವನಕ್ಕೆ ಎಷ್ಟು ಅನುಕೂಲವೆಂಬುದು ಈ ಉದಾಹರಣೆಯಿಂದ ವ್ಯಕ್ತ. ಜೀವವಿಮೆಗಳ ಈ ಸಾಮಾಜಿಕ ಸೇವೆಯ ಬೆಲೆಯನ್ನು, ವಿಮಾ ಕಾರ್ಯವನ್ನು ಮೆಚ್ಚದವರಿನ್ನಾದರೂ ತಿಳಿದು ನಡೆದರೆ, ಎಷ್ಟೋ ಕ್ಷೇಮವಾದೀತೆಂಬುದು ನಿರ್ವಿವಾದ.

ಆಡಳಿತದ ಖರ್ಚಿನ ಮಟ್ಟಿಗೆ, ಹಿಂದಿನ ವರ್ಷದಲ್ಲಿ, ಜುಬಿಲಿ ಸಂಬಂಧಕ್ಕೆಂದು, ಮೂಲ್ಯವೇತನದ ವೆಚ್ಚವೆಂದು ಸೇಕಡಾ ೨೩.೧ರಷ್ಟು ಖರ್ಚಾಗಿದ್ದುದು, ವರದಿಯ ವರ್ಷದಲ್ಲಿ ಪ್ರೀಮಿಯಮ್ಮಿನ ಮೊತ್ತದ ಸೇಕಡಾ ೨೨.೪ರಷ್ಟು ವೆಚ್ಚವಾಗಿದೆ. ಆದರೆ ಈ ವೆಚ್ಚವೂ ಕೂಡ ೧೯೩೩ನೇ ಇಸ್ವಿಯಿಂದಲೂ ಕೊಂಚ ಹೆಚ್ಚಾಗಿದೆ ಏಕೆಂದರೆ, ಹೊಸ ವ್ಯವಹಾರವನ್ನು ದೊರಕಿಸಿಕೊಳ್ಳುವುದರಲ್ಲಿ ಆದ ವೆಚ್ಚವೂ, ಪೋಸ್ಟೇಜು, ಪ್ರಯಾಣದ ಭತ್ತೆ, ವೈದ್ಯಕೀಯ ಫೀಸು ಮುಂತಾದುವೂ ಕೊಂಚ ಹೆಚ್ಚಿದುದರಿಂದಲೇ. ಅಂತೆಯೇ, ಕಂಪೆನಿಯನ್ನು ಮೋಸಗೊಳಿಸಲು ಮಾಡಿದ ಯತ್ನಗಳ ಸಂಬಂಧವಾದ ಮೊಕದ್ದಮೆಗಳಿಂದಲೂ ಕಾನೂನಿನ ಅಂಶದ ವೆಚ್ಚವೂ ಸ್ವಲ್ಪ ಹೆಚ್ಚಿದೆ.

ಕಂಪೆನಿಯ ಫಂಡು ಕಳೆದ ವರ್ಷ ೧॥ ಕೋಟಿಯಷ್ಟು ಹೆಚ್ಚಿ, ಈಗ ೧೭ ಕೋಟಿಯಷ್ಟಾಗಿರುವುದು ಅಭಿಮಾನಾಸ್ಪದವೆಂದು ಕೊಂಡಾಡುವುದರೊಡನೆ, ಕಂಪೆನಿಯ ಸೆಕ್ಯುರಿಟಿಗಳು ಬಹು ಭದ್ರವಾದುವುಗಳೆಂದೂ, ಇವುಗಳ ಮಾರ್ಕೆಟಿನ ಬೆಲೆಗೂ, ಪುಸ್ತಕದ ಮೌಲ್ಯಕ್ಕೂ ೪೦೨ ಲಕ್ಷಗಳಷ್ಟು ಅಂತರವಿದೆ ಎಂದೂ ತಿಳಿಸಲೂ ಸಂತೋಷವಾಗುತ್ತದೆ.

ಕಂಪೆನಿಯ ಹಣವನ್ನು ಹೆಚ್ಚು ಉಪಯುಕ್ತ ರೀತಿಯಲ್ಲಿ, ಅಂದರೆ ಶಾಖಾ ಕಟ್ಟಡಗಳನ್ನು ಕಟ್ಟಿಸಿ, ಅದರಲ್ಲಿ ಕೆಲವು ಅಂಶಗಳನ್ನು ಬಾಡಿಗೆಗೆ ಕೊಟ್ಟು, ತನ್ಮೂಲಕ ಕಂಪೆನಿಯ ಲಾಭವನ್ನು ವೃದ್ಧಿಗೊಳಿಸುವ ಕಾರ್ಯದಲ್ಲಿ ಕಂಪೆನಿ ಕಳೆದ ವರ್ಷ ತುಂಬ ಕೃತಕೃತ್ಯವಾಗಿದೆ. ಮದ್ರಾಸಿನ ಹಳೇ ಕಟ್ಟಡವನ್ನೊಡೆದು ಹೊಸ ಕಟ್ಟಡವನ್ನು ನವೀನ ರೀತಿಯಲ್ಲಿ ಅಲ್ಲಿಯೇ ಕಟ್ಟಲಾಗುತ್ತಿದೆ. ಹೊಸ ಡಿಲ್ಲಿ, ಮುಂಬೋಸಾ ಮೊದಲಾದ ಹಲವು ಸ್ಥಳಗಳಲ್ಲಿ ಹೊಸ ಕಟ್ಟಡಗಳಿಗಾಗಿ ನಿವೇಶನಗಳನ್ನು ದೊರಕಿಸಿಕೊಂಡೂ, ದೊರಕಿಸಿಕೊಳ್ಳುತ್ತಲೂ ಇದೆ.

ಸಮಗ್ರ ಭಾರತಕ್ಕೆ ಭೂಷಣಪ್ರಾಯವಾದ, ಭಾರತೀಯರ ಹೆಮ್ಮೆಯಾದ ಈ ಮಹಾ ಸಂಸ್ಥೆಯು, ಕಳೆದ ವರ್ಷದಲ್ಲಿ ತೋರಿದ ಈ ಅತಿಶಯವಾದ ಅಭಿವೃದ್ಧಿಗಾಗಿ ಅದರ ವಿಚಕ್ಷಣ ಆಡಳಿತೆಯ ಮಂಡಲಿಯನ್ನು ಅಭಿನಂದಿಸಿ, ಪ್ರತಿಯೊಬ್ಬ ಭಾರತೀಯನೂ ಈ ಸಂಸ್ಥೆಯ ವಿಮಾದಾರನಾಗುವಂತೆಯೂ, ಈ ಸಂಸ್ಥೆಯು ಬರುವ ವರ್ಷವೂ ಇದಕ್ಕಿಮ್ಮಡಿಯಾದ ವೃದ್ಧಿಯನ್ನು ತೋರುವಂತೆಯೂ ಹಾರೈಕೆ.

## ಮಂಗಳೂರು

'ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್' ಎಂದು ಮಾತ್ರವಿದ್ದ ಹೆಸರು ಇನ್ನು ಮುಂದೆ 'ದಿ ಪಳಾಯ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ' ಎಂದು ವ್ಯವಹಾರದಲ್ಲಿಯದು. ಈ ಹೊಸ ನಾಮಕರಣವು ಬ್ಯಾಂಕಿನ ಪಾಲುಗಾರರ ಎಕ್ಸ್ಟ್ರಾರ್ಡಿನರಿ ಜನರಲ್ ಮೀಟಿಂಗಿನಲ್ಲಿ ನಡೆದ ಒಂದು ಠರಾವಿನಂತೆಯೂ, ಅನಂತರದ ಮೀಟಿಂಗಿನಲ್ಲಿ ಆದ ದೃಢೀಕರಣದಂತೆಯೂ ವ್ಯವಹಾರಕ್ಕೆ ಬಂದಿದೆ. ತಿರುವಾಂಕೂರಿನ ಮಾನ್ಯ ಮಹಾರಾಜರವರ ಸರಕಾರವೂ ಕೃಪೆ ಇಟ್ಟು, ಈ ಹೆಸರಿನ ಬದಲಾವಣೆಯನ್ನು ಮನ್ನಿಸಿ ಸ್ವೀಕರಿಸಿ, ಆ ಕುರಿತು ಅಪ್ಪಣೆಯನ್ನು ದಯೆಪಾಲಿಸಿದೆ. ತಿರುವಾಂಕೂರು ಜ್ಯಾಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರ ಪುಸ್ತಕಗಳಲ್ಲಿಯೂ ಆಗಲೇ ಈ ಹೊಸ ಹೆಸರು ಬರೆಯಲ್ಪಟ್ಟಿದೆ.

ಉಡುಪಿ ಕಾರ್ಕಳ, ಮಂಗಳೂರು ಮತ್ತೂ ಕುಂದಾಪುರ ಸರ್ಕಲಿನಿಂದ ಮದ್ರಾಸ್ ಲೆ॥ ಎಸೆಂಬ್ಲಿಯ ಚುನಾವಣೆಗೆ ಉಮೇದುವಾರರಾಗಿ ನಿಂತಿರುವ ಜನಾಬ್ ಹಾಜಿ ಸಯ್ಯದ್ ಹುಸೇನ್ ಸಾಹೇಬ್ ಬಹದ್ದೂರ್, ಬೀ. ಏ., ಬಿ. ಎಲ್., ವಕೀಲ್, ಕಾರ್ಕಳ ಇವರನ್ನು ಸರ್ವಪ್ರಕಾರದಿಂದಲೂ ಮತದಾರರು ಐಕಮತ್ಯದಿಂದ ಆರಿಸಬೇಕೆಂಬುದರ ಕುರಿತು ಉಡುಪಿ ಅಂಜುಮಾನ್-ಇ-ಇಮ್ಡುದುಲ್ ಇಸ್ಲಾಮನವರು ಕಳೆದ ತಾ. ೧೭ರಲ್ಲಿ ಸಭೆ ಕೂಡಿ ತೀರ್ಮಾನಿಸಿರುವರು.

ಡಿ॥ ಬೋರ್ಡ್ ಉದ್ಯೋಗಿಗಳ ಸಂಘದ ಸಭೆಯೊಂದು ಇದೇ ಬರುವ ಆದಿತ್ಯವಾರ ತಾ. ೨೧ನೇ ಪ್ರಾತಃಕಾಲ ಗಂಟೆ ೭-೩೦ಕ್ಕೆ ಗಣಪತಿ ಹೈಸ್ಕೂಲಲ್ಲಿ ಕೂಡಿ ಬಂದು ತಮಗೆ ಸಂಭವಿಸಿರುವ ರೂಪಾಯಿಗೆ ಒಂದಾಣೆಯ 'ಕಟ್'ನ ಕುರಿತು ಆಲೋಚಿಸುವುದೆಂದೂ ಅಂದೇ ಡಿ॥ ಬೋ॥ ಪ್ರೆಸಿಡೆಂಟರಲ್ಲಿ ತೆರಳಲಿರುವ ಬೋರ್ಡಿನ ಇತರ ಉದ್ಯೋಗಿಗಳ ಡೆಲಿಗೇಟರೊಡನೆ ಸೇರುವಂತೆ, ಈ ಸಂಘದಿಂದಲೂ ಒಬ್ಬ ಡೆಲಿಗೇಟರನ್ನಾರಿಸಲಾಗುವುದೆಂದೂ, ಈ ಸಂಘದ ಮೆಂಬರ್‌ಶಿಪ್ಪನ್ನು ನಾನ್‌ಮಿನಿಸ್ಟೀರಿಯಲ್ ಅಧೀನವರ್ಗದವರಿಗೂ ವಿಸ್ತರಿಸಲಾಗುವುದೆಂದೂ ತಿಳಿದು ಬರುತ್ತಿದೆ.

(೭ನೇ ಪುಟಕ್ಕೆ ಮುಂದುವರಿಯದೆ.)

# ಹಿಂದೂದೇಶ

ಜಯಪುರದಲ್ಲಿ ಒಂದು ಭೀಷಣ ವ್ಯಾಪಾರ! ಒಬ್ಬ ಗೃಹಸ್ಥನಲ್ಲಿಗೆ ಅವನ ಸಂಬಂಧಿಕನೊಬ್ಬನು ಬಂದಿದ್ದ. ಅವನು ಅಲ್ಲೇ ಉಂಡು ಮಲಗಿ, ಮಧ್ಯರಾತ್ರಿಯಲ್ಲಿ ಆ ಮನೆಯ ಒಬ್ಬ ಚಿಕ್ಕ ಹೆಣ್ಣು ಮಗಳ ೫ ರೂಪಾಯಿಗಳ ಆಭರಣವನ್ನು ಅಪಹರಿಸಿದನೆಂತಲೂ, ಆಗ ಆ ಹುಡುಗಿ ಎಚ್ಚೆತ್ತು ಕೂಗಲು ಅವಳ ಕುತ್ತಿಗೆಯೊತ್ತಿ ಕೊಂದು ಬಾವಿಯೊಳಗೆ ಬಿಸಾಡಿರುವನೆಂತಲೂ, ಆಪರಾಧಿ ಸಿಕ್ಕಿರುವನೆಂತಲೂ ತಿಳಿದು ಬರುತ್ತದೆ.

ಕಲ್ಕತ್ತೆಯಲ್ಲಿ ಇಂಡಿಯಾ ದೇಶದ ಸಾಹಿತ್ಯ ಪಂಡಿತರದೊಂದು ಮಹಾಸಭೆ ಬೃಂದಾವನದ ಶ್ರೀ ಪಾದೋದರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿ, ಸಂಸ್ಕೃತವನ್ನು ಪೂರ್ವದ ಸ್ಥಿತಿಗೇರಿಸಬೇಕೆಂಬ ಕುರಿತು ಉಪಾತ್ತ ಭಾಷಣಗಳಾದುವು. ಸಭೆಯ ನಡವಳಿಕೆಗಳೆಲ್ಲ ಸಂಸ್ಕೃತದಲ್ಲಿಯೇ ನಡೆದುವು.

ಮೊಮ್ಮಗಳ ಮದುವೆಯ ಬಳುವಳಿಗೆಂದು ತೆಗೆದಿರಿಸಿದ್ದ ೧೦ ಸಾವಿರ ರೂಪಾಯಿಗಳ ರತ್ನಾಭರಣಗಳು, ಹುಡುಗಿಯ ಅಜ್ಜನಾದ ಈಸ್ಟ್ ಇಂಡಿಯನ್ ರೈಲ್ವೆ ಕಂಪೆನಿಯ ನಿವೃತ್ತ ಉದ್ಯೋಗಿಯಾದ ಕಲ್ಕತ್ತೆಯ ಶ್ರೀ. ಎಂ. ಕೆ. ಮಿತ್ರರವರ ಮನೆಯಿಂದ ಕಳುವಾಗಿದೆ.

ನಮ್ಮ ಆಧಿಪತ್ಯದ ಮಾಜಿ ಡೆವಲಪ್‌ಮೆಂಟ್ ಮಿನಿಸ್ಟರರೂ, ಜಸ್ಟೀಸ್ ಪಾರ್ಟಿಯ ಒಬ್ಬ ಮುಖಂಡರೂ ಆಗಿದ್ದ ಸರ್. ಟಿ. ಎನ್. ಶಿವಜ್ಞಾನ ಪಿಳ್ಳೈಯವರು ತಮ್ಮ ಪಾಮಕೋಟೆಯ ಗೃಹದಲ್ಲಿ ಕೈಲಾಸವಾಸಿಗಳಾದರು.

ಹೈದರಾಬಾದ್ ನಗರದ ಜನನಿಬಿಡವಾದ ಸುಲ್ತಾನ್ ಬಜಾರಿನ ಮೋತಿ ಮಹಲಿನ ಟೊಕಿ ಮಂದಿರಕ್ಕೆ ಅಕಸ್ಮಾತ್ ಬೆಂಕಿ ಹಿಡಿದು, ಇಡೀ ಕಟ್ಟಡವೇ ನಾಶವಾಯಿತಲ್ಲದೆ, ೧೧ ಮಂದಿ ಹೆಂಗಸರೂ, ೩ ಮಕ್ಕಳೂ ಸುಟ್ಟು ಬೂದಿಯಾದರು. ಒಂದು ಲಕ್ಷ ರೂಪಾಯಿ ಬೆಲೆಯ ೩೦ ಸಾವಿರ ಫೀಟಿನ ಒಂದು ಫಿಲ್ಮ್ ಭಸ್ಮವಾಯಿತು. ಈ ಗಲಭೆಯಲ್ಲಿ ಉಪ್ಪರಿಗೆಯ ಮೇಲಿದ್ದ ೫೪ ಮಂದಿ ಹೆಂಗಸರಲ್ಲಿ ೪೨ ಮಂದಿ ಹೇಗಾದರೂ ಬದುಕಿಕೊಂಡರು. ಅವರಲ್ಲಿ ಒಬ್ಬ ಮುಸ್ಲಿಂ ಮಹಿಳೆಯು—ಒಬ್ಬ ಸರಕಾರಿ ಉದ್ಯೋಗಸ್ಥರ ಹೆಂಡತಿ,—ಸೀರೆಯನ್ನು ಆ ಉಪ್ಪರಿಗೆಗೆ ಕಟ್ಟಿ ಏರ್ಪಡಿಸಿದ ಒಂದು ಏಣಿಯ ಮೂಲಕ ಅನೇಕ ಹೆಂಗಸರಿಳಿದು ಬದುಕಿದರು. ಈ ಮಧ್ಯೆ ಕೆಲವು ಪುಂಡರು ಹೆಂಗಸರ ಮೇಲಿದ್ದ ಆಭರಣಗಳನ್ನು ಅಪಹರಿಸಲು ಯತ್ನಿಸಿದರು. ಮೃತರಲ್ಲಿ ಮಾಜಿ ಪೋಲೀಸ್ ಕಮಿಶನರ ದಿವಂಗತ ನವಾಬ್ ಇಮಾಮ್ ಜಂಗರ ಮಗಳು; ಸೊಸೆ; ಹುಜೂರಾಬಾದಿನ ರೆವಿನ್ಯೂ ಡಿವಿಜನಲ್ ಆಫೀಸರರಾದ ಶ್ರೀ. ಮೆಹದಿಯವರ ಪತ್ನಿ; ಮೆಡಿಕಲ್ ಕಾಲೇಜಿನ ಪ್ರೊಫೆಸರರಾದ ಡಾ॥ ಹಡ್ಗೀಕರರ ಸಹೋದರಿ; ಫಾರೆಸ್ಟ್ ಶಾಖೆಯ ಕ್ಲಾರ್ಕರಾದ ಮಿ. ಶಂಕರರಾಯರ ಒಂದೇ ಕುಟುಂಬಕ್ಕೆ ಸೇರಿದ ಅವರ ತಾಯಿ; ಹೆಂಡತಿ; ತಂಗಿ. ಇದರಲ್ಲಿ ಮೇಲಿನಿಂದ ಹಾರಿ ಉಳಿದುಕೊಂಡವರು ಅಲ್ಲಿನ ಬಾರ್-ಎಟ್-ಲಾಗಳಾದ ಶ್ರೀ. ಎಸ್. ನಾಯಕರ ಹೆಂಡತಿ. ಈ ಭೀಕರವಾದ ದುಃಖಮಯವಾದ ವಾರ್ತೆಯನ್ನು ಕೇಳಿ, ಮಾನ್ಯ ನೈಝಾಂ ಸಾಹೇಬರೂ, ಸಂಸ್ಥಾನದ ದೊಡ್ಡ ಆಫೀಸರುಗಳೂ ಅಲ್ಲಿಗೆ ಬಂದು ತನಿಖೆ ನಡೆಸಿರುತ್ತಾರೆ. ಇದರ ಫಲವಾಗಿ ೩ ಸಿನೆಮಾ ಮಂದಿರಗಳನ್ನು ಮುಚ್ಚಿಸಲಾಗಿದೆ. ಸಿನೆಮದ ಅಡಳಿತದ ಬಿಗಿಯನ್ನು ಹೆಚ್ಚಿಸಲು ಒಂದು ಕಮಿಶನೂ ನೇಮಕವಾಗಿದೆ. ಸಿನೆಮದ ಅಪರೇಟರು ಬದುಕಿದ್ದಾನೆ. ಈ ಮಂದಿರದ ಬೆಂಕಿ ಸುಮಾರು ೬ ಮೈಲಿಗಳ ವರೆಗೆ ಕಂಡುಬಂದಿದೆ. ಈ ಟೊಕಿ ಗೃಹದ ಮೂಲಕರು ಕಲ್ಕತ್ತೆಯ ರಾವ್ ಸಾಹೇಬ್ ಚಾಮ್ರಿಯಾರವರು.

1934ರ ಓಲ್ ಇಂಡಿಯಾ ಮೆಡಿಕಲ್ ಕಾನ್ಫರೆನ್ಸ್ ಎಗ್ಸಿಬಿಶನಿನಲ್ಲಿ 'ಸರ್ಟಿಫಿಕೆಟ್ ಆಫ್ ಮೆರಿಟ್' ಹಾಗೂ, 1935ರ ಕೈಗಾರಿಕೆಯ ಪ್ರದರ್ಶನದಲ್ಲಿ ಬಂಗಾರದ ಮೆಡಲೂ ದೊರಕಿವೆ.

**ಮಕ್ಕಳಿಗೂ ಪ್ರಾಯಪ್ರಬುದ್ಧರಿಗೂ**

ಒಳಗೆ ಶುಚಿಯಾಗಿರಿಸುವ ಅತ್ಯಂತ ಸುರಕ್ಷಿತವಾದ, ಪಾತರಿಯಾದ ದಾರಿಗಳಲ್ಲಿ ಒಂದು, ಕ್ರಮುವಳಿಗೆ ಒಂದೊಂದು ಡೋಜ್ ಹರಳೆಣ್ಣೆ ಸೇವಿಸುವುದೇ. ಮತ್ತೆ ಇಂಡಿಯದಲ್ಲೆಲ್ಲ ಸ್ವಸ್ತಿಕಾ ಔಷಧಿವಿಶ್ರಾಣದ ಹರಳೆಣ್ಣೆಯೆಷ್ಟು ಉತ್ತಮವಾದ, ಶುದ್ಧವಾದ ಎಣ್ಣೆಯು ಬೇರೊಂದಿಲ್ಲ. ಅನೇಕ ಅತ್ಯಂತ ದೊಡ್ಡ ಆಸ್ಪತ್ರೆಗಳಲ್ಲಿಯೂ ಸರಕಾರೀ ಸಂಸ್ಥೆಗಳಲ್ಲಿಯೂ ಇದನ್ನು ಉಪಯೋಗಿಸುತ್ತಾರೆ. ಇದಕ್ಕೆ ವಾಸನೆ ಇಲ್ಲ; ರುಚಿ ಇಲ್ಲ. ಇದರ ಫ್ಲೆಲಸ ಮೃದು. ಸೇಕಡಾ 100% ಶುದ್ಧ. ಒಳಗೆ ಶುಚಿಯಾಗಿರಿಸಲು, ಮಕ್ಕಳಿಗೂ, ಪ್ರಾಯಪ್ರಬುದ್ಧರಿಗೂ ಇದಕ್ಕಿಂತ ಉತ್ತಮ ವಿಧಾನವು ಇನ್ನೊಂದಿಲ್ಲ. ತೃಪ್ತಿ ಆಗದಿದ್ದರೆ ಹಣ ಹಿಂದೆ.

ಶ್ರೀ. ನಳಿನೀರಂಜನ ಸರ್ಕಾರವರ ಮೇಲೆ ರಾಷ್ ಮೊನಿ ದೇವಿ ಎಂಬಾಕೆ ೧೩ ವರ್ಷದ ತನ್ನ ಮಗಳ ಸಂಬಂಧ ಅಶನಾರ್ಥಕ್ಕಾಗಿ ದಾವೆ ಮಾಡಿದಲ್ಲಿ ಸರಕಾರರು ಆ ವ್ಯಾಜ್ಯವನ್ನು ಆ ಕೋರ್ಟಿನಿಂದ ಪರಗಾಯಿಸಬೇಕೆಂದು ಕೇಳಿಕೊಂಡಿದ್ದರು. ಕಲ್ಕತ್ತಾ ಹೈಕೋರ್ಟಿನವರೀ ಅರಿಕೆಯನ್ನು ತಳ್ಳಿಹಾಕಿದ್ದಾರೆ.

ಅಲ್ಲಪ್ಪಿಯ ಸ್ಪೇಟ್ ಎಯಿಡೆಡ್ ಬೇಂಕಿನ ಹಾಲುಗಾರರ ಸಭೆ ನಡೆಯಕೂಡದೆಂದು ಕ್ವಿಲೋನಿನ ಡಿ॥ ಮ್ಯಾಜಿಸ್ಟ್ರೇಟರ ಅಪ್ಪಣೆ.

ಬರ್ಮಾ ಪ್ರಾಂತದ ದೇದಯು ಎಂಬಲ್ಲಿ ಅರಳೇ ಅಂಗಡಿಗಳಿಗೆ ಬೆಂಕಿ ಹತ್ತಿ ೧॥ ಲಕ್ಷ ರೂಪಾಯಿಗಳ ಪಟ್ಟು ನಷ್ಟ.

ಹೊಲ್ಕರ ಸಂಸ್ಥಾನದ ಕಾಸರವಾಡ ನಗರದ ಬಳಿ, ಕ್ರೈಸ್ತನಿಗೂ ಪೂರ್ವದಲ್ಲಿದ್ದ ಒಂದು ಪುರಾತನ ನಗರದ ಇಟ್ಟಿಗೆ, ಹಂಚು, ಗಡಿಗೆ, ಮನುಷ್ಯರ ಎಲುಬುಗಳು ಮೊದಲಾದುವು ದೊರಕಿವೆ.

ದೇಶಬಂಧು ಚಿತ್ತರಂಜನ ದಾಸರವರ ೧೧ನೆಯ ಪುಣ್ಯತಿಥಿಯು ಬಂಗಾಳದಲ್ಲೆಲ್ಲ ಯಥೋಚಿತವಾಗಿ ನೆರವೇರಿತು.

೧೬ ಗಂಟೆಗಳ ಕಾಲ ನಾಗಪುರ ಪ್ರಾಂತದಲ್ಲಿ ಬಿಡದೆ ಜಡಿಮಳೆ. ಗ್ರಾಮಾಂತರಗಳಲ್ಲಿ ಬೆಳೆ ಹಾಳಾಗಿ, ಪ್ರವಾಹದಿಂದ ಜನರಿಗೆ ಬಹಳ ಸಂಕಷ್ಟ.

ಹೈದಾಮಾನದ ಅನಕ್ಷುಕೂಲತೆಯಿಂದ ಮಿ. ರಟ್ಲ್‌ಎಜರೂ ಅವರ ಸಂಗಡಿಗರೂ ಎವರೆಸ್ಟ್ ಪರ್ವತಾರೋಹಣದ ಪ್ರಯತ್ನವನ್ನು ಈಗ ಬಿಟ್ಟಿರುವರು.

'ಈಗಿನ ರಚನಾಪದ್ಧತಿಯ ಕಾರ್ಪರೇಶನಿನಲ್ಲಿ ನನ್ನಿಂದ ಸರಿಯಾದ ಕೆಲಸವೇನೂ ಸಾಗದು' ಎಂದು ಕಲ್ಕತ್ತಾ ಕಾರ್ಪರೇಶನಿನ ಕಾಂಗ್ರೆಸ್ ಮೆಂಬರರಾದ ಡಾ. ಜೆ. ಎಂ. ದಾಸ ಗುಪ್ತರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು.

ಮುಂದಿನ ಹಣಕಾಸಿನ ಅನಿಶ್ಚಿತ ವಿದ್ಯಮಾನಗಳ ದೆಸೆಯಿಂದ, ಮುಂದೆಯೂ ಸರಕಾರದಿಂದ ಹಿಂದಿನಪ್ಪೇ ಉದಾರವಾದ ಗ್ರಾಂಟ್ ದೊರೆಯುವುದು ಕಷ್ಟವೆಂದು ನಮ್ಮ ವಿದ್ಯಾಸಂಸ್ಥೆಗಳಿಗೆ ಸರಕಾರದ ಎಚ್ಚರಿಕೆ.

ಬೊಂಬಯಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಸೋತ ವಿದ್ಯಾರ್ಥಿಗಳು ಬೊಂಬಯಿ ಯುನಿವರ್ಸಿಟಿ ಕಾನ್ಸ್ಟಿಟ್ಯೂಕೇಶನ್ ಹಾಲಿಸಲ್ಲಿ ಒಂದು ದಿನ ಗಲಭೆ ಎಬ್ಬಿಸಿದುದರಿಂದ, ಮುಂದಿನ ಅವರ ಪ್ರವೇಶಕ್ಕೆ ತಡೆಯನ್ನು ಕಲ್ಪಿಸಲಾಗಿದೆ.

# ವಿದೇಶ

ಪಾರ್ಲಿಮೆಂಟ್ ಮಂದಿರಗಳ ಮುಂಭಾಗದಲ್ಲಿ ನಮ್ಮ ದಿವಂಗತ ಚಕ್ರವರ್ತಿಗಳ ಪ್ರತಿಮೆಯನ್ನು ಸ್ಥಾಪಿಸುವುದೂ, ದೇಶದಲ್ಲೆಲ್ಲಿಯೂ ಕಿಂಗ್ ಜಾರ್ಜರ ಹೆಸರುಳ್ಳ ಪೊಲಗಳನ್ನು ತೆರೆಯುವುದೂ ತಮ್ಮ ಉದ್ದೇಶವೆಂದೂ, ಆದಕ್ಕಾಗಿ ವಂತಿಗೆ ಕೊಡಬೇಕೆಂದೂ ಲಂಡನಿನ ಮೇಯರರಾದ ಸರ್ ಪಿ. ಎನ್ಸೆಂಟ್ ರವರು, ಈ ಸಾರ್ವಜನಿಕ ಸ್ಮಾರಕದ ಕುರಿತಾಗಿ ವಿನಂತಿ ಮಾಡಿಕೊಂಡಿರುವರು.

ಇಂಗ್ಲೀಷ್ ಲೇಖಕರಲ್ಲಿ ಮಹಾಪ್ರಸಿದ್ಧ ವಿದ್ವಾಂಸರಾದ ಮಿ. ಗಿಲ್ಬರ್ಟ್ ಕೀತ್ ಚೆಸ್ಟರ್‌ಟನ್ ರು ತಮ್ಮ ೬೨ನೆಯ ವಯಸ್ಸಿನಲ್ಲಿ ದಿವಂಗತರಾದರು.

ಲಂಡನಿನಲ್ಲಿದ್ದ ಸುಮಂತ ದೀಕ್ಷಿತಲಾಲ್ ಥಾಕೂರ್ ಎಂಬ ೨೦ ವರ್ಷ ಪ್ರಾಯದ ಒಬ್ಬ ನ್ಯಾಯಶಾಸ್ತ್ರದ ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಂಡಿರುವನು. ಅತನಿಗೆ ಬುದ್ಧಿಸ್ವಸ್ಥತೆ ಇರಲಿಲ್ಲವಾಗಿ ತಿಳಿದು ಬರುತ್ತದೆ.

ಮಿ. ಬರ್ನಾರ್ಡ್ ಶಾರವರು ಇನ್ನು ಮುಂದೆ ಜನಿಕ ಭಾಷಣಗಳನ್ನು ಕೊಡುವಂತಿಲ್ಲ. ಅವರ ವಯಸ್ಸು ೭೦.

ಸಿಬಿಬ್—ಎಲ್—ಏಬಲ್ಸಿನಲ್ಲಿ ರಾಜಕೀಯ ಪಂಗಡಗಳೊಳಗೆ ಬೀಕಿಯ ಕಾದಾಟ ನಡೆದು, ಪೋಲೀಸರು ಗುಂಡು ಹಾರಿಸಬೇಕಾಯಿತು. ೪೫ ಮಂದಿಗೆ ಗಾಯ. ಅನೇಕ ಅಂಗಡಿಗಳಲ್ಲಿ ಲೂಟಿ.

ಚೀನದಲ್ಲಿ ಸಿವಿಲ್ ಯುದ್ಧವು ನಿಲ್ಲುವ ಸಂಭವ ವಿದೆ.

ಅಸ್ಟ್ರಿಯದಲ್ಲಿ ಅರಸುತನದ ರಾಜ್ಯಭಾರಕ್ಕಾಗಿ ಚಳವಳಿವೆದ್ದಿದೆ.

ಬೆಲ್ಜಿಯಮಿನ ಗಣಿಗಾರರ ಮತ್ತೂ ಲೋಹದ ಕೆಲಸದವರ ಮುಷ್ಕರ ಮತ್ತೂ ಗಲಭೆಗಳಿಂದ ಟ್ರಾಮ್ ಕಾರಿನ ಸಂಚಾರವು ಲೀಜ್ ನಗರದಲ್ಲಿ ನಿಂತಿದೆ. ಪೋಲೀಸರು ಖಡ್ಗಪ್ರಯೋಗದಿಂದ ಜನರನ್ನು ಚದರಿಸುತ್ತಿದ್ದಾರೆ.

---

(೬ನೇ ಪುಟದಿಂದ ಮುಂದುವರಿಸಿದುದು.)

ನೇಲಮ್ಮಿನ ಸರಕಾರಿ ಹೆ॥ ಕ್ವಾರ್ಟರ್ಸ್ ಆಸ್ಪತ್ರೆಯ ಹಂಗಾಮಿ ಜಿಲ್ಲಾ ಮೆಡಿಕಲ್ ಆಫೀಸರರೂ, ಸುಪರಿಂಟೆಂಡೆಂಟರೂ ಆಗಿದ್ದ ಕೇಪ್ಟನ್ ಬಿ. ದಯಾನಂದ ರಾಯರು ಮದ್ರಾಸಿನ ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ಲೆಕ್ಚರರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರು ಮಂಗಳೂರವರು.

# ಕರ್ಣಾಟಕ

ಬಳ್ಳಾರಿ ಜಿಲ್ಲೆಯ ಚಲ್ಲಗುರಕಿ ಗ್ರಾಮದಲ್ಲಿ ೬ ತಿಂಗಳ ಹಿಂದೆ ಕಾಣೆಯಾಗಿದ್ದ ವಡ್ಡೆ ಸುಂಕ ಎಂಬ ಒಬ್ಬ ಕೂಲಿಯವನ ಶವವು, ಒಂದು ಬಾವಿಯ ಕೆಸರನ್ನು ತೆಗೆಯಿಸುತ್ತಿದ್ದಾಗ ಸಿಕ್ಕಿದೆ. ಶವವು ೬ ತಿಂಗಳ ಹಿಂದಿನದು; ಸಂಪೂರ್ಣ ವಿರೂಪವಾಗಿದೆ. ಅಕಸ್ಮಿಕ ಮರಣವೆಂದು ವರದಿ.

ಮೈಸೂರು ಡಿ॥ ಬೋರ್ಡ್ ಕಾರ್ಯಾಲಯವಿದ್ದ ಕಟ್ಟಡಗಳ ಶಂಕುಸ್ಥಾಪನೆಯು ಸಮಾರಂಭವು ರಾಜಕುಮಾರ ಜಯಚಾಮರಾಜ ಒಡೆಯರವರ ಪವಿತ್ರ ಹಸ್ತಗಳಿಂದ ನೆರವೇರಿಸಲ್ಪಟ್ಟಿತು. ಈ ಶುಭಕಾರ್ಯವನ್ನು ನೆರವೇರಿಸಲಿದ್ದ ಶ್ರೀಮದ್ಯುವರಾಜರವರು ಕಾರಣಾಂತರಗಳಿಂದ ದಯೆಮಾಡಿಸಲಾಗದೆ, ಮಿ. ಟರ್ನರವರು ಶ್ರೀ. ಯುವರಾಜರವರ ಭಾಷಣವನ್ನೋದಿದರು. ಶ್ರೀ. ಜಯಚಾಮರಾಜ ಒಡೆಯರು ಅಸ್ತಿವಾರವನ್ನು ಹಾಕಿದರು.

ಬಳ್ಳಾರಿ ಜಿಲ್ಲೆಯ ಪಂಚಾಯತ ಬೋರ್ಡುಗಳ ಪ್ರೆಸಿಡೆಂಟರುಗಳದೊಂದು ಮಹಾಸಭೆಯು ಇದೇ ತಿಂಗಳ ೩೦ರಲ್ಲಿ ಹೊಸಪೇಟೆಯಲ್ಲಿ ಜರುಗುವುದು. ಅಲ್ಲಿನ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ. ವೈ. ಮಹಾಬಲೇಶ್ವರಪ್ಪನವರು ಆಂಧಿನ ಅಧ್ಯಕ್ಷತೆ ವಹಿಸುವರು.

ಕಡೂರು ಡಿ॥ ಬೋರ್ಡಿನ ಅಧ್ಯಕ್ಷರಾಗಿ ಶ್ರೀ. ಎಸ್. ಎನ್. ರಾಮಣ್ಣನವರು ಆರಿಸಲ್ಪಟ್ಟಿರುತ್ತಾರೆ. ಅವರಿಗೆ 'ಕಂಠೀರವ'ನ ಅಭಿನಂದನೆಗಳು.

ಮಳೆಗಾಲದ ಬಳಿಕ ಪಂ. ಜಹ್ವರಲಾಲರು ಕರ್ಣಾಟಕ ಪ್ರಾಂತದಲ್ಲಿ ಸಂಚರಿಸಲು ಒಪ್ಪಿರುವರು.

# ತಾಲೂಕು ವರ್ತಮಾನ

**ಮಂಗಲಪಾಡಿ:**—ಈ ಸೆಂಟರಿನ ಉಪಾಧ್ಯಾಯರ ಸಭೆಯು ಮಂಜೇಶ್ವರ ಟಿ. ಹಾ. ಶಾಲೆಯ ಶ್ರೀಯುತ ರತ್ನಾಕರ ಕಾಮತರ ಅಧ್ಯಕ್ಷತೆಯಲ್ಲಿ ತಾ. ೧೩ಕ್ಕೆ ಜರಗಿತು. ಅಧ್ಯಕ್ಷರ ಚುನಾವಣೆ, ವರ್ಷವಾಚನ, ರಾ. ಯಂ. ರಾಮನವರ ಭೂಗೋಳ ಪಾಠ, ಮು. ಶೇಕ್ ಇಬ್ರಾಹಿಮ್ ಸಾಹೇಬರ 'ಸಮಾಜೋನ್ನತಿ'ಯ ಕುರಿತು ಪ್ರಬಂಧ, ಅಧ್ಯಕ್ಷರ ಸಮಯೋಚಿತ ಭಾಷಣ, ಮುಂತಾದ ಕಾರ್ಯಕ್ರಮಗಳಿದ್ದುವು.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

ರಜತಮಹೋತ್ಸವದ ಮೂಲ್ಯವೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿದ 'ಇನ್ಶೂರೆನ್ಸ್'

**ಇದಕ್ಕೊಂದು ಉದಾಹರಣೆ:**—ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಮೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದವನಿಂದ ಸಾಧ್ಯವಿಲ್ಲವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖಮೂಲ್ಯದ ಸಂಪೂರ್ಣ ಮೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನೆಲ್ಲಿಯಾದರೂ ಮೃತನಾದರೆ, ಈತನು ತೆರದೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪುತ್ರನ್, ಬ್ರಾಂಚ್ ಮ್ಯಾನೇಜರ್,
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

## ಪತ್ರವ್ಯವಹಾರ.

**ಸೂಚನೆ:**—[ಬಾತಮಿದಾರರ ಅಭಿಪ್ರಾಯಗಳು ಕಂಠೀರವನ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ– ಸಂ.]

## ಉಡುಪಿಗೆ ಕೊಲೇಜು ಬೇಕೆ?

ಬೇಕೆ? ಎಂದು ಕೇಳಿದರೆ ಯಾರಾದರೂ ಬೇಡವೆನ್ನುವರೆ? ಆದರೆ ಕೊಡುವವರಾರೊ? ಕೊಂಬವರಾರೊ?

ದೇವರೆ! ಕೊನೆಗೂ ಉಡುಪಿಯು ಕಣ್ದೆರೆದಂತಾಯಿತು! ಪುರಜನರು ಬಿಶೊಪರಿಗೆ ಕಳುಹಿದ ಮನವಿಯೇ ಕಣ್ದೆರೆಯಿಸಿದ ನೇತ್ರ-ವೈದ್ಯ! ಕೆಥೊಲಿಕರಿಗಾದರೂ ಉಡುಪಿಯಲ್ಲಿ ಕೊಲೇಜಿನ ಆವಶ್ಯಕತೆಯು ಸೂಚಿಸಿದುದು ಸ್ತುತ್ಯ. ಆದರೆ ನಮ್ಮವರೊ? ಸಮಗ್ರ ಭಾರತದಲ್ಲಿ ಈಚೆಗೆ ತಲೆಯೆತ್ತುತ್ತಿರುವ ಕೋಮುವಾರು ಸಂಸ್ಥೆಗಳ ಪ್ರಕೃತದ ವಾತಾವರಣದಲ್ಲಿ ಸುವ್ಯವಸ್ಥಿತವಾಗಿ ನಡೆಯುತ್ತಿರುವ ಸ್ಥಳೀಯ ಬೋರ್ಡು ಹೈಸ್ಕೂಲನ್ನು ಪಾದ್ರಿಗಳು ಎಲ್ಲಿಯಾದರೂ ನುಂಗಿಬಿಟ್ಟರೆ? ಆದರೆ ಜಿಲ್ಲಾ ಬೋರ್ಡು ಲಾಭದಾಯಕವಾದ ಅಂತಹ ಸಂಸ್ಥೆಯನ್ನು ಬಿಟ್ಟುಕೊಡಲು ಸಿದ್ಧವಿದೆಯೆ? ಇನ್ನೊಂದು ಸಭೆಯಲ್ಲಿ ಇಲ್ಲಿರುವ ಮಧ್ವಸಿದ್ಧಾಂತ ಸಂಸ್ಕೃತ ಕೊಲೇಜನ್ನೇ ಆರ್ಟ್ಸ್ ಕೊಲೇಜನ್ನಾಗಿ ಮಾಡುವ ಸೂಚನೆಯು ಮಂಜೂರಾಗಿ ಸಮಿತಿಯೊಂದೇರ್ಪಟ್ಟಿದೆ. ಇಷ್ಟು ಕಾಲದ ಮೇಲಾದರೂ ಈ ಅಭಾವವು ತಿಳಿದು ಬಂದುದಕ್ಕೆ ಶ್ಲಾಘಿಸಬೇಕು. ಸಮಿತಿಯ ಕಾರ್ಯವು ಪಾಶ್ಚಾತ್ಯ ಸಮಿತಿಗಳಂತೆ ಪರ್ಯವಸಾಯಿಯಾಗಲಾರದಷ್ಟೆ! ಸದ್ಯ ಪ್ರಕೃತದ ಪರಿಸ್ಥಿತಿಯನ್ನೂ ಕೊಲೇಜಿನ ಸಾಧಕ-ಬಾಧಕಗಳನ್ನೂ ಪರಿಶೀಲಿಸುವುದು ಯುಕ್ತಿಸಂಗತವಾದುದು.

ವಿದ್ಯೋಪಾರ್ಜನೆಯಲ್ಲಿ ಉಡುಪಿಯ ಜನರು ಹಿಂದೆಬಿದ್ದಿಲ್ಲ. ದೇಶವಿದೇಶಗಳಲ್ಲಿ ಎಷ್ಟೋ ದೊಡ್ಡ ಉದ್ಯೋಗಸ್ಥರೂ, ಪ್ರಮುಖ ವಕೀಲರೂ, ಪ್ರಸಿದ್ಧ ಡಾಕ್ಟರರೂ ಮೆರೆಯುತ್ತಿದ್ದು ಉಡುಪಿಯ ಕೀರ್ತಿಧ್ವಜವನ್ನೇ ಹಾರಿಸಿಬಿಟ್ಟಿದ್ದಾರೆ. ಇಲ್ಲಿರುವ ಎರಡು ಹೈಸ್ಕೂಲುಗಳಿಂದ ವರ್ಷಂಪ್ರತಿ ನೂರಾರು ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಉಚ್ಚಶಿಕ್ಷಣದ ಉದ್ದೇಶದಿಂದ ಮಂಗಳೂರಿಗೋ, ಆಢ್ಯರಾದವರು ಮದ್ರಾಸಿಗೋ ಹೋಗುತ್ತಿರುವರು. ಈ ಪ್ರಣಾಲಿಯು ಈಗ್ಗೆ ೨೫–೩೦ ವರ್ಷಗಳಿಂದಲೂ ನಡೆದುಬಂದಿದೆ. ಏಕೆ? ಉಡುಪಿಯಲ್ಲಿ ಕೊಲೇಜು ಇಲ್ಲದಿರುವುದರಿಂದ ಅನೇಕ ಬಡ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಚತುರರೂ ಉತ್ಸಾಹಿಗಳೂ ಆಗಿದ್ದರೂ ಧನಾಭಾವದಿಂದ ಹಿಂದುಳಿದು ತಮ್ಮ ಭಾವಿ ಜೀವನವನ್ನು ಕೆಡಿಸಿಕೊಳ್ಳುವರು. ಮಂಗಳೂರಿನಂತಹ ಶಹರಿನಲ್ಲಿ ವ್ಯಾಸಂಗಕ್ಕಾಗಿ ಖರ್ಚುಮಾಡುವುದು ಸಾಮಾನ್ಯ ಸ್ಥಿತಿಯ ಹಿರಿಯರಿಗೆ ಹೇಳಿಸಿದುದಲ್ಲ. ಅದರಲ್ಲಂತೂ ಈಗಿನ ವಿಲಾಸ, [illegible]-ತೀಥ[illegible] ಉಡುಗೆತೊಡಿಗೆಗಳ ಗೊಂದಲದಲ್ಲಿ ಹಿರಿಯರು ಕಷ್ಟಪಟ್ಟು ಆಸೆಯಿಂದ ಗಳಿಸಿಟ್ಟ ಹಣವು ಕ್ಷಣಾರ್ಧದಲ್ಲಿ ಮಾಯವಾಗಿ ಮೇಲೆ ಮೇಲೆ ಹಣಕ್ಕಾಗಿ ಪ್ರಾರ್ಥನೆಗಳು ಬರುತ್ತಲೇ ಇವೆ. ಇದಕ್ಕೆ ಹೆತ್ತವರ ಅನುಭವವೇ ಸಾಕ್ಷಿ! ಉಪಾಧಿ ಪಡೆದು ಕೊಲೇಜಿನಿಂದ ಹೊರಬಿದ್ದು ಜೀವನಸಂಗ್ರಾಮದ ನಡುವೆ ಇವರು ಮಂಕರಂತಾಗಿ ಊರಿಂದೂರಿಗೆ ಆಫೀಸಿನಿಂದಾಫೀಸಿಗೆ ಅಲೆಯುತ್ತ 'ಭವತಿ ದಾಸ್ಯಂ ದೇಹಿ' ಇನ್ನುವ 'your most obedient servant' ಪದಕ್ಕೆ ಆಶಿಸಬೇಕಾಗುವುದು. ಅದಿರಲಿ. ಉಡುಪಿಯಲ್ಲಿ ಕೊಲೇಜು ಇದ್ದಿದ್ದರೆ ಕುಂದಾಪುರ, ಕಾರ್ಕಳ, ಉಡುಪಿ ತಾಲೂಕುಗಳ ಎಲ್ಲಾ ಉಚ್ಚಶಿಕ್ಷಣಾಪೇಕ್ಷಿಗಳಿಗೆ ಅಲ್ಪ ವ್ಯಯದಿಂದ ವಿದ್ಯೋಪಾರ್ಜನೆಯ ಅನುಕೂಲತೆ ದೊರೆಯುತ್ತಿತು. ಆದರೆ ಆ ಭಾಗ್ಯವು ಅವರ ಹಣೆಯಲ್ಲಿ ಬರೆದಿಲ್ಲ. ಹೊಸದಾಗಿ ಕೊಲೇಜನ್ನು ಸ್ಥಾಪಿಸುವುದೆಂದರೆ ಸಾಮಾನ್ಯ ಕೆಲಸವೆ? ಲಕ್ಷಗಟ್ಟಳೆಯ ರೂಪಾಯಿಗಳೂ, ನೌಕರಚಾಕರರೂ, ಪ್ರಯೋಗಶಾಲೆಗಳೂ, ವಿಶಾಲ ಕಟ್ಟೋಣಗಳೂ ಅಗತ್ಯವಿವೆ. ಉತ್ತರ ಭಾರತದಲ್ಲಾದರೋ [illegible] ತಮ್ಮ ಸರ್ವಸ್ವವನ್ನೂ ದಾನಮಾಡಿ ದೊಡ್ಡ ದೊಡ್ಡ ಸಂಸ್ಥೆಗಳನ್ನು ನಡೆಯಿಸಲು ಅನುಕೂಲವಾಡಿಕೊಟ್ಟಿರುತ್ತಲೂ ಕೊಡುತ್ತಲೂ ಇರುವರು. ಕಾಶಿಯ ಹಿಂದೂ ವಿಶ್ವವಿದ್ಯಾಲಯ, ಕಲಕತ್ತೆಯ ಠಾಕೂರರ ವಿಶ್ವಭಾರತಿಯೇ ಇದಕ್ಕೆ ನಿದರ್ಶನಗಳು.

ಎಷ್ಟೋ ಕಾಲದ ಹಿಂದೆ ಸ್ಥಾಪಿತವಾಗಿ ಪ್ರಸಿದ್ಧವಾದ ಈ ಸಂಸ್ಥೆಗಳೂ ಈಗ ಆರ್ಥಿಕ ಪರಿಸ್ಥಿತಿಯಿಂದ ನರಳತೊಡಗಿವೆ. ಎನ್ನುವಾಗ ಅಂತಹ ತ್ಯಾಗದಿಂದ ಇಂತಹ ದೊಡ್ಡ ಕಾರ್ಯವಾದ ಕೊಲೇಜನ್ನು ಸ್ಥಾಪಿಸುವರೆ ಧನಸಹಾಯ ಮಾಡಲು ಸಿದ್ಧವಾಗಿರುವ ಉದಾರ ಸಜ್ಜನರು ಉಡುಪಿಯಲ್ಲಿ ಎಷ್ಟು ಮಂದಿ ಇರುವರು? ಅಲ್ಪ ಸ್ವಲ್ಪ ಚಂದಾಹಣದಿಂದ ಇದು ಅಸಾಧ್ಯ; ಸಾವಿರಗಟ್ಟಳೆಯ ದಾನವೇ ಸಿಕ್ಕಬೇಕು. ಇನ್ನು ಜಿಲ್ಲಾ ಬೋರ್ಡಿನವರೇ ಸ್ಥಳೀಯ ಹೈಸ್ಕೂಲನ್ನು ಕೊಲೇಜಾಗಿ ಮಾರ್ಪಡಿಸಲು ಅನುಕೂಲತೆಯಿದೆ. ಅದರ ಆಯವೂ ಅಷ್ಟಿದೆ. ಅದನ್ನೇ ಈ ಕಾರ್ಯಕ್ಕೆ ವಿನಿಯೋಗಿಸಿ ಉಡುಪಿಯ ಉನ್ನತಿಗೆ ಕಾರಣಭೂತರಾಗಬಹುದು. ಆದರೆ ಬೋರ್ಡಿನವರು ಇದಕ್ಕಾಗಿ ಸಿದ್ಧರಿರುವರೆ? ಅವರ ಮರ್ಜಿ ಇನ್ನೆಂತಿದೆಯೊ?

ಇನ್ನುಳಿದುದು ಶ್ರೀ ಮಧ್ವಸಿದ್ಧಾಂತ ಸಂಸ್ಕೃತ ಕೊಲೇಜಿನ ವಿಚಾರ. ಮಧ್ವಮತಾಭಿಮಾನಿಗಳಾದ ಹಿಂದಿನ ಯತಿಗಳಿಂದಲೂ ಉದ್ಯಮಶೀಲರಾದ ಸಜ್ಜನರ ಪರಿಶ್ರಮದಿಂದಲೂ ೧೯೧೦ರಲ್ಲಿ ಇದರ ಸ್ಥಾಪನೆಯಾಯಿತು. ಕೆಲವು ವರ್ಷಗಳ ವರೆಗೆ ಉತ್ತಮ ರೀತಿಯಿಂದ ನಡೆಯಲೂ ನಡೆಯಿತು. ಆದರೆ ಈಚೆಗೆ ಕೆಲವು ವರ್ಷಗಳಿಂದ ಆಯವು ಕಡಿಮೆಯಾಗುತ್ತ ಬಂದಿದೆ. ಮಠಗಳು ವಾಗ್ದತ್ತ ಮಾಡಿದ ಪೂರ್ಣ ಸಹಾಯವು ಸಕಾಲದಲ್ಲಿ ಸಿಕ್ಕದೆ, ಉಪಾಧ್ಯಾಯರುಗಳಿಗೆ ತಿಂಗಳುಗಟ್ಲೆ ವೇತನಕ್ಕೂ ತೊಂದರೆಯಾಗಿದೆ. ಎಲ್ಲಾದರೂ ನಿಲ್ಲಿಸುವ ಪ್ರಸಂಗ ಬಂದೀತೆ? ಎಂಬ ಭಯವೂ ಇದ್ದಿತು. ಮಠಗಳು ಸ್ವಯಂ ಶೋಚನೀಯ ಆರ್ಥಿಕ ಪರಿಸ್ಥಿತಿಯಲ್ಲಿರುವುದು ನಿಜವಾದರೂ, ಅದ್ಯಾಪಿ ನಡೆಯುತ್ತಿರುವ ಅನಾವಶ್ಯಕ ದುಂದುಗಾರಿಕೆಯನ್ನು ನಿಲ್ಲಿಸಿ ವಿದ್ಯೆಯ ಸದುಪಯೋಗಕ್ಕಾಗಿ ವಿನಿಯೋಗಿಸುವುದು ಮಠಗಳ ದೃಷ್ಟಿಯಿಂದಲೂ ಉಡುಪಿಯ ಹಿತದ ದೃಷ್ಟಿಯಿಂದಲೂ ವಿಹಿತವಾಗಿದೆ. ಮಠಾಧಿಪತಿಗಳು ಹಿಂದೆಯೇ ಇಚ್ಛಿಸಿದ್ದರೆ ಇಂದು ಉಡುಪಿಯಲ್ಲಿ ಮೊದಲನೆಯ ಶ್ರೇಣಿಯ ಆರ್ಟ್ಸ್ ಕೊಲೇಜು ಎಷ್ಟೋ ಕಾಲದ ಮುಂಚೆಯೇ ಬೆಳಗುತ್ತಿದ್ದಿತು! ಎಷ್ಟೋ ಉಪಾಧ್ಯಾಯರಿಗೆ ಕೆಲಸ ದೊರೆಯುತ್ತಿದ್ದಿತು. ಅಂತೆಯೇ ಇತರ ಸಂಸ್ಥೆಗಳನ್ನೂ ಸ್ಥಾಪಿಸಿ ಅನೇಕ ಕುಟುಂಬಗಳ ಭರಣ-ಪೋಷಣೆಯ ಪುಣ್ಯವನ್ನು ಸಂಪಾದಿಸಬಹುದಾಗಿದ್ದಿತು. ಈಗ್ಗೆ ೧೦–೧೫ ವರ್ಷಗಳ ಹಿಂದೆ ಈ ವಿಚಾರದಲ್ಲಿ ಕೆಲಸ ಮಾಡಿದ್ದರೂ ಕೊಲೇಜು ಎಂದೋ ಆರಂಭವಾಗುತ್ತಿದ್ದಿತಲ್ಲದೆ ಎಂತಹ ಬಡ ಪರಿಸ್ಥಿತಿಯಲ್ಲಿಯೂ ಸುಗಮವಾಗಿ ನಡೆಯಿಸಲು ಅನುವು ದೊರೆಯುತ್ತಿದ್ದಿತು. ಆದರೆ ಇದುವರೆಗೂ ನಿದ್ರಿಸುತ್ತಿದ್ದು 'ವಿಪ್ರಾಃ ಪಶ್ಚಿಮ ಬುದ್ಧಯಃ' ಎಂಬ ಲೋಕೋಕ್ತಿಯಂತೆ ಈಗ ಪಶ್ಚಾತ್ತಾಪಪಡುತ್ತಿದ್ದೇವೆ. ಕಾರಣ— ಆಗಿನ ಆರ್ಥಿಕ ಉನ್ನತಿಯ ಕಾಲವು ಈಗಿಲ್ಲ. ಕಾಲಚಕ್ರದ ಪರಿವರ್ತನೆಯಿಂದ ದೊಡ್ಡ ಕಟ್ಟಡಗಳಿಗೂ ಭೋಗ-ವಿಲಾಸ-ವಿಭವಗಳಿಗೂ ಹೇರಳ ಹಣ ವೆಚ್ಚಮಾಡಿದ ಉಡುಪಿಯು ಇಂದು ಒಂದೆರಡು ಹಿಡಿ ರೂಪಾಯಿಗಳಿಗಾಗಿ ಪೇಚಾಡುತ್ತಿದೆ! ಇಂತಹ ದುರವಸ್ಥೆಯ ಪ್ರತಿಕೂಲ ಸಮಯದಲ್ಲಿ ಈ ದುಸ್ತರ ಕಾರ್ಯವನ್ನು ಕೈಗೊಳ್ಳುವುದು ಸಾಮಾನ್ಯ ಕೆಲಸವಲ್ಲ. ಸಾಲದುದಕ್ಕೆ ಮುನಿಸಿಪಾಲಿಟಿ ಬೇರೆ ಬಂದುಬಿಟ್ಟಿದೆ. ಹೀಗಿರುವಾಗ ಕೊಲೇಜಿನ ಸ್ಥಾಪನೆಗೆ ಬೇಕಾದಷ್ಟು ದ್ರವ್ಯಸಹಾಯ ಶೇಖರಿಸಿಟ್ಟುಕೊಂಡೇ ಈ ಕಾರ್ಯಕ್ಕೆ ಕೈಯಿಕ್ಕುವುದು ಒಳ್ಳಿತು. ಯಾರಾದರೂ ಅನುಭವಿಗಳಾದ ಮಹನೀಯರು ಇದಕ್ಕೆ ಬದ್ಧಕಂಕಣರಾಗಿ ಸಫಲತೆ ಸಿಕ್ಕುವ ವರೆಗೂ ತನುಮನಧನಗಳಿಂದ ಸಾಧಿಸುವುದಾದರೆ ಅವಶ್ಯ ಆಗಬಹುದು. ಲೇಖಕನು ಕೊಲೇಜುಸ್ಥಾಪನೆಗೆ ವಿರೋಧಿಯಲ್ಲ. ಉಡುಪಿಯ ಸರ್ವತೋಮುಖವಾದ ಉನ್ನತಿಯನ್ನು ಮನಃಪೂರ್ವಕ ಕೋರುವವನು. ಆದರೆ ಸಮಿತಿಯ ಕಾರ್ಯವು ಆಕಾಶಕುಸುಮವಾಗದಿರಲೆಂದು ಎಚ್ಚರಿಕೆ!

(೯ನೇ ಪುಟಕ್ಕೆ ಮುಂದರಿಸಿಯದೆ)




ಕ್ರೊಸ್ ಡಿಜಿಟ್ಸ್ ಸ್ಪರ್ಧೆ ನಂಬ್ರ 4.

# ರೂ. 16,000 ಬಹುಮಾನವಾಗಿ.

**ಸಂಪೂರ್ಣ ಸರಿಯಾದ ಉತ್ತರಗಳಿರುವ ಪ್ರತಿಯೊಂದಕ್ಕೆ ರೂ. 2000ದಂತೆ 6 ಬಹುಮಾನಗಳಾಗಿಯೂ**

(ಈ ಉತ್ತರವು ನಮ್ಮ ಮೊಹರು ನಿಶಿ ಇರುವ ಕೀ ಸೊಲ್ಯೂಶನಿಗೆ ಪ್ರತಿಯೊಂದು ಅಂಕೆಗೆ ಸರಿಹೋಲಬೇಕು.)

**ರನ್ನರ್-ಅಪ್ ಸ್ಥಾನದವರಿಗೆ ಪ್ರತಿಯೊಂದು ಉತ್ತರಕ್ಕೆ ರೂ. 200ರಂತೆ 20 ಬಹುಮಾನಗಳಾಗಿಯೂ**

(ಈ ಉತ್ತರವು ನಮ್ಮ ಮೊಹರು ನಿಶಿ ಇರುವ ಕೀ ಸೊಲ್ಯೂಶನಿಗೆ ಯಾವದಾದರೂ ಮೂರು ತಿರುಗುಮುರುಗು ಸ್ಥಾನಗಳಲ್ಲಿ ಇಟ್ಟಾಗ ಪ್ರತಿಯೊಂದು ಅಂಕೆಗೆ ಸರಿಹೋಲಬೇಕು.)

ಕೊಡಲಾಗುವುದು.

ಮೊಹರು ಮಾಡಲ್ಪಟ್ಟಿರುವ ಕೀ ಸೊಲ್ಯೂಶನು ಲೊಯ್ಡ್ಸ್ ಬ್ಯಾಂಕ್, ಲಿಮಿಟೆಡ್, ಬೊಂಬೇ, ಇಲ್ಲಿ ಠೇವಣಾತಿಯಾಗಿ ಇಟ್ಟಿದೆ.

ಈ ಸಮಸ್ಯೆಯನ್ನು ಸಂಪೂರ್ಣವಾಗಿ ಬಿಡಿಸಿ ಕಳುಹಿಸುವ ಪ್ರತಿಯೊಬ್ಬನಿಗೆ ರೂ. 500ರ ಕನಿಷ್ಟ ಬಹುಮಾನದ ಗ್ಯಾರಂಟಿ.

ಸರಿಯಾದ ಸಂಪೂರ್ಣ ಉತ್ತರಗಳನ್ನು ಕಳುಹಿಸುವವರಲ್ಲಿ ಮೊದಲನೆಯವನಿಗೆ ಪ್ರತ್ಯೇಕವಾದ ಒಂದು ಭಂಗಾರದ ಪದಕವಿದೆ.

**ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ. 1.**

**ಕೊನೆಯ ತಾರೀಕು:—4ನೇ ಜುಲಾಯಿ**

| | | | |
|---|---|---|---|
| | | | |
| | | | |
| | | | |
| | | | |

ಮೇಲ್ಕಾಣಿಸಿದ ಚೌಕದಲ್ಲಿ ಅಂಕೆಗಳನ್ನು 2ರಿಂದ 17ರ ವರೆಗೆ ಏರ್ಪಡಿಸಿಕೊಂಡು, ಎಲ್ಲಾ ಸಾಲುಗಳು, ಕಲಂಗಳು, ಮೂಲೆಸಾಲುಗಳು ಒಟ್ಟು ಕೂಡಿಸಿದಾಗ ಜುಮ್ಲಾ 38 ಬರಬೇಕು. ಪ್ರತಿಯೊಂದು ಅಂಕೆಯನ್ನು ಒಂದೇ ಸಲ ಉಪಯೋಗಿಸತಕ್ಕುದು. ಎಷ್ಟು ಉತ್ತರಗಳನ್ನಾದರೂ ಖಾಲಿ ಕಾಗದದ ಮೇಲೆ ಬರೆದು ಸಮಸ್ಯೆಯೊಂದರ ರೂ. 1ರಂತೆ ಪ್ರವೇಶಹಾಸಲನ್ನು ಮನಿಯಾರ್ಡರ್ ಯಾ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕುದು. ಸ್ಥಳೀಯ ಸಮಸ್ಯೆಗಳು ಆಫೀಸಿನಲ್ಲಿ ನಿತ್ಯವೂ ಪ್ರಾತಃ 11ರಿಂದ ಸಾಯಂ 5ರ ವರೆಗೆ ಸ್ವೀಕರಿಸಲಾಗುವುವು. ಇದರ ಫಲಿತಾಂಶವು 12–7–'36ರಲ್ಲು ಪ್ರಕಟವಾಗುವುದು ಮತ್ತು ಯಾರು ತಮ್ಮ ಹೆಸರು ಮತ್ತು ವಿಳಾಸವನ್ನು ಇಂಗ್ಲೀಷಿನಲ್ಲಿ ಬರೆದ ಒಂದಾಣೆ ಲಕೋಟೆಯನ್ನು ತಮ್ಮ ಸಮಸ್ಯೆಯೊಂದಿಗೆ ಕಳುಹಿಸುತ್ತಾರೋ ಅವರಿಗೆ ಟಪ್ಪಾಲುದ್ವಾರಾ ರವಾನಿಸಲ್ಪಡುವುದು. ಸಮಸ್ಯೆಯ ಉತ್ತರದೊಂದಿಗೆ ಮನಿಯಾರ್ಡರ್ ರಶೀದಿಯು ಲಗ್ತೀಕರಿಸಲ್ಪಡತಕ್ಕುದು.

ಮೊಹರುಮಾಡಿ ತೆಗೆದಿಡಲ್ಪಟ್ಟಿರುವ ಕೀ ಸೊಲ್ಯೂಶನಿಗೆ ಪ್ರತಿ ಅಂಕೆಯಲ್ಲಿಯೂ ಸರಿಹೋಗುವಂತೆ ಸರಿಯಾದ ಸಮಸ್ಯೆಗಳನ್ನು ಕಳುಹಿಸುವ ಯಶಸ್ವಿಯಾದ ಸ್ಪರ್ಧೆಗಾರರಲ್ಲಿ ಬಹುಮಾನದ ಹಣವನ್ನು ಹಂಚಲಾಗುವುದು. ಬಹುಮಾನದ ಯೋಜನೆಯು ಬರುವ ಉತ್ತರಗಳ ಸಂಖ್ಯೆಯ ಮೇಲೆ ಹೊಂದಿಕೊಂಡಿದೆ. ಆದರೆ ಎಲ್ಲದಕ್ಕೂ ಸರಿಯಾದ ಉತ್ತರ ಬರೆದು ಕಳುಹಿಸುವ ಪ್ರತಿಯೊಬ್ಬರಿಗೂ ಕನಿಷ್ಟಪಕ್ಷದ 500 ರೂಪ್ಯಾಗಳ ಬಹುಮಾನದ ಗ್ಯಾರಂಟಿಯಿದೆ. ಮ್ಯಾನೇಜರರ ತೀರ್ಮಾನವೇ ಕೊನೆಯದೂ ಕಾನೂನಿಗೆ ಒಳಪಟ್ಟುದೂ ಆಗಿದೆ.

ಮೇಲಿನ ಬಹುಮಾನಗಳಲ್ಲದೆ ಸ್ಪರ್ಧಿಸುವವರ ಇಷ್ಟದಂತೆ ಕೆಳಗೆ ನಮೂದಿಸುವ ಯಾವದಾದರೊಂದು ಸಾಮುಗ್ರಿಯನ್ನು 8 ಉತ್ತರಗಳನ್ನು ಕಳುಹಿಸುವವರಿಗೆ ಬಹುಮಾನವಾಗಿ ಕೊಡಲಾಗುವುದು. (ಒಂದೇ ಲಕೋಟೆಯಲ್ಲಿ ಬೇರೆ ಬೇರೆ ಹೆಸರುಗಳನ್ನು ಕಳುಹಿಸಿದಲ್ಲೂ ಸ್ವೀಕರಿಸಲಾಗುವುದು.)

1. **ಒಂದು ಬಾಟ್ಲಿ ಸ್ವೀಟೋ**–ಸಕ್ಕರೆಯ ಬದಲು ಆದರ್ಶ ಪದಾರ್ಥ. 3 ಬೊಟ್ಟು ಒಂದು ಕಪ್ ಚಾ, ಹಾಲು, ಕಾಫಿ ಇತ್ಯಾದಿಯನ್ನು ಸಿಹಿ ಮಾಡುತ್ತದೆ—2 ಔನ್ಸಿನ ಒಂದು ಬಾಟ್ಲಿಯು 300 ಕಪ್‌ಗಳನ್ನು ಸಿಹಿ ಮಾಡುತ್ತದೆ—ಬೆಲೆ ರೂ. 1–4–0.

ಅಥವಾ 2 ಒಂದು ಪೆಟ್ಟಿಗೆಯಲ್ಲಿ 3 ತುಂಡುಗಳುಳ್ಳ ಫ್ರೆಡ್ ಒಬೆಸಿಟಿ ಸೋಪ್—ದೇಹದಲ್ಲಿ ಅತ್ಯಧಿಕವಾಗಿರುವ ಬೊಜ್ಜನ್ನು ನಿವಾರಿಸಲು ಅಪೂರ್ವ ಸಾಬೂನು—ಬೆಲೆ ರೂ. 2—12—0.

ಅಥವಾ 3 ಒಂದು ಬಾಟ್ಲಿ 'ಸೆಕ್ಸ್—ಓ—ಮ್ಯಾಕ್ಸ್' ಗುಳಿಗೆಗಳು—ಗಂಡಸರಿಗೂ ಹೆಂಗಸರಿಗೂ ಅತ್ಯಮೋಘವಾದ ಮೆದುಳಿನ ಮತ್ತು ನರಗಳ ಟಾನಿಕ್ಕು. ನಿಮ್ಮನ್ನು ಯೌವನಸ್ಥರಾಗಿ ಕಾಣುವಂತೆ ಮತ್ತು ಅನುಭವಿಸುವಂತೆ ಮಾಡುತ್ತದೆ—ಬೆಲೆ ರೂ. 5.

ಅಥವಾ 4 ಒಂದು ಬಾಟ್ಲಿ 'ಲಿಕ್ಕರ್—ಯಾಕ್ಸ್' ಗುಳಿಗೆಗಳು—ಕುಡಿಯುವ ಅಭ್ಯಾಸವಿದ್ದವರಿಗೆ ನಿರ್ಭಯವೂ ನಿಶ್ಚಯವೂ ಆದ ಗುಣಕಾರಿ—ಕುಡಿಯುವವರಿಗೆ ಅರಿವಿಲ್ಲದೆನೇ ಗುಟ್ಟಿನಲ್ಲಿ ಕೊಡಬಹುದು.

ನಿಮ್ಮ ಉತ್ತರವನ್ನೂ ಪ್ರವೇಶಹಾಸಲನ್ನೂ ಕಳುಹುವರೆ ವಿಳಾಸ—

The Manager, SWEETO CHEMICAL & INDUSTRIAL WORKS,
(*Competition Department*), Empire Building, Hornby Road, Fort, Bombay.


ಮೇ 1936ರ ನಮ್ಮ ಸ್ಪರ್ಧೆಯ ಉತ್ತರ.

ಮೊಹರು ಹಾಕಲ್ಪಟ್ಟ ಕೀ ಸೊಲ್ಯೂಶನ್

| | | | |
|---|---|---|---|
| 7 | 1 | 8 | 14 |
| 12 | 10 | 3 | 5 |
| 2 | 4 | 13 | 11 |
| 9 | 15 | 6 | 0 |

ಜಮೆಯಾದ ಉತ್ತರಗಳ ಜುಮ್ಲಾ ಮೊಬಲಗು ರೂ. 6300.

ಹಂಚಲಾದ ಬಹುಮಾನದ ಜುಮ್ಲಾ ಮೊಬಲಗು ರೂ. 5500.

ಸಂಪೂರ್ಣ ಸರಿಯಾದ ಉತ್ತರ ಕಳುಹಿಸಿದ 5 ಮಂದಿಗೆ ಪ್ರತಿಯೊಬ್ಬರಿಗೆ ರೂ. 750ರಂತೆ.

19 ರನ್ನರ್-ಅಪ್ ಬಹುಮಾನ ಪಡೆದವರಿಗೆ ಪ್ರತಿಯೊಬ್ಬರಿಗೆ ರೂ. 50ರಂತೆ.

214 ಸ್ಪರ್ಧಕರಿಗೆ ಎಂಟು ಯಾ ಅದಕ್ಕಿಂತಲೂ ಹೆಚ್ಚಿಗಿನ ಉತ್ತರ ಕಳುಹಿದ್ದಕ್ಕೆ ಸೆಕ್ಸ್-ಓ-ಮ್ಯಾಕ್ಸ್, ಫ್ರೆಡ್ ಸೋಪ್, ಲಿಕ್ಕರ್-ಯಾಕ್ಸ್, ಇತ್ಯಾದಿ ನಮ್ಮ ಸಾಮುಗ್ರಿಗಳು ಕೊಡಲ್ಪಟ್ಟಿವೆ.


## ಸ್ಪರ್ಧಕರಿಗೆ ವಿಶೇಷ ಬಹುಮಾನ.

ತಮ್ಮ ಪ್ರವೇಶಹಾಸಲಿನೊಂದಿಗೆ ಪ್ಯಾಕಿಂಗ್ ಮತ್ತು ಪೋಸ್ಟೇಜಿಗಾಗಿ 8 ಆಣೆ ಕಳುಹುವ ಸ್ಪರ್ಧೆಗಾರರಿಗೆ ನಮ್ಮ ಆಧುನಿಕ ನೊವೆಲ್ಟಿ 'ಒಟೋ-ರೂಲ್' ಎಂಬ ಎರಡು ಕಡೆಗಳಲ್ಲೂ ಇಂಚು ಮತ್ತು ಸೆಂಟಿಮೀಟರ್ಸ್ ಇರುವ ಫೂಟ್‌ರೂಲೊಂದು ಸಿಗುವುದು. ರೂ. 15 ಮೌಲ್ಯದ ಪ್ಯಾರಲಲ್ ರೂಲಿಗೆ ಇದು ಸಮಾನವಾಗಿದ್ದು ಅತ್ಯಂತ ಆಕರ್ಷಣೀಯವಾಗಿದ್ದು ಎನಾಮಲ್ ಬಣ್ಣದಿಂದ ಕೂಡಿದ್ದು, ತಿರುಗುವ ಚಕ್ರಗಳುಳ್ಳುದಾಗಿದೆ. ವಿದ್ಯಾರ್ಥಿಗಳು, ಚಿತ್ರಕಾರರು, ನಕ್ಷೆಗಾರರು ಇವರುಗಳಿಗೆಲ್ಲಾ ಇದಿಲ್ಲದೆ ನಿರ್ವಾಹವೇ ಇಲ್ಲ. ಪ್ರತಿ ಕಾರ್ಯಾಲಯದ ಪ್ರತಿಯೊಂದು ಮೇಜಿಗೂ ಇದು ಬೇಕೇ ಬೇಕು. ಪ್ರತಿಯೊಬ್ಬ ಸ್ಪರ್ಧೆಗಾರನಿಗೆ ಒಂದು 'ಓಟೋ-ರೂಲರಿ'ಗಿಂತಲೂ ಹೆಚ್ಚಿಗೆ ಕೊಡಲಾಗಲಿಕ್ಕಿಲ್ಲ.

(ಅನೇ ಪುಟದಿಂದ)

ಇನ್ನು ಉಚ್ಚಶಿಕ್ಷಣದಿಂದಾಗುವ ಸಾಧಕ ಬಾಧಕಗಳನ್ನು ವಿಚಾರಿಸುವ. ನಮ್ಮ ಈಗಿನ ಅನುಭವದಿಂದ ಅಲ್ಪಸ್ವಲ್ಪ ಧನಿಕರಿಗೂ ಪ್ರಭಾವವಿರುವವರಿಗೂ ಹೊರತು ಮಿಕ್ಕ ಅನೇಕರಿಗೆ ಕೊಲೇಜಿನ ಶಿಕ್ಷಣದಿಂದ ಅವರು ಅಪೇಕ್ಷಿಸಿದಷ್ಟು ಲಾಭವಿಲ್ಲ. ಮಕ್ಕಳನ್ನು ಕೊಲೇಜಿಗೆ ಕಳುಹಿರುವ ಹೆತ್ತವರಿಗೇ ಮಗನ ವಿದ್ಯಾಭ್ಯಾಸಕ್ಕಾಗಿ ಆಯ ಆಸ್ತಿಪಾಸ್ತಿಯ ಎಷ್ಟೊಂದು ದೊಡ್ಡ ಭಾಗವು ಕರಗಿ ನೀರಾಗುವುದೆಂದು ಗೊತ್ತಿದೆ! ಈಗಲಾದರೋ ಸರ್ವತ್ರ ಯೂನಿವರ್ಸಿಟಿಗಳು ಬಿ. ಎ., ಎಮ್. ಎ., ಇತ್ಯಾದಿ ನಿಷ್ಪ್ರಯೋಜಕ ಉಪಾಧಿಧಾರಿಗಳನ್ನು ಯಂತ್ರದಂತೆ ತಯಾರಿಸುವ ಟಂಕಸಾಲೆಗಳಾಗಿವೆ. ಕಾರಖಾನೆಯಿಂದ ಹೊರಬಿದ್ದೊಡನೆಯೇ ಕೆಟ್ಟ ನಾಣ್ಯಗಳಂತೆ ಇವರ ಬೆಲೆಯಿಳಿಯುವುದು! ಪ್ರತಿ ಶಹರಿನಲ್ಲಿಯೂ ಸಾವಿರಾರು ಉಪಾಧಿಧಾರಿಗಳು ನಿರುದ್ಯೋಗಿಗಳಾಗಿ ಬೀದಿ ಬೀದಿ ಅಲೆಯುತ್ತ ಜೇನುನೊಣಗಳಂತೆ ೧೦-೧೫ ರೂಪಾಯಿಗಳ ಕೀಳು ನೌಕರಿಗೂ ಮುತ್ತಿಬೀಳುವ ಪ್ರಸಂಗವೊದಗಿದೆ. ಅದಕ್ಕಾಗಿ ಯೂನಿವರ್ಸಿಟಿಯನ್ನು ದೂರಬೇಕಾಗಿಲ್ಲ. ಕಾರಣ—ಅವರೇನೂ ನೌಕರಿಯ ಭರವಸೆ ಕೊಡುವುದಿಲ್ಲ. ಕೊಡುವುದಾದರೂ ಎಷ್ಟು ಜನರಿಗೆಂದು? ಈಗ್ಗೆ ಅನೇಕ ವರ್ಷಗಳಿಂದ ಈ ನಿರುದ್ಯೋಗಸಮಸ್ಯೆಯು ಬೆಳೆಯುತ್ತಾ ಬಂದಿದ್ದರೂ ಹೆತ್ತವರಾಗಲೀ ತರುಣರಾಗಲೀ ಕೊಲೇಜಿನ ವ್ಯಾಮೋಹವನ್ನು ಬಿಟ್ಟಿಲ್ಲವಲ್ಲ. ಯೋಗ್ಯತೆಯುಳ್ಳವರೂ ಇಲ್ಲದವರೂ ಆದ ಲಕ್ಷಗಟ್ಟಲೆ ನಿರುದ್ಯೋಗಿ ಉಪಾಧಿಧಾರಿಗಳ ಯುಗವಿದು! ವಿದ್ಯೆ ಕಲಿತರೆ ಕೈ ತುಂಬಾ ಹಣ ಸಿಗುವುದೆಂಬ ಭ್ರಮೆ ಬಿಡಬೇಕು. ಅದೇ ಆಕಾಂಕ್ಷೆಯಿಂದ ಹೋಗುತ್ತಿದ್ದರೆ ಕೊನೆಗೂ ನಿರಾಸೆಯೇ ಗತಿ. ಉಚ್ಚ ಶಿಕ್ಷಣದಿಂದ ಯುವಕಯುವತಿಯರು ಸಾಂಸಾರಿಕ ಜೀವನವನ್ನು ನಿರ್ವಹಿಸಲು ಯೋಗ್ಯತೆಯನ್ನು ಸಂಪಾದಿಸಬೇಕಾದುದು. ವ್ಯವಹಾರ ಜ್ಞಾನ, ಸಮಾಜದಲ್ಲಿ ಸಭ್ಯ ವರ್ತನೆ, ಜೀವನ ಸಂಗ್ರಾಮದಲ್ಲಿ ಸುಗಮವಾಗಿ ಸಫಲರಾಗುವುದು—ಇವೇ ಧ್ಯೇಯಗಳಿರಬೇಕು. ಆದರೆ ಈಗಿನ ಯೂನಿವರ್ಸಿಟಿ ಶಿಕ್ಷಣವು ಎಷ್ಟರಮಟ್ಟಿನ ತನ್ನ ಈ ಜವಾಬುದಾರಿಯನ್ನು ನಿರ್ವಹಿಸುತ್ತಿದೆ! ವಿದ್ಯಾರ್ಥಿಕ ಮಾನಸಿಕ ಶಾರೀರಕ ಬಲವು ಹ್ರಾಸವಾದಂತೆ ಶಿಕ್ಷಣದ ಶ್ರೇಣಿಯೂ ಇಳಿಯುತ್ತಹೋಗುತ್ತಿದೆ! ಎರಡು ವರ್ಷಗಳ ಕಠಿನ ಪರಿಶ್ರಮವನ್ನು ೩-೪ ದಿನಗಳ ಪರೀಕ್ಷೆಯ ಚಿಕ್ಕ ಮಾನದಿಂದ ಅಳೆದು ಎಲ್ಲಾ ತರದ ಉಪಾಧಿಧಾರಿಗಳನ್ನು ಹೊರಗೆ ಹಾಕಿಬಿಡುತ್ತಾರೆ. ಇವರಿಂದ ಅವರಿಗೆ ನಷ್ಟವಿಲ್ಲ; ಕೈ ತುಂಬಾ ಹಣವೂ ಸಿಗುವುದು. ಕೊಲೇಜಿನಲ್ಲಿ ಕಲಿಯುವ ವಿಷಯಗಳೋ ಮುಂದಿನ ಜೀವನಕ್ಕೆ ಒಂದೂ ಬೇಕಾಗಿಲ್ಲದವು. ಅವನ್ನು ಮಿದುಳಲ್ಲಿ ತುಂಬಿಸಿ ಹೇಗೋ ಶ್ರಮಪಟ್ಟೋ ಅದೃಷ್ಟವಶವೋ ಉತ್ತೀರ್ಣರಾಗಿಬಿಟ್ಟರೆ ಸರಿ. ಮುಂದೆ ಸಂಸಾರದಲ್ಲಿ ವ್ಯವಹಾರದ ಅನಭಿಜ್ಞತೆಯಿಂದ ಕಣ್ಣುಕಟ್ಟಿ ನಾಲ್ಕು ದಾರಿ, ಕೂಡಿದಲ್ಲಿ ಬಿಟ್ಟ ಕುರುಡರಂತೆ ದಾರಿ ಕಾಣದೆ ಕಂಗೆಡುವರು. ಕೊಲೇಜಿನಲ್ಲಿ ಕಲಿಯುತ್ತಿದ್ದಾಗ ಹೆತ್ತವರು ಕಳುಹಿದಷ್ಟು ಮಾಸಿಕ ವೇತನದ ಅರ್ಧವನ್ನೂ ಸಂಪಾದಿಸಲು ಇವರಿಗೆ ಸಾಧ್ಯವೇ ಇಲ್ಲ! ನಿರುದ್ಯೋಗಸಮಸ್ಯೆಯು ಎಲ್ಲೆಡೆಗಳಲ್ಲಿಯೂ ಘೋರವಾಗುತ್ತ ಬಂದಿದೆ. ಅದನ್ನು ತಡೆಯಲು ನಾವೇ ಪ್ರಯತ್ನಿಸಬೇಕಲ್ಲದೆ ಸರಕಾರವಾಗಲೀ ಯೂನಿವರ್ಸಿಟಿಯಾಗಲೀ ಅಲ್ಲ. ಮುಂದಿನ ಪರಿಣಾಮವನ್ನು ಯೋಚಿಸಿ ವರ್ತಿಸಿದರೆ ಇಂತಹ ಶೋಚನೀಯ ಸ್ಥಿತಿಯು ಕೆಲಮಟ್ಟಿಗೆ ಕಡಿಮೆಯಾಗಬಹುದು. ಉಚ್ಚಶಿಕ್ಷಣದ ಮರೆಯಲ್ಲಿ ಜಲ್ಲಾಪಿಲ್ಲಿಯಾಗಿ ವೆಚ್ಚವಾಗುವ ಕಷ್ಟಾರ್ಜಿತ ಧನವೂ ಉಳಿಯುವುದು. ನಮ್ಮ ಜನರೇ ಉಚ್ಚಶಿಕ್ಷಣದ ಭ್ರಮೆಗೆ ಬೀಳದಿದ್ದರೆ ಯೂನಿವರ್ಸಿಟಿಯಾದರೂ ಏನು ಮಾಡೀತು? ಆದುದರಿಂದ ಈ ಎಲ್ಲಾ ವಿಚಾರಗಳನ್ನು ಮಾಡಲು ತಕ್ಕ ಸಮಯವೊದಗಿದೆ. ಈಗಿನಿಂದಲೇ ಅದಕ್ಕಾಗಿ ಯತ್ನಿಸುವುದು ಆದ್ಯ ಕರ್ತವ್ಯ.

ಈಗ ನೋಡಿರಿ. ಕೊಲೇಜುಶಿಕ್ಷಣ ಮತ್ತು ಉಪಾಧಿಗಳಿಂದ ಯಾವ ಕೆಲಸವೂ ನಡೆಯಲಾರದು. ಆಯಾ ಶಾಖೆಗಳಲ್ಲಿ ಅನುಭವ ಪಡೆದು ನುರಿತವರಿಗೇ ಕೆಲಸ ಸಿಗುವುದು. ಕಾರಖಾನೆಗಳಲ್ಲಿ ಬಿ. ಎ., ಎಮ್. ಎ. ಉಪಾಧಿವಂತರು ಹೋಗಿ ಮಾಡುವುದಾದರೂ ಏನು? ಕೊನೆಗೆ ಗುಮಾಸ್ತಗಿರಿ! ಅದಕ್ಕಾದರೂ ಎಷ್ಟು ಸ್ಥಾನಗಳಿವೆ? ಇದಕ್ಕೆ ಬದಲಾಗಿ ಕಾರಖಾನೆಯ ಕೆಲಸ ಕಲಿತು ಮೈಮುರಿಯೆ ದುಡಿಯುವುದು ಎಷ್ಟೋ ಮೇಲು. ಇದು ನಮ್ಮ ಮರ್ಯಾದೆಗೆ ಕುಂದೇನೂ ಇಲ್ಲ. 'ಉತ್ತಮಂ ಸ್ವಾರ್ಜಿತಂ ವಿತ್ತಂ' ಎಂದು ಪೂರ್ವಿಕರು ಹೇಳಿರುವುದು ನಿಜ! ಪಾಶ್ಚಾತ್ಯ ಸಭ್ಯತೆ-ಶಿಕ್ಷಣ-ವರ್ತನಗಳ ಒತ್ತಾಟದಿಂದ ನಾವು ಎಂತಹ ಸೋಮಾರಿ, ಆರಾಮಪ್ರಿಯರಾಗಿರುವೆವು! ಔದ್ಯೋಗಿಕ ಉನ್ನತಿಯು ಈ ಯುಗದಲ್ಲಿ ಎಲ್ಲಾ ದೇಶಗಳೂ ಭರದಿಂದ ಸಾಗುತ್ತಿದ್ದು ನಾವು ಮಾತ್ರ ಹಿಂದುಳಿದೆವು. ಗ್ರಾಮಗಳಲ್ಲಿದ್ದ ಅಲ್ಪಸ್ವಲ್ಪ ಕೈಗಾರಿಕೆಗಳೂ ಹ್ರಾಸವಾಗುತ್ತ ಬಂದಿವೆ. ನಮ್ಮ ಜಿಲ್ಲೆಯಲ್ಲಿ ಎಲ್ಲಾ ತರದ ಉದ್ಯೋಗ-ಕೈಗಾರಿಕೆಗೂ ತೊಂದರೆಯಿಲ್ಲ. ಕೃಷಿ, ವಾಣಿಜ್ಯ, ಕಲೆ, ಸಂಗೀತ, ಚಿತ್ರಕಲೆ, ಶಿಲ್ಪ, ನೇಯ್ಗೆ, ಅಭಿನಯ, ಮುದ್ರಣ ಮುಂತಾದ ಎಲ್ಲಾ ಶಾಖೆಗಳಲ್ಲಿಯೂ ಯೋಗ್ಯ ತರಬೇತು ಮಾಡಿ ಯುವಕರನ್ನು ಜೀವನನಿರ್ವಹಕ್ಕೆ ಯೋಗ್ಯರನ್ನಾಗಿ ಮಾಡುವುದು ನಮ್ಮ ಉದ್ದೇಶವಾಗಿರಬೇಕು. ಪಾಶ್ಚಾತ್ಯ ಶಿಕ್ಷಣದಲ್ಲಿ ವೃಥಾ ಕಳೆಯುವ ಸಮಯವನ್ನು ಈ ರೀತಿಯ ದೇಶಹಿತಕಾರಿಗಳಾದ ವೃತ್ತಿಗಳಲ್ಲಿ ಉಪಯೋಗಿಸಿ ಲಾಭ ಪಡೆಯಬಹುದು. ಲುಪ್ತವಾಗುತ್ತಿರುವ ಅನೇಕ ದೇಶೀಯ ಕೈಗಾರಿಕೆಗಳು ಪುನರುಜ್ಜೀವಿತವಾಗುವುವು. ಬಡ ಜನರಿಗೆ ಜೀವನೋಪಾಯ ದೊರೆಯುವುದು. ದೇಶದ ಹಣವು ದೇಶದಲ್ಲಿಯೇ ನಿಂತು ಸುಭಿಕ್ಷೆಯಾಗಬೇಕು. ಹೀಗೆ ಯೋಚಿಸಿ ಮನಃಪೂರ್ವಕ ನಡೆಯುವವರೆಷ್ಟು ಮಂದಿ?

ಉಡುಪಿಯ ಉನ್ನತಿಯ ದೃಷ್ಟಿಯಿಂದ ಕೊಲೇಜಿಗಿಂತಲೂ ಅಧಿಕ ಆವಶ್ಯಕವಾದುದು ಒಂದು ಕಲಾಶಾಲೆ. ಸಾಮಾನ್ಯ ಜನರ ಕೈಗೆ ನಿಲುಕದ, ವ್ಯಯಸಾಧ್ಯವಾದ ಪಾಶ್ಚಾತ್ಯ ಶಿಕ್ಷಣವನ್ನು ಪಡೆದು ಕೊನೆಗೆ ನಿರುದ್ಯೋಗಿಗಳಾಗಿ ನರಳುವುದಕ್ಕಿಂತ ಅತ್ಯಗತ್ಯವಾದಷ್ಟೇ ಆಂಗ್ಲ ಶಿಕ್ಷಣದಿಂದ, ಉದ್ಯೋಗದಲ್ಲಿ ಅನುಭವ ಪಡೆದು ಸುಖಿಗಳಾಗುವುದು ಮೇಲಲ್ಲವೆ? ಕೊಲೇಜಿನ ಸಮಿತಿಯವರು ಇಂತಹದೊಂದು ಯೋಗ್ಯ ಕಲಾಶಾಲೆಯನ್ನು ಸ್ಥಾಪಿಸುವುದರ ಯುಕ್ತಾಯುಕ್ತತೆಯನ್ನು ಪರಾಂಬರಿಸುವರೆ? ಹಾಗೆ ಮಾಡಿದರೆ ನಮ್ಮ ಯುವಕರಿಗೂ ಅನುಕೂಲ. ಸಂಸ್ಥೆಗೂ ಆರ್ಥಿಕ ಅಭಾವವು ಬರಲಾರದು. ಅದರಿಂದ ಹುಟ್ಟಿಬರುವ ಉತ್ಪತ್ತಿಯೇ ಸುವ್ಯವಸ್ಥಿತವಾಗಿ ನಡೆಯಿಸಲು ಸಾಕಾಗುವುದು. ಅಲ್ಲದೆ ಪ್ರಕೃತ ಕೋಲೇಜಿನ ಸ್ಥಾಪನೆಗೆ ಬೇಕಾಗುವ ಧನದ ಅರ್ಧದಿಂದಲೇ ಕಲಾಶಾಲೆಯು ಸಾಧ್ಯವಾಗುವುದು. ಧನಿಕರು ಬೇಕಾದರೆ ಉಚ್ಚಶಿಕ್ಷಣಕ್ಕೆ ಹೋಗಲಿ. ಮಧ್ಯಶ್ರೇಣಿಯ ಜನರಿಗೆ ಉದ್ಯೋಗವೇ ಜೀವನಾಧಾರ. ಈ ವಿಷಯದಲ್ಲಿ ಮೈಸೂರು ಸಂಸ್ಥಾನವು ಆದರ್ಶವಾಗಿದೆ. ಕಲಾಶಾಲೆಗಳೂ, ಕಾರಖಾನೆಗಳೂ ಅವುಗಳಲ್ಲಿ ಕೆಲಸಮಾಡುತ್ತಿರುವ ಸುಖಮಯ ಜೀವಿಗಳೂ ಇದಕ್ಕೆ ನಿದರ್ಶನಗಳಾಗಿವೆ. ಅಂತಹ ಭಾಗ್ಯವು ಉಡುಪಿಗೂ ಬರುವುದೆ? 'ಗತಾನುಗತಿಕೋ ಲೋಕಃ' ಎಂಬಂತೆ ಪ್ರವಾಹದ ಜೊತೆಯಲ್ಲಿ ತೇಲಿಹೋಗುವುದು ಇನ್ನು ಮೇಲೆ ಹಿತಕರವಾಗಲಾರದು. ಪ್ರತಿ ದೇಶವೂ, ಪ್ರತಿ ಜಿಲ್ಲೆಯೂ, ಪ್ರತಿ ಭಾರತೀಯನೂ ತನ್ನ ಶಕ್ತಿಸಾಮರ್ಥ್ಯಗಳಿಗೆ ತಕ್ಕುದಾದ ವೃತ್ತಿಯನ್ನು ಅನುಸರಿಸಲು ಯೋಗ್ಯವಾಗುವಂತೆ ಪ್ರಯತ್ನಿಸಿದರೆ ಈಗಿರುವ ನಿರುದ್ಯೋಗಸಮಸ್ಯೆಯೂ, ದಾರಿದ್ರ್ಯ, ಪರಸ್ಪರ ಸ್ಪರ್ಧೆ ಇತ್ಯಾದಿಗಳೂ ದೂರವಾಗುವುದರಲ್ಲಿ ಸಂದೇಹವಿಲ್ಲ. ಈ ಸ್ವಪ್ನವೆಂದಾದರೂ ಫಲಿಸುವುದೆ? ಸರ್ವಶಕ್ತನಾದ ಶ್ರೀಕೃಷ್ಣನ ಇಚ್ಛೆಯೆಂತೊ!

ಒಬ್ಬ ಉಪಾಧಿಧಾರಿ.

---

ಮದರಾಸು ನ್ಯಾಯವಿಧಾಯಕ ಸಭೆಗೆ ಕೊಂಗ್ರೆಸ್ ವರವಾಗಿ ಚುನಾವಣೆಗೆ ನಿಲ್ಲಲು ಉಮೇದ್ವಾರರಾದ ಶ್ರೀ. ಉ. ಚಾ. ಸುಬ್ರಮಣ್ಯ ಭಟ್ಟರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡುವರೇ?

(೧) ಸ್ವಾಮಿ, ೧೯೨೯ನೇ ಇಸವಿಯಲ್ಲಿ ಕೊಂಗ್ರೆಸಿನವರು ಕೌನ್ಸಿಲಿಗೆ ಬಹಿಷ್ಕಾರ ಹಾಕಿದಾಗ, ತಾವು ಚುನಾವಣೆಗೆ ನಿತ್ತಿರಲ್ಲವೇ?

(೨) ಕಳೆದ ವರ್ಷ ಪಂಚಮ ಜಾರ್ಜರ ಜುಬಿಲಿ ಸಮಾರಂಭವನ್ನು ಕಾಂಗ್ರೆಸು ಬಹಿಷ್ಕರಿಸಿದಾಗ, ತಾವೆ ಜುಬಿಲಿ ಕಮಿಟಿಯ ಮೆಂಬರರಾಗಿ ಆ ಸಮಾರಂಭದಲ್ಲಿ ಸಹಕರಿಸಿದ್ದು ತಮ್ಮ ಕಾಂಗ್ರೆಸ್ ಧೋರಣೆಗೆ ಸರಿಹೋಗುವುದೇ?

(೩) ಜನರ ಪ್ರತಿನಿಧಿಯಾಗಿ ಕೌನ್ಸಿಲಿನಲ್ಲಿ ಸರಕಾರಧೊಡನೆ ಹೋರಾಡುವ ನೀವು ಪಬ್ಲಿಕ್ ಪ್ರೊಸಿಕ್ಯೂಟರ್ ಹುದ್ದೆ ನಿಮಗೆ ಸಿಕ್ಕಲು ಪ್ರಯತ್ನಪಟ್ಟದ್ದು ಎಂಬುದು ನಿಜವೇ?

(೪) ಕಳೆದ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಬೆಳ್ತಂಗಡಿ ಸರ್ಕಲಿನಿಂದ ಕಾಂಗ್ರೆಸ್ ಪ್ರತಿನಿಧಿಯಾಗಿ ನಿತ್ತ ರಾ. ಮಂಗೇಶ ರಾಯರ ವಿರುದ್ಧ ಕೆಲಸ ಮಾಡಬೇಕೆಂದು ತಾವು ಯಾರಿಗಾದರೂ ಪತ್ರ ಬರೆದಿದ್ದೀರೋ?

(೫) ಗವರ್ನರರು ಮಂಗಳೂರಿಗೆ ಬಂದಾಗ ತಾವು ಅವರ ಸ್ವಾಗತದಲ್ಲಿ ಸಹಕರಿಸಿದ್ದು ಕಾಂಗ್ರೆಸು ಧೋರಣೆಗೆ ಸರಿಯೋ?

(೬) ಈಗ ಕೂಡ, ಸರಕಾರದವರು ಏರ್ಪಡಿಸಿದ ಜಾರ್ಜ್ ಸ್ಮಾರಕ ಕಮಿಟಿಯಲ್ಲಿ ತಾವು ಮೆಂಬರೇ? ಯಾವುದಾದರೂ ಪಾರ್ಟಿಯ ಪರವಾಗಿಯೋ?

(೭) ತಾವು ಇಷ್ಟರ ವರೆಗೆ ಕೊಂಗ್ರೆಸಿನ ಒಂದು ಕಾರ್ಯಕ್ರಮದಲ್ಲಿಯಾದರೂ ಭಾಗವಹಿಸಿದ್ದಿರೋ?

(೮) ನೀವು ಕಾಂಗ್ರೆಸಿನವರಿಂದ ಒಂದು ವೇಳೆ ಆರಿಸಲ್ಪಡದಿದ್ದರೆ, ಕೊಂಗ್ರೆಸಿನವರಿಂದ ಆರಿಸಲ್ಪಟ್ಟ ಉಮೇದುವಾರರ ಪರವಾಗಿ ತಮ್ಮ ಉಮೇದುವಾರಿಕೆಯನ್ನು ಹಿಂದೆಗೆಯುವಿರೋ?

ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ತಾವು ಕೊಡಬಲ್ಲಿರಾದರೆ ತಾವು ಕಾಂಗ್ರೆಸ್ ಧೋರಣೆಯವರೇ ಎಂದು ಸಮಾಧಾನವಾದೀತು.

ಕಾಂಗ್ರೆಸ್ ಸ್ವಯಂಸೇವಕ.

---

For your Diamonds
enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

## ನೋಟೀಸು

**ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ**

O. S. No. 27/1936.

ಸೀತಾರಾಮು ವರ್ಣಾ—ವಾದಿ.

ಮತ್ತು

ಮುಂಜಪ್ಪ ಯಾನೆ ವೆಂಕಟೇಶ ಕಮ್ತಿ ಕೂಡ } ಪ್ರತಿವಾದಿರು.

4ನೇ ಪ್ರತಿವಾದಿ ಸುಬ್ಬಣ್ಣ ಭಟ್ಟ, ಅನಂತ ಭಟ್ಟರ ಮಗ, 5ನೇ ಪ್ರತಿವಾದಿ ಮಹಾಬ್ಲ ಹತ್ವಾರಾ, ನಾರಾಯಣ ಹತ್ವಾರನ ಮಗ, ಕುಂದಾಪುರ ತಾಲೂಕು ಬೀಜಾಡಿ ಗ್ರಾಮದ ಹುದ್ದಾಳಿಯಲ್ಲಿರುವವರು.

ವಾದಿಯು ಗೇಣಿ ಬಾಕಿ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 27-6-'36ಕ್ಕೆ ತನ್ನಿಗೆ ಇಡೋಣಾಗಿಯದೆ ಎಂತ ಸದರಿ 4-5ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಸೋಣಾಗುತ್ತದೆ. ಆದ್ದರಿಂದ ಸದ್ರಿಯವರು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 27—6—36ಕ್ಕೆ ಹಾಜರು ಆಗಲಿಕ್ಕೆ ತಪ್ಪಿದರೆ ಅವರನ್ನು ಎಕ್ಸ್ ಪಾರ್ಟಿ ಮುಂದಿನ ತನ್ನಿ ನಡೆಯುವುದು.

ಕುಂದಾಪುರ, ತಾ. 16-6-36. } G. Sanjiva Rao, Pleader for Plff.

---

Exquisite Workmanship—Prompt Execution can be had only at

**The Crown Rubber Stamp Co.,**

L. Balmatta, MANGALORE.
(Estd: 1926.)

Manufacturers of Air Cushion Rubber Stamps, Revolving Date Stamps, Brass, Glass & Wood Sign-boards, Badges, Belts, Wax Seals, Blocks, Painters, Designers & Engravers on Marble, Wood Etc.

**Awarded Medals & Certificates of Merit.**

*Thumb Impression Sets & Facsimile Stamps a Speciality.*

**Repairs of fountain pens undertaken.**

ಅತ್ಯುತ್ಕೃಷ್ಟ ತರಗತಿಯ

ಹೋಮಿಯೊಪತಿಕ್ ಮತ್ತು ಬಾಯೊಕೆಮಿಕ್

ಔಷಧಗಳಿಗಾಗಿ

ಇವರಿಗೆ ಬರೆಯಿರಿ—

**INDIAN HOMOEOPATHIC STORES,**

10/11 Upper Circular Road, :: CALCUTTA.

ಕೆಟಿಲಾಗು ಇತ್ಯಾದಿ ಅಪೇಕ್ಷಿಸಿದಲ್ಲಿ ಕಳುಹಲಾಗುವದು.

8, 19—6.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದ್ರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತರಬೇತು ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತಿವೆ. ಆದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂದೋಬಸ್ತಿನಲ್ಲೂ ಕುಂದಿಲ್ಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆಬಗೆ ಅಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೊ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯದ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,
ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು:—22, ಬೇಕರ್ ಸ್ಟ್ರೀಟ್, ಜಿ. ಟಿ., ಮದ್ರಾಸು.

ಬ್ರಾಂಚ್ ಆಫೀಸು:—ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

# ವಿಜ್ಞಾನ ವಿಷಯ

## "ವಿಜ್ಞಾನಿ"

ಅಮೇರಿಕದಲ್ಲಿ ಸಂಪಾದಿತವಾದ ವರ್ತಮಾನಪತ್ರಿಕೆಯನ್ನು ಮಂಗಳೂರಲ್ಲಿ ಅಚ್ಚು ಹಾಕಲು ಸಾಧ್ಯವಿದೆಯೇ?—

ಅಮೇರಿಕದಂತಹ ಬಹು ದೂರ ದೇಶದಲ್ಲಿ ಸಂಪಾದಿತವಾದ ವರ್ತಮಾನಪತ್ರವು ಅದೇ ಕಾಲದಲ್ಲಿ ಅಲ್ಲಿ ಅಚ್ಚಾದಂತೆ ಅಮೇರಿಕದಿಂದ ಬಹು ದೂರವಿರುವ ಮಂಗಳೂರಲ್ಲಿಯೋ ಬೆಂಗಳೂರಲ್ಲಿಯೋ ಛಾಪಿಸಿ ಪ್ರಕಟಿಸಲ್ಪಡುವುದೆಂದು ಹೇಳಿದರೆ ಆಶ್ಚರ್ಯವಾದೀತು? ವಿಜ್ಞಾನದೆದುರಿಗೆ ಅಸಾಧ್ಯವಾದುದು, ಆಶ್ಚರ್ಯವಾದುದು ಇಲ್ಲವೇ ಇಲ್ಲ. ಅಮೇರಿಕದ ಒಂದು ವರ್ತಮಾನಪತ್ರಿಕೆಯ ಆಫೀಸಿನಲ್ಲಿ ಸಂಪಾದಕನು ತನ್ನ ಬಳಿಗೆ ಬಂದ ವರ್ತಮಾನವನ್ನಾಗಲಿ ಲೇಖನವನ್ನಾಗಲಿ ಏಳು ಇಂಚು ಅಗಲವೂ ಸಾಕಷ್ಟು ಉದ್ದವೂ ಉಳ್ಳ ಕಾಗದದ ಮೇಲೆ ಬೇಕಾದಲ್ಲಿಗೆ ಚಿತ್ರಗಳನ್ನಿಟ್ಟು ಟ್ಯಾಪ್ ಮಾಡುವನು. ಈ ಕಾಗದವನ್ನು ಒಂದು ಎಲೆಕ್ಟ್ರಿಕ್ ಪೆಟ್ಟಿಗೆಯಲ್ಲಿ ಸೇರಿಸುವರು. ಅಲ್ಲಿ ಅದರ ಬರಹದ ಮೇಲೆ ವಿದ್ಯುತ್ಕಿರಣಗಳು ಬಿದ್ದು ಪ್ರಕಾಶಿಸಿ ಬರಹದ ಪ್ರತಿಬಿಂಬವು ಫೋಟೋ ಇಲೆಕ್ಟ್ರಿಕ್ ಸೆಲ್ಲಿನ ಮೇಲೆ ಬೀಳುತ್ತದೆ. ಬರಹವನ್ನು ಅಲ್ಲಿಂದ ರೇಡಿಯೋ ಮೂಲಕ ಲೋಕದ ಎಲ್ಲಾ ರೇಡಿಯೋ ಸ್ಟೇಷನುಗಳಿಗೂ ಕಳುಹಿಸಬಹುದು. ನಮ್ಮ ಮಂಗಳೂರಲ್ಲಿ ರೇಡಿಯೋ ಸ್ವೀಕರಣಯಂತ್ರವಿದ್ದರೆ ಅದರ ಮೂಲಕ ಅಮೇರಿಕದಲ್ಲಿ ಸಂಪಾದಿತವಾದ ವರ್ತಮಾನವನ್ನು ತೆಗೆದುಕೊಂಡು ಇಲ್ಲಿ ಕೂಡಲೇ ಅಚ್ಚುಹಾಕಲು ಬರುತ್ತದೆ. ಈ ಯಂತ್ರಗಳೀಗ ಪ್ರಯೋಗಾವಸ್ಥೆಯಲ್ಲಿವೆ. ಇನ್ನು ಯಂತ್ರಗಳು ಮಾರ್ಕೆಟಿಗೆ ಬರಲು ತಡವಾಗಲಾರದು. ಇದೊಂದು ಯಂತ್ರವು ಬಂದರೆ ಒಂದು ದೇಶದ ಪತ್ರಿಕೆಯನ್ನು ಅದೇ ದಿನ ಇನ್ನೊಂದು ದೇಶದಲ್ಲಿ ಅದೇ ಸಮಯದಲ್ಲಿ ಓದಲು ಬರುವುದಲ್ಲದೆ ಸಮಯವೂ ಸವಿಾಪವಾಗುವುದು.

× × × × ×

### ಆಕಾಶದ ತೂಕ

ಜರ್ಮನಿಗೆ ಸೇರಿದ ಬವೇರಿಯಾ ದೇಶದಲ್ಲಿ ಜರ್ಮನಿಯ ವಿಜ್ಞಾನಶಾಸ್ತ್ರಕಾರರು ಆಕಾಶದಲ್ಲಿ ತೇಲುವ ಮೋಡಗಳ ತೂಕವನ್ನು ಕಂಡು ಹಿಡಿಯುವ ಯಂತ್ರವನ್ನು ರಚಿಸಿರುತ್ತಾರೆ. ಆಕಾಶದಲ್ಲಿ ತೇಲಾಡುವ ಮೋಡಗಳೆಲ್ಲವನ್ನು ತೂಕ ಮಾಡಿದರೆ ಅವುಗಳ ತೂಕವು ೬೧,೫೭೦,೦೧,೦೦೦ ಪೌಂಡುಗಳಷ್ಟು ಆಗುವುದಂತೆ. ಅಂದರೆ ಆಕಾಶದ ತೂಕವು ೫೭೪,೦೧೮ ಟನ್ನುಗಳಷ್ಟು ಆಗುತ್ತದೆ. ಬವೇರಿಯದಲ್ಲಿ ನಿತ್ಯವೂ ಬೀಳುವ ಮಳೆಯನ್ನು ಅಳೆಯುವುದರಿಂದಲೂ ಅದನ್ನು ತೂಗುವುದರಿಂದಲೂ ಈ ಲೆಕ್ಕವನ್ನು ತೆಗೆದಿರುತ್ತಾರೆ.

× × × × ×

### ಅದೃಶ್ಯದ ಆಚೆ ನೋಡುವುದು

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ವಿಲ್ಸನ್ ಬೆಟ್ಟ ಎಂಬಲ್ಲಿ ನಭೋಮಂಡಲದರ್ಶಕಾಲಯವೊಂದಿರುತ್ತದೆ. ವಿ॥ ಯಡ್ವಿನ್ ಪೊವೆಲ್ ಹಬರ್ ಎಂಬವರು ನೂತನ ಗ್ರಹಮಂಡಲವೊಂದನ್ನು ತಮ್ಮ ದೂರದರ್ಶಕಯಂತ್ರದಿಂದ ಕಂಡುಹಿಡಿದಿರುತ್ತಾರೆ. ಇದು ೫೦ ಕೋಟಿ ಪ್ರಕಾಶವರ್ಷಗಳ ದೂರದಲ್ಲಿದೆ. ಒಂದು ಪ್ರಕಾಶವರ್ಷಕ್ಕೆ ೬೦ ಲಕ್ಷ ವರ್ಷಗಳಂತೆ, ಗುಣಾಕಾರ ಹಾಕಿದರೆ ಅಗಾಧವಾಗಿರುತ್ತದೆ. ಈ ನೂತನ ಗ್ರಹಮಂಡಲದಲ್ಲಿ ಅನೇಕ ನಕ್ಷತ್ರಗಳೂ, ಗ್ರಹಗಳೂ ಇರುತ್ತವೆ. ಇವೆಲ್ಲವೂ ವಿಚಿತ್ರ ಪ್ರಪಂಚವೇ ಆಗಿರುತ್ತವೆ. ನಕ್ಷತ್ರಕೋಟಿಯ ಈ ರಾಶಿಯಲ್ಲಿ ಹತ್ತು ಕೋಟಿ ನಕ್ಷತ್ರಗಳೂ ಅನೇಕ ಗ್ರಹಗಳೂ ಇರುತ್ತವೆ. ಈ ನಭೋರಾಶಿಯು ಸೂರ್ಯನಿಗಿಂತಲೂ ೨ ಸಾವಿರ ಕೋಟಿ ಪಾಲು ಭಾರವಾಗಿಯೂ ಸೂರ್ಯನ ಬೆಳಕಿಗಿಂತ ೬೫೦ ಲಕ್ಷದಷ್ಟು ಪ್ರಕಾಶವಾಗಿಯೂ ಇರುತ್ತದಂತೆ! ಈ ದೃಶ್ಯವನ್ನು ನೋಡಲು ಎಂತಹ ಕಣ್ಣುಗಳಿರಬೇಕು!

× × × × ×

### ಲೋಕವೆಲ್ಲಾ ವಿದ್ಯುನ್ಮಯ

ವಿಶ್ವದಲ್ಲಿ ಕಾಣುವ ಪೃಥ್ವಿ, ಜಲ, ವಾಯು, ತೇಜಸ್ಸು, ಶೂನ್ಯಗಳು ಸ್ಪಷ್ಟವಾಗಿ ಗೊತ್ತಾಗುವವುಗಳು. ವೇದಾಂತಿಗಳು ಈ ಪಂಚಭೂತಗಳನ್ನು ಏಕಮೇವಾದ್ವಿತೀಯನಾದ ಬ್ರಹ್ಮನ ವಿವಿಧ ರೂಪಗಳೆಂದೂ ಈ ರೂಪಭೇದಕ್ಕೆ ಅವನ ಮಾಯೆಯೇ ಕಾರಣವೆಂದೂ ಹೇಳುತ್ತಾರೆ. ಈಗ ವಿಜ್ಞಾನವು ಈ ಕಡೆಗೆ ಒಲೆಯುತ್ತದೆ. ಅಮೇರಿಕದ ಪ್ರಸಿದ್ಧ ವೈಜ್ಞಾನಿಕನಾದ ಡಾ. ಕಾರ್ಲ ಟಿ. ಕಾಂಪಟನನು ಸಮಗ್ರ ವಿಶ್ವದಲ್ಲಿ ಸೇಕಡಾ ೯೯.೯೫ ವಿದ್ಯುಚ್ಛಕ್ತಿಯಿದೆಯೆಂದು ಹೇಳಿದ್ದಾನೆ. ಸೇಕಡ ೫ ಏನೂ ಇಲ್ಲ! ಈ ದೃಷ್ಟಿಯಿಂದ ನಾವು ಕಾಣುವುದೆಲ್ಲಾ ವಿದ್ಯುನ್ಮಯವಾಗಿದೆಯೆಂದು ಹೇಳಬಹುದಲ್ಲವೆ?

× × × × ×

### ಸಮಯನಿರೀಕ್ಷಣಿ

ಮೊತ್ತಮೊದಲು ನೆರಳಿನ ಸಹಾಯದಿಂದ ಸಮಯವನ್ನು ಕಂಡುಹಿಡಿಯುತ್ತಿದ್ದರು. ಆ ಮೇಲೆ ಜಲಘಟಿಕೆ (ಗಂಟೆ ಬಟ್ಟಲು)ಯನ್ನೂ ಆ ಮೇಲೆ ಹೊಯಿಗೆಯಿಂದ ಸಮಯ ಅಳೆಯುವುದನ್ನೂ ಕಂಡುಹಿಡಿದರು. ಈ ಉಪಕರಣಗಳಿಂದ ಸಮಯವನ್ನಳೆಯುವ ಕಾಲವು ಸಂದು ಹೋಗಿ ಎಷ್ಟೋ ಕಾಲವಾಯಿತು. ಈಗಿನ ಗಡಿಯಾರಗಳು ಸಮಯವನ್ನಳೆದು ತೋರಿಸುವ ಕೆಲಸವನ್ನು ಮಾಡತೊಡಗಿ ಎಷ್ಟೋ ಸಮಯವಾಯಿತು. ಅವುಗಳಲ್ಲಿ ಕೂಡ ಅನೇಕ ಪರಿವರ್ತನಗಳಾಗಿವೆ. ಕೆಲ ದಿನಗಳ ಹಿಂದೆ ಅಮೇರಿಕದ ವಾಯಿಲ್ ಬೀರಿಸ್ ಕಂಪೆನಿಯ ಮಾಲಿಕರು ಒಂದು ಗಡಿಯಾರವನ್ನು ತಯಾರಿಸಿದರು. ಅದರ ವಿಸ್ತಾರ ೭೫೯ ವರ್ಗ ಫೀಟು. ಇದರಲ್ಲಿರುವ ಅತಿ ದೊಡ್ಡ ಅಕ್ಷರದ ಆಕಾರ ೬ ಫೀಟು ೯ ಇಂಚು. ಅತಿ ಸಣ್ಣ ಅಕ್ಷರದ ಆಕಾರ ೩ ಫೀಟು. ಈ ಗಡಿಯಾರವು ವಿದ್ಯುತ್ತಿನ ಸಹಾಯದಿಂದ ನಡೆಯುವುದರಿಂದ ಇದನ್ನು ಸರಿ ಮಾಡುವ ಕೆಲಸವಾಗಲಿ, ಇದಕ್ಕೆ ಕೀ ಕೊಡುವ ಕೆಲಸವಾಗಲಿ ಇಲ್ಲ. ಇದರ ಮಿನಿಟು ತೋರಿಸುವ ಮುಳ್ಳು ಸುಮಾರು ೧೭ ಫೀಟು ಉದ್ದವಿದೆ ಎಂದರೆ ಆಶ್ಚರ್ಯವಾದೀತು. ಇದನ್ನು ತಯಾರಿಸಲಿಕ್ಕೆ ೧೪ ಟನ್ ಲೋಹವನ್ನುಪಯೋಗಿಸಿದರು.

# ವಿವಿಧ-ವೃತ್ತ

## THE CEMENT MERGER.

### ಸಿಮೆಂಟ್ ಸಮ್ಮಿಲನ-ಅದರ ಕಾರಣವೇನು?

ಪೋರ್ಟ್‌ಲ್ಯಾಂಡ್ ಸಿಮೆಂಟ್ ಮೊದಲನೆ ಬಾರಿಯಾಗಿ ಈ ದೇಶದಲ್ಲಿ ೧೯೦೪ರಲ್ಲಿ ಮದ್ರಾಸು ಪಟ್ಟಣದ ಸರಹದ್ದಿನಲ್ಲಿ ಚಿಕ್ಕದೊಂದು ಕಾರ್ಖಾನೆಯಲ್ಲಿ, (ಈಗ ಇದು ಇರುವುದಿಲ್ಲ) ಸಿದ್ಧಗೊಳಿಸಲ್ಪಟ್ಟಿತು, ಆದರೆ ೧೯೧೭ರ ವರೆಗೆ ಇಂದಿನ ಕೈಗಾರಿಕೆಯ ಶಂಕುಸ್ಥಾಪನೆಯು ಹಾಕಲ್ಪಡಲಿಲ್ಲ.

ಈ ವರ್ಷದಲ್ಲಿ ಇಂಡಿಯನ್ ಸಿಮೆಂಟ್ ಕೊ., ಲಿಮಿಟೆಡ್, ರಿಜಿಸ್ಟರ್ ಮಾಡಲ್ಪಟ್ಟಿತು. ಮತ್ತದರ ಹಿಂದೆಯೇ ಎರಡು ವರ್ಷಗಳಲ್ಲಿಯೂ ಕಟ್ನಿ ಮತ್ತು ಬುಂಡಿ ಕಂಪೆನಿಗಳು ಆರಂಭವಾದುವು.

ಆರಂಭಕಾಲದಲ್ಲಿ ಇವೆಲ್ಲಾ ಕಾರ್ಖಾನೆಗಳು ಚಿಕ್ಕ ಪ್ರಮಾಣದಲ್ಲಿದ್ದುವು, ಆದರೂ ಯುದ್ಧದ ಸಮಯದಲ್ಲಿ ತಮ್ಮ ಶಕ್ತಿ ವಿಾರಿ ತಮಗಿದ್ದ ಸೌಲಭ್ಯಗಳಿಗನುಕೂಲವಾಗಿ ಹಿಂದೂ ಸ್ಥಾನದ ಸಿಮೆಂಟಿನ ಆವಶ್ಯಕತೆಯನ್ನು ನೀಗಿಸಲು ಪ್ರಯತ್ನಿಸಿದುವು.

೧೯೨೦ರಿಂದ ೧೯೨೩ ರ ವರೆಗೆ ಔನ್ನತ್ಯವುಂಟಾಯಿತು. ಯುದ್ಧವು ಮುಗಿದುದರಿಂದ, ಪುರವಣೆಯನ್ನು ಹೆಚ್ಚಿಸಲು ತವಕವುಂಟಾಗಿ ಹೊಸ ಮತ್ತು ದೊಡ್ಡ ಕಾರ್ಖಾನೆಗಳು ಯಂತ್ರೋಪಕರಣಗಳು ಎಷ್ಟು ಬೇಗ ಸಿಕ್ಕಿದುವೋ ಅಷ್ಟು ರಭಸದಿಂದ ತಲೆಯೆತ್ತಿದುವು.

೧೯೨೪ನೇ ಇಸವಿಯು ಬಾಲ್ಯಾವಸ್ಥೆಯಲ್ಲಿದ್ದ ಈ ಕೈಗಾರಿಕೆಯು ಸಂದಿಗ್ಧಕ್ಕೊಳಗಾದುದನ್ನು ಕಂಡಿತು.

ಈ ಹೊಸ ಕಾರ್ಖಾನೆಗಳಲ್ಲಿ ಅನೇಕವು ಮೊದಲೇ ಇದ್ದ ಕಾರ್ಖಾನೆಗಳ ಭೌಗೋಲಿಕ ವ್ಯಾಪಾರಿ ಕ್ಷೇತ್ರದೊಳಗೆನೇ ನಿರ್ಮಿಸಲ್ಪಟ್ಟಿದ್ದು, ಅವರವರೊಳಗಿನ ಸ್ಪರ್ಧೆಯು ಎಷ್ಟೋ ದೂರ ಕ್ಯಾದರೂ ಯಾವ ಕ್ರಮದಲ್ಲಾದರೂ ಒದಗಿಸಲು ವ್ಯಾಪಾರಕ್ಕಾಗಿ ಹೆಣಗಾಟವನ್ನುಂಟು ಮಾಡಿದುದರ ಪರಿಣಾಮವಾಗಿ ಈ ಕೈಗಾರಿಕೆಯ ಪಾಲುದಾರರು ಅಪಾರವಾದ ನಷ್ಟವನ್ನನುಭವಿಸಿದರು. ಈ ವಿಷಯವಾದ ಅನೇಕ ಅಂದಾಜುಗಳು ಇದರ ಮೊತ್ತವನ್ನು ರೂ. ೨ ರಿಂದ ೨॥ ಕೋಟಿಗಳ ವರೆಗೆ ಪರಿಗಣಿಸಿವೆ.

ಈ ತರದ ವಿದ್ಯಮಾನಗಳು ಮುಂದರಿಯಲಾರದಾದುವು. ಮತ್ತು ೧೯೨೬ರಲ್ಲಿ ಹಿಂದೂಸ್ಥಾನದ ಸಿಮೆಂಟ್ ಕೈಗಾರಿಕೆಯ ವಿಷಯವಾಗಿ ಟ್ಯಾರಿಫ್ ಬೋರ್ಡಿನ ವಿಚಾರಣೆಯ ಪರಿಣಾಮವಾಗಿ ಸಿಮೆಂಟನ್ನು ತಯಾರಿಸುವವರೊಳಗೆ ಸಹಕಾರದ ಆವಶ್ಯಕತೆಯು ಸ್ಪಷ್ಟವಾಗಿ ಖಂಡಿತಮಾಡಲ್ಪಟ್ಟಿತು ಮತ್ತು ಅಂಥಾ ಕಂಪೆನಿಗಳ ಕಾರ್ಯಭಾರದಲ್ಲಿ ಸೇರಿದವರು ಅದಕ್ಕಾಗಿಯೇ ಇಂಡಿಯನ್ ಸಿಮೆಂಟ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಶನ್ ಎಂದು ಕರೆಯಲ್ಪಡುವ ಕುಂಟೆಯೊಂದನ್ನು ಸ್ಥಾಪಿಸಿದರು.

ಈ ಕುಂಟೆಯ ಪ್ರಶಾಂತವಾದ ನೀರಿನಲ್ಲಿ ಕೈಗಾರಿಯು ಪುನರುಜ್ಜೀವನಗೊಳಲಾರಂಭಿಸಿತು, ವಿಕ್ರಿತದ ಕ್ರಯಗಳು ಸ್ಥಿರಗೊಳಿಸಲ್ಪಟ್ಟುವು, ಮತ್ತು ಅಧಿಕವಾಗಿ ಸಿದ್ಧಗೊಳಿಸಲ್ಪಡುತ್ತಿದ್ದ ಸಿಮೆಂಟಿಗೆ ಮಾರ್ಕೆಟುಗಳನ್ನು ಬೆಳೆಸುವದರಲ್ಲಿ ಪ್ರಥಮ ಸೋಪಾನವು ಹಾಕಲ್ಪಟ್ಟಿತು.

ಈ ವಿಧಾನಗಳಲ್ಲೇ ಕೈಗಾರಿಕೆಯು ೧೯೩೦ರ ವರೆಗೆ ಮುಂದುವರಿಯಿತಲ್ಲದೆ ಈ ಸಮಯದೊಳಗಾಗಿ ಸರಕಾರದ ಮೌಲ್ಯದ ಪಾಠವು ಸಂಪೂರ್ಣವಾಗಿ ತಿಳಿದುಕೊಳ್ಳಲ್ಪಟ್ಟಿತ್ತು. ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಒಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸುವದರಲ್ಲಿ ಇನ್ನೊಂದು ಮುಂಬರಿಯುವ ಸೋಪಾನವು ಕಟ್ಟಲ್ಪಟ್ಟಿತು.

ಈ ಕಂಪೆನಿಯ ಕೆಳಗೆ, ಇದರ ಸದಸ್ಯ ಕಂಪೆನಿಗಳ ವಿಕ್ರಿತದ ವಿಚಾರಣೆಗಳು ಕೇಂದ್ರೀಕರಿಸಲ್ಪಟ್ಟುವು ಮತ್ತಿದರ ಕರಾರಿನ ಮೇರೆಗೆ ಪ್ರತಿಯೊಂದು ಸದಸ್ಯ ಕಂಪೆನಿಯು, ಅದರ ತಯಾರಿ ಸಾಮರ್ಥ್ಯಕ್ಕನುಗುಣವಾಗಿ, ಜುಮ್ಲಾ ವ್ಯಾಪಾರದ ದಾಮಾಶಾಯೆಯಲ್ಲಿ ಪಾಲು-ಯಾ ಭಾಗ—ದೃಢಪಡಿಸುವದಾಗಿತ್ತು.

ಈ ಸಿ. ಎಮ್. ಐ. ಕಾರ್ಯವನ್ನೆಸಗುತ್ತಿರುವ ಈ ಆರು ವರ್ಷಗಳಲ್ಲಿ, ಮೊದಲೇ ನಿಶ್ಚಿತವಾದ ಭಾಗದ ಮೇರೆಗೆ ಪ್ರತಿಯೊಂದು ಕಾರ್ಖಾನೆಗೂ ಕೆಲಸವನ್ನೊದಗಿಸುವಷ್ಟರ ಮಟ್ಟಿಗೆ ಇದು ಯಶಸ್ವಿಯಾಗಿದೆ—ಕೂಡಿಕೆಯಾದ ನಿಧಿಯಿಂದಾಗಿ, ವಿಕ್ರಿತವನ್ನು ವೃದ್ಧಿಗೊಳಿಸುವದಕ್ಕಾಗಿ ಪೂರ್ಣ ಶಕ್ತಿಯನ್ನು ಫಲಕಾರಿಯಾದ ಪ್ರಕಟಣಾ ಮತ್ತು ಪ್ರಚಾರಕಾರ್ಯಕ್ಕಾಗಿ ಉಪಯೋಗಿಸಲು ಅದು ಶಕ್ತವಾಗಿದೆ, ಇಲ್ಲವಾದಲ್ಲಿ ಪ್ರತಿಯೊಂದು ಬ್ಯಾಂಡಿನ ಹೆಸರನ್ನು ಜನತೆಯ ಮುಂದಿಡಲು ಹೇರಳ ಹಣವನ್ನು ವ್ಯಯಿಸಬೇಕಾಗುತ್ತಿತ್ತು.

ಕಂಪೆನಿಯ ದುರ್ದೈವವಶಾತ್ ಎಂಬಂತೆ, ಅನೇಕ ಕಾರಣಗಳಿಂದಾಗಿ, ವಿಕ್ರಿತದ ಸಾಧ್ಯತೆಯು ದೇಶದಲ್ಲೆಲ್ಲಾ ಏಕಪ್ರಮಾಣವಾಗಿರುವದಿಲ್ಲ ಮತ್ತಿಲ್ಲೀಗ ಕರಾರಿನ ಮುಖ್ಯ ಮೇರೆಯಿರುತ್ತದೆ.

ಪ್ರಕೃತದ ಪದ್ಧತಿಯು ಮೇರೆಗೆ, ಅಧಿಕವಾಗಿ ಖರ್ಚಾಗುವ ಕೇಂದ್ರಗಳ ಮಧ್ಯದಲ್ಲಿ ಕಾರ್ಖಾನೆಯಾ ಕಾರ್ಖಾನೆಗಳಿದ್ದರೂ, ಅಲ್ಲಿ ಬೇಕಾಗಿರುವಷ್ಟನ್ನೆಲ್ಲಾ ಒದಗಿಸಲು ಬಿಡಲ್ಪಡದೆ, ಕೆಲವು ಸಂದರ್ಭಗಳಲ್ಲಿ, ನೂರಾರು ಮೈಲು ದೂರದಲ್ಲಿರುವ ಕಾರ್ಖಾನೆಗಳಿಂದ, ಅನುಕೂಲವಾಗಿರುವ ಈ ಕಾರ್ಖಾನೆಗಳ ಹೆಬ್ಬಾಗಿಲು ಮುಂಭಾಗದಿಂದಲೆಂಬಂತೆ, ಅವಕ್ಕೂ ವಿಕ್ರಿತದಲ್ಲಿನ ಅವುಗಳ ಭಾಗವು ದೊರೆಯಲೋಸುಗವಾಗಿ, ಸಿಮೆಂಟು ಕಳುಹಿಸಲ್ಪಡುತ್ತದೆ.

ಇದರಿಂದಾಗುವ ಅನಾವ್ಯಯದ ವಿಷಯವಾಗಿ ದೀರ್ಘಗೊಳಿಸುವದು ಅನಾವಶ್ಯಕ.

ಕಾರ್ಯಭಾರಕ್ಕೆ ಕಾರಣೀಭೂತರಾದವರು ಮತ್ತು ಕೈಗಾರಿಕೆಯಲ್ಲಿ ಹತ್ತಿರದ ಸಂಬಂಧವುಳ್ಳವರು ಪ್ರಕೃತದ ಪದ್ಧತಿಯು ಧಕ್ಕೆಬಡೆಯುವಂಥಾದ್ದನ್ನು ಅರಿತುಕೊಳ್ಳಬೇಕು. ಮತ್ತು ಅವರು ಅದನ್ನು ಅರಿತುಕೊಂಡಿದ್ದು ಅದರಿಂದಾಗಿ ನಮ್ಮ ಮುಂದೀಗ ಅವರ ಮುಂದರಿಯುವ ಆಧುನಿಕ ಸೋಪಾನವಿದೆ. ಇದೀಗ ಸಮ್ಮಿಳನ.

ಈ ಯೋಜನೆಯು ಬಹಳ ಜಾಗರೂಕತೆಯಿಂದ ಆಲೋಚಿಸಲ್ಪಟ್ಟಿದೆ ಮತ್ತು ಇಂದಿನ ದೋಷಗಳನ್ನು ತಿದ್ದಿಕೊಳ್ಳಲಾಗಿ ಆಲೋಚಿಸಲ್ಪಟ್ಟಿದೆ, ಇನ್ನೂ ಹೆಚ್ಚಿಗಿನ ಸೌಕರ್ಯಗಳನ್ನುಂಟುಮಾಡತಕ್ಕುದಾಗಿದೆ ಹಾಗೂ ಸಂಪೂರ್ಣ

(೧೧ನೇ ಪುಟಕ್ಕೆ ಮುಂದುವರಿಸಿಯದೆ)


# Jai Vijaya Insurance Company, Limited.

**Head Office:—16 LINGHI CHETTY STREET, POST BOX 251, MADRAS.**

Jai Vijaya the most scientific and one of the best Companies of the east coast is famous for its strong directorate, efficient management, low and easy monthly payments suitable to poor and middle class people. This ideal life office is the only one which issues policies for Rs. 250 and multiples thereof.

***MOST ATTRACTIVE BONUS.***

A rebate of Rs. 2½% on yearly payment of premiums. Ask for particulars of Table IX.

## WANTED

**Wanted immediately Taluk Chief Agents on a monthly salary of Rs. 60. Only men of position and influence need apply.**

*For particulars write to:*—**B. S. RAI,** *Organiser,*
Jai Vijaya Insurance Coy., Ltd., P. O. FARANGIPET, S. Kanara.

# OMNIUM-GATHERUM.

Through the kind courtesy of Mr. S. S. Rajan, of Bombay we publish below Speech by Mr. T. V. A. Isvaran, Trade Commissioner, at the Mysore Dinner 1936 at London on 4—6—36.

Sir Harcourt Butler, Ladies and Gentlemen:

My first duty is to say how glad I am to see so large a gathering of devoted subjects of the Mysore State and so many others who are warm-hearted friends of the land we love.

As Trade Commissioner in London, and in that sense direct representative of the Mysore Government in the heart of the Empire, it is my privilege and pleasure to welcome you all and to thank you sincerely for having responded so kindly to the invitation to participate in the celebration once more of the birthday of His Highness, Sir sri Krishnaraja Wadiyar Bahadur.

Many of you are probably aware that this is not precisely the anniversary of His Highness. Actually that day fell on May 31st, but as certain important considerations—also some inconveniences—intervened, we could not hold this festival on Sunday last nor yet on the evening of Whit Monday; so we have done the best possible in the circumstances to synchronise our Mysore Dinner as nearly as possible with the natal day of H. H. the Maharaja.

Since the last festival here in London, at which I believe many of you were present, one great event has occurred and it is, I feel, appropriate that I should speak of it. I refer to the passing away of King George, and his succession by the new King Emperor, Edward VIII. Mysore, in common with the rest of the Empire, mourned deeply the loss of a great Sovereign and has renewed to her son her assurances of profound and devoted loyalty to the Crown.

Returning to the subject and purpose of our gathering together to-night, let me say that Mysore Dinners have been held in the past by small and isolated groups of Mysoreans and their English friends in London, but the initiative to plan and stabilise such functions in their present form, associated with the birthday of His Highness, emanated from Mysore itself. I am glad to say that it is now the desire of the authorities in Mysore to make the gathering a pleasurable yearly function a 'hardy annual' if you like—but one to which we should all look forward with keen zest.

I would not take undue advantage of this occasion to recount to you the many beneficial measures—political, administrative and economical—that have been inaugurated and accomplished for the good of the country in recent years under the gracious inspiration, unceasing solitude and guidance of His Highness. Probably in the goodness of his heart and the friendship which we know he has for our country, Sir Harcourt Butler, whom we are delighted to have as our principal guest of honour, may feel disposed to say something of particular interest relative to the progress of our country. In that hope I realise that I have a delicate course to pursue. I have to avoid Scilla by not ommitting to say what it is only apropriate I should say on this occasion, but I must also steer clear of Charybdis by not anticipating what may fall from the lips of our distinguished guest by my side.

I would, therefore, content myself by remarking generally that Mysore remains to day what she has so long been one of the most happy and advanced Indian States within the Empire. The story of her progress during the last decade has recently been chronicled in a special brochure published under the title of 'A Decade of Modern Mysore' by a Mysorean who wishes to remain anonymous. He who runs may read in Mysore the extraordinary variety of problems and questions and administrative measures pertaining to the advancement of the State which, according to Mysoreans, have, with great foresight and vigour, been handled in the past decade. The efficiency and integrity of the civil and other essential services in the state have been acknowledged to be of the highest order. The members of those services are constantly disciplined and tutored to visualise themselves and to act accordingly as the servants of the public, and not its masters, and a natural ardour thus to serve the country truly and well is inherent in them. Further I believe they are made to appreciate and act up to the truth contained in the following saying by a well known thinker 'Do not act as though you had 10,000 years to throw away. Death stands at your elbow. Be good for something while you live and it is in your power.'

Under the sagacious and paternal, but none the less, I should say, masterly rule of His Highness, and under the devoted and patriotic statesmanship of the Dewan, Sir Mirza Ismail, whose record, Mysoreans of all shades of opinion, claim has no parallel either in Mysore or even outside it, the state of affairs, in Mysore could not be otherwise than that condition so well described by a great patriot of India as that of Rama Raja, or the Righteous Rule.

I am remided on this occasion of what a very distinguished liberal politician of South India, who knows Mysore and its ruler intimately, said some time ago in a speech delivered in Mysore. I make no apologies for quoting him as follows: 'There was scarcely one of the Princely Order whose name could be mentioned along with that of His Highness for the deep interest he took in the welfare of his subjects: for his profound understanding of the problems of the state and of its relations with the rest of India, or for the personal devotion and affection in which he was held by his subjects as well as by those who had the pleasure and the privilege of knowing him personally.' The same speaker went on to say 'It might be said of His Highness as it was often said of good men and good women amongst them, that if the seasons came round in regularity and the heavens gave in due time and in due measure, then that good fortune was due among other reasons to the existence among them of men like H. H. the Maharaja of Mysore'.

I am sure that those of you who have served Mysore and those of you who have known Mysore will agree with me when I say that to us our Maharaja is not only a Prince among men but a Prince among the Princes of India.

If this were the occasion for a more detailed reference to the internal economy of the country, the expansion of its activities, its commerce and its overseas trade in particular, with the promotion of which I am directly associated—I could tell you many things of interest regarding what has been achieved and of things to come. The story would then be one of steady progress in the face of difficulties in world commerce we all understand.

In every way Mysore is, I am happy to say, becoming widely known. In the sphere of its commerce Mysore is gathering greater strength, wider influence and an extending circle of friends and a keener demand for her products. Amongst these latter let me mention Mysore Coffee, which we all love as the best in the world, and Sandalwood Oil, which wafts the name Mysore in perfume throughout the Universe. Yes, and here in this wonderful old city of London, Mysore Granite continues to meet with increasing demand as stepping stones beneath our feet—to give us, when we think of it, that sense of endurance, stability, and solidarity which are almost symbolical of age-old, glorious and progressive Mysore.

To you all, Ladies and Gentlemen, and particularly to you, Sir Harcourt, as our principal and honoured guest of the evening, I extend once more my hearty thanks for your presence here to-night.

---

(೧೦ನೇ ಪುಟದಿಂದ)

ವಾಗಿ ಅದನ್ನೊಂದು ಶಾಶ್ವತ ರೂಪದಲ್ಲಿ ಒಂದು ಗೂಡಿಸತಕ್ಕುದಾಗಿದೆ—ಅಂದರೆ ಕೈಗಾರಿಕೆಯು, ಅದರಿಂದಾಗಿ ಅದರ ಪಾಲುಗಾರರ ಸ್ಥಾನವನ್ನು ಆಕ್ರಮಿಸಲಸಾಧ್ಯಮಾಡುವುದಾಗಿದೆ.

ಇದಕ್ಕೆ ಅನೇಕ ವರ್ಷಗಳ ಜಾಗ್ರತೆ ತಯಾರಿಯು ಬೇಕಾಯಿತು. ಮತ್ತು ಈ ಯೋಜನೆಯು ಯಶಸ್ವಿಯಾಗಿ ಕಾರ್ಯರೂಪಕ್ಕೆ ಕರುವಾಗ ಅದು ಭಾರತೀಯ ವ್ಯಾಪಾರದ ಇತಿಹಾಸದಲ್ಲಿ ಅಸಮಾನವಾದ ರಾಷ್ಟ್ರೀಯ ಕಾರ್ಯಸಿದ್ಧಿಯಾಗಿ ಪರಿಣಮಿಸುವುದು.


ವೈದ್ಯವಿಶಾರದ ಎಚ್. ತಿಮ್ಮಪ್ಪ ಪಂಡಿತ, ಪ್ರೊಪ್ರೈಟರ್.

## ಆನಂದ ಚಂದ್ರೋದಯ ಆಯುರ್ವೇದಿಕ್ ಔಷಧಾಲಯ.

ಮಾರ್ಕೆಟ್ ರೋಡ್, ಹಂಪನಕಟ್ಟೆ. ಮಂಗಳೂರು.

ಸಚ್ಚಿದಾನಂದ ಚೂರ್ಣ.

ಎಲ್ಲಾ ತರದ ಪಿತ್ತರೋಗ, ಪಿತ್ತಸಾಂಡು, ಪಿತ್ತಕಾಮಿಲಾ ರೋಗಕ್ಕೆ

ಈ ರೋಗದಿಂದ ಉಂಟಾಗಿರುವ ಜಗೆ, (ಎದೆ ಹಾರುವದು) ಸಂದು ಸಂದುನೋವ, ಕೈಕಾಲು ಬಚ್ಚುವದು, ಓಡುವಾಗ ಮತ್ತು ಎತ್ತರ ಸ್ಥಳದಲ್ಲಿ ಹತ್ತಿ ನಡೆಯುವಾಗ ಉಂಟಾಗುವ ಆಯಾಸ, ಶೋಫ (ಶರೀರ ಬೀಗುವದು) ಶರೀರ ಬಿಳೀ ವರ್ಣವಾಗುವದು, ನಾಲಿಗೆ ಒಣಗುವದು, ನಾಲಿಗೆಯ ರುಚಿ ಕೆಡುವದು. ನಾಲಿಗೆ ಕಹಿ ಆಗುವದು, ಅಹಾರ ಬೇಡವಾಗುವುದು, ಅಜೀರ್ಣ ಉಂಟಾಗುವುದು, ತಲೆ ತಿರುಗುವದು ಕಣ್ಣುಕತ್ತಲೆ ಬರುವದು, ಕಿವಿಯಲ್ಲಿ ಗುಂ ಎಂತ ಶಬ್ದ ಉಂಟಾಗುವದು, ಮೈ ಪಸೆ ಇಲ್ಲದೆ ಒಣಗಿ ಹೋಗುವದು, ಹೊಟ್ಟೆಯಲ್ಲಿ ಬೆಂಕಿ, ಎದೆ ಗಂಟ್ಲು ಸುಡುವುದು, ಮೂಲಬದ್ಧತೆಯಾಗಿ ಮೂಲವು ಬಹು ಗಟ್ಟಿಯಾಪ ಹಿಕ್ಕೆಗಳಂತಿರುವದು, ಆಲಸ್ಯ, ಕೆಲಸಮಾಡಲಿಕ್ಕೆ ಮನಸ್ಸಿಲ್ಲದಿರುವದು, ಅಲ್ಲದೆ ಇನ್ನೂ ಈ ರೋಗದಿಂದ ಉಂಟಾಗುವ ಬೇರೆ ವಿಕಾರಗಳಿಂದ ದೇಹಾಂತ್ಯದ ವರೇಗೆ ನರಳುತ್ತಿರುವವರು ದೇಹಾಂತ್ಯದ ವರೇಗೆ ತಮ್ಮ ದೇಹಾರೋಗ್ಯವನ್ನು ರಕ್ಷಿಸಿಕೊಂಡು, ನಿರೋಗಿಗಳಾಗಿ ಇರಬೇಕೆಂತ ಅಪೇಕ್ಷಿಸುವಹಾದರೆ ಈ ನಮ್ಮ ಸಚ್ಚಿದಾನಂದ ಚೂರ್ಣವನ್ನು ಸೇವಿಸಿರಿ.

ಅತ್ಯುತ್ತಮ ಗುಣಕಾರಿಯಾದ ಈ ಔಷಧವನ್ನು ಅಪೇಕ್ಷಿಸುವವರು 7 ಯಾ 15 ದಿವಸಕ್ಕೆ ಬೇಕಾಗುವ 1 ಯಾ 2 ತೊಲೆ ತರಿಸಿಕೊಂಡು ಸೇವಿಸಿ ಪರೀಕ್ಷಿಸಿರಿ. ಅಪ್ಪರಲ್ಲಿಯೇ ಗುಣಾಂಶ ಕಂಡುಬಂದರೆ, ನಾವು ಹೇಳುವ ವರೇಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ. ಅನುಮಾನ ಕಂಡರೆ, ರೋಗಿಗಳು ಖುದ್ದು ನಮ್ಮ ಔಷಧಾಲಯಕ್ಕೆ ಬಂದು ತಮ್ಮ ಊಟವ ಖರ್ಚು ತಾವೇ ನೋಡಿಕೊಂಡು, 15 ದಿವಸ ಯಾ 1 ತಿಂಗಳ ಔಷಧಿಯನ್ನು ಮುಂಗಡವಾಗಿ ಹಣ ಕೊಡದೆನೇ ಸೇವಿಸಿ ಗುಣಾವಗುಣ ಪರೀಕ್ಷಿಸಿರಿ.

ಅಪ್ಪರಲ್ಲಿ ಗುಣಾವಗುಣ ಕಂಡುಬಾರದಿದ್ದರೆ, ಸೇವಿಸಿದ ಔಷಧಿಯ ಕ್ರಯ ಕೊಡುವ ಅಗತ್ಯವಿಲ್ಲ. ಅಪ್ಪರಲ್ಲಿ ಗುಣಾಂಶ ಎಂತ ಕಂಡುಬಂದರೆ, ನಾವು ಪ್ರಥಮ ಕೊಟ್ಟ ಔಷಧಿಯ ಕ್ರಯ ತೆರಬೇಕಾಗುವದಲ್ಲದೆ, ಆನಂತರ ನಾವು ಹೇಳುವ ಸಮಯದ ವರೇಗೆ ಬೇಕಾಗುವ ಮದ್ದಿನ ಕ್ರಯಕೊಟ್ಟು ಸೇವಿಸಬೇಕಾಗುವದು.

ರೋಗಿಗಳು ತಮ್ಮಿಂದ ಕೈಲಾಗುವ ಕೆಲಸಗಳನ್ನು ಮಾಡುತ್ತಾ ಪಥ್ಯಾಪಥ್ಯದ ಭಯವಿಲ್ಲದೆ ಸೇವಿಸಿ ಗುಣಹೊಂದತಕ್ಕ ಸೇವನೆಗೆ ಹಿತಕರವಾದ ಕೈಕಂಡ ಔಷಧವಾಗಿರುತ್ತದೆ.

ಕ್ರಯ ತೊಲೆ 1ರ ಬರೇ 12 ಆಣೆ (0—12—0). ಒಂದು ತಿಂಗಳ ಔಷಧಿಗೆ ರೂ. 2—8—0.

# ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

THE POPULAR INSURANCE GUILD — HEAD OFFICE — MANGALORE

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ
ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—
ಭದ್ರತೆಯು ವಿಶ್ವಾಸಾರ್ಹ.

**ಯೋಗ್ಯ ಏಜಂಟರುಗಳಿಗೆ ಧಾರಾಳ ಕಮಿಶನ್.**

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

# THE BANK OF MANGALORE, LTD.,

**MANGALORE.**

ESTD. 1931.

**Head Office:-MANGALORE.** **Branch:-MUDABIDRI.**

Fixed Deposits:-4½% for 3 months
,, 5% ,, 6 ,,
,, 6% ,, 12 ,,
,, 6½% ,, 24 ,, & upwards.

Savings Bank Deposits:—4⅜% on daily balance.
Withdrawals by cheques.
Current A/C 2%—opened free of charge.
**We have various schemes for encouraging Thrift such as Cumulative Deposits, Recurring Savings Bank Deposits etc.**

## SAVE WHILE YOU CAN

**Your future demands a fund to draw upon in case of need:—**

## START NOW AT THIS BANK—

*Write for detailed Rules of Business sent free on request.*

# THE Bombay Life Assurance Co., Ltd.,

ESTD. 1908.

FIGURES THAT TELL

| Year. | Proposed Business. | Completed Business. |
|---|---|---|
| 1931 | Rs. 72,91,300 | Rs. 58,66,300. |
| 1932 | Rs. 75,69,500 | Rs. 63,54,500. |
| 1933 | Rs. 1,11,47,833 | Rs. 94,16,500. |
| 1934 | Rs. 1,25,50,250 | Rs. 1,04,33,750. |
| 1935 | Rs. 1,50,48,915 | Rs. 1,23,28,665. |

*Please consult for Agencies and Life Insurance Advice:—*

Messrs. KOCHIKAR BROTHERS, Branch Secretaries.

*OFFICES:*

Visveswarapuram Circle, BANGALORE CITY.
Soumyalayam, CALICUT.
Udipi, S.INDIA.
Mount Road, MADRAS.
"Gautam Nivas", Chaini Road Girgaum, BOMBAY, No. 4.
Car-Street, MANGALORE.

# Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

## THE PALAI CENTRAL BANK, LIMITED,

(INCORPORATED IN TRAVANCORE)

**Bunder Road,** **MANGALORE.**

London Agents: LLOYDS BANK, LIMITED.
New York ,, : NATIONAL CITY BANK OF NEW YORK.

ಇತ್ತೀಚೆಗೆ ಇಪ್ಪಿಯಲ್ಲಿ ವಿಮಾ ಉದ್ಯಮವನ್ನು ಪ್ರಾರಂಭಿಸಿ ವರ್ಷ ವರ್ಷ ಅಭಿವೃದ್ಧಿಯನ್ನು ತೋರಿಸುತ್ತಾ ಈಗ ಜೀವವಿಮೆಯನ್ನೂ ಕೈಕೊಂಡು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ

# ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ
**ಶ್ರೀಯುತ ಎಸ್. ಕೆ. ಹೊಸಮನಿ,** ಬಿ. ಎ., ಎಲ್.ಎಲ್. ಬಿ., ಎಂ. ಎಲ್. ಎ.,
ಮತ್ತು ಚೆಯರ್ಮ್ಯಾನ್
**ಶ್ರೀಯುತ ವಿ. ವಿ. ಹಾಲಭಾವಿ,** ಬಿ. ಎ., ಎಲ್.ಎಲ್. ಬಿ.,
ರಿಟಾಯರ್ಡ್ ಫಸ್ಟ್ ಕ್ಲಾಸ್ ಸಬ್ ಜಡ್ಜ್, ಧಾರವಾಡ
ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ ವ್ಯಾಪಾರ ಉದ್ಯೋಗಗಳನ್ನು ಬೆಳಿಸಲಿಚ್ಛಿಸುವ ಸ್ವದೇಶೀ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

**ಧಾರವಾಡ, ಬೆಳಗಾಂವ,** ಬಿಜಾಪುರ, **ಕಾರವಾರ,** ಬಳ್ಳಾರಿ, ರಾಯಚೂರ ಮತ್ತು ಮೈಸೂರ ಸ್ಟೇಟಿನಲ್ಲಿಯೂ, ಅಭಿಮಾನದಿಂದ ಕೆಲಸ ಮಾಡುವ **ಕುಶಲ** ಏಜಂಟರು **ಬೇಕಾಗಿದ್ದಾರೆ.**

ವಿಶೇಷ ಮಾಹಿತಿಯನ್ನು ಸಮಕ್ಷವು ಇಲ್ಲವೇ ಪತ್ರದ್ವಾರದಿಂದ ತಿಳಕೊಳ್ಳಬೇಕು.

*The Manager,*
**The Swaraj Banking & Insurance Co., Ltd., Dharwar.**

# Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

**Roofing Tiles, Ridges, Ventilators, Skylights, Flooring Tiles, Building Bricks, etc.**

They are hall marks of perfection—genuine in quality and superb in kind.

That is why we want you to insist on buying them.

**Buy only goods bearing our genuine Trade Marks & Names.**

## *Messrs. C. Abdurahiman & Coragappa,*

***MANGALORE.***

Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯು } 'ಕರ್ನಾಟಕ ವೈಭವ' { ಸ್ಥಾಪನಾ ೧೯೩೨. ವಿಜಾಪೂರ.

ಸಂಪಾದಕರು:—**ವೆಂಕಟರಾವ ನಾಯಕ,** ಎಂ. ಎ., ಎಲೆಲ್. ಬಿ., (ಕೆಲಕಾಲ ಕನ್ನಡ ಪ್ರೊಫೇಸರರು.)

ಇಡೀ ಕರ್ನಾಟಕದಲ್ಲಿ ನಲವತ್ತುಮೂರು ವರ್ಷಗಳಿಂದ ರಾಷ್ಟ್ರಸಭೆಯ ಸಂದೇಶವನ್ನು ಸಾರುತ್ತಿರುವ ವಯೋವೃದ್ಧ ವಾರಪತ್ರಿಕೆ ಇದೊಂದೇ. ವಿಷಯವೈವಿಧ್ಯ, ವಿಚಾರಪರಿಪ್ಲುತತೆ, ಬಗೆಯ ಬೆಡಗು, ಶೈಲಿಯ ಸೊಬಗು, ಸಾಹಿತ್ಯಸಮಾಲೋಚನೆ, ಖಂಡತುಂಡ ಮಾತು, ವಾರ್ತಾವರದಿ, ಕತೆ, ನಗೆಬರಹ ಇ.ಗಳನ್ನು ಓದಬೇಕಾಗಿದ್ದರೆ 'ಕರ್ನಾಟಕ ವೈಭವ'ವನ್ನೇ ತರಿಸಿರಿ. ವ್ಯಂಗ್ಯವಿನೋದದ ಬಗ್ಗಿಯಂತೂ 'ಅಪ್ಪಾ ಭಟ್ಟರ ಹೊತ್ತಿಗೆ'ಯು ಪ್ರಖ್ಯಾತವಾಗಿದೆ.

ಕ್ರೌ. ಆಕಾರದ ಸು. ೧೬ ಪುಟಗಳಿವೆ. ಪ್ರತಿ ವಾರ ಉದ್ಯೋಗವ್ಯವಸಾಯಗಳ ಸುದ್ದಿ ಬರುವುದು. ಜಾಹೀರಾತುದಾರರು ತಮ್ಮ ಸರಕುಗಳಿಗೆ ಕರ್ನಾಟಕದಲ್ಲಿ ಮನ್ನಣೆ ದೊರೆಯಬೇಕೆಂದು ಬಯಸುತ್ತಿದ್ದರೆ ಇದರಲ್ಲಿ ಪ್ರಕಟನೆಯನ್ನು ಹಾಕಬೇಕು.

ವ್ಯವಸ್ಥಾಪಕ,
ಕರ್ನಾಟಕ ವೈಭವ ಕಾರ್ಯಾಲಯ, ವಿಜಾಪೂರ.

# The Premier Bank of India, Ltd.,

## ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯ್ಹಾ, ಲಿಮಿಟೆಡ್,

ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಪ್ರಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಮಿ ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

ಎಸ್. ವಿ. ರಾವ್, ಡಿ. ಕೋವ್.,
ಮ್ಯಾನೇಜಿಂಗ್ ಡೈರೆಕ್ಟರ್.

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor: [illegible]